ಬೇರುಗಳಿಗೆ

# ಕೊಡಲಿ ಹಾಕುವುದು



## ಸ್ವ • ಹೊಟ್ಟೆಕಿಚ್ಚು • ಅಹಂಕಾರ • ದುರಿಚ್ಛೆ

ಆಶಿಷ್ ರಾಯ್‌ಚೂರ್

ದೇವರ ವಾಕ್ಯವು ರುಚಿಯಾದ ಜೇನು, ಪ್ರತಿದಿನವು ಸಂತೋಷಪಡಿಸುವ ರೊಟ್ಟಿ, ದಣಿವಾರಿಸುವ ಮಳೆ, ದಾರಿ ತೋರಿಸುವ ದೀಪಗಳಿಗೆ ಹೋಲಿಸಲ್ಪಟ್ಟರೂ ಅದು ಹೊಟ್ಟನ್ನು ಸುಡುವ ಬೆಂಕಿ, ತುಂಡುಗಳಾಗಿ ಕಲ್ಲನ್ನು ಒಡೆಯುವ ಸುತ್ತಿಗೆ ಮತ್ತು ಎರಡು ಕಡೆ ಹರಿತವಾದದ್ದು ಸಮನಾಗಿ ಶರೀರ ಮತ್ತು ಆತ್ಮವನ್ನು ಸೀಳಾಗಿ ವಿಂಗಡಿಸುವ ಕತ್ತಿ ಕೂಡ ಆಗಿದೆ ಎಂದು ಹೇಳುತ್ತದೆ. ನಮ್ಮ ಜೀವಿತಗಳಲ್ಲಿ ತೊಳೆಯಲ್ಪಡುವಿಕೆಯು ಬೇಕಾಗಿರುವ ಕ್ಷೇತ್ರಗಳಲ್ಲಿ ವಾಕ್ಯದ ಸುತ್ತಿಗೆ, ಬೆಂಕಿ ಮತ್ತು ಕತ್ತಿಗಳ ಶುದ್ಧೀಕರಿಸುವ ಸಂಯುಕ್ತ ಪರಿಣಾಮ ಇರಬೇಕು!

ದೇವರು ನಮ್ಮಲ್ಲಿ ಕಾರ್ಯಮಾಡದಂತೆ ಅನೇಕ ವಿಷಯಗಳು ತಡೆಹಿಡಿದಿರುತ್ತವೆ. ಇಂತಹ ಕ್ಷೇತ್ರಗಳೊಂದಿಗೆ ವ್ಯವಹರಿಸಬೇಕು.,

ಸ್ವ, ಹೊಟ್ಟೆಕಿಚ್ಚು, ಅಹಂಕಾರ ಮತ್ತು ದುರಿಚ್ಛೆ ಮುಂತಾದ ನಕಾರಾತ್ಮಕ ವಿಷಯಗಳು, ದೇವರು ನಮ್ಮಲ್ಲಿ ಕಾರ್ಯ ಮಾಡದಂತೆ ಅಡ್ಡಿಬರುತ್ತವೆ. ಯಾವಾಗ ಕರ್ತನಿಗೆ ಇಂತಹ ಮೂಲಗಳ ಬೇರಿಗೆ ಕೊಡಲಿ ಹಾಕಲು, ಮತ್ತು ನಮ್ಮ ಜೀವಿತಗಳಲ್ಲಿನ ಇಂತಹ ಕ್ಷೇತ್ರಗಳಿಗೆ ತೊಳೆಯಲ್ಪಡುವಿಕೆಯ ಕಾರ್ಯಕ್ಕೆ ಅವಕಾಶ ನೀಡುತ್ತೇವೋ ಆಗ ನಾವು ದೇವರಿಗೂ ಮತ್ತು ಒಬ್ಬರು ಇನ್ನೊಬ್ಬರಿಗೂ ಉತ್ತಮ ಜನರಾಗುತ್ತೇವೆ.

ಆಶಿಷ್ ರಾಯಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಮೇ 2012

ಕಾರ್ಯ ನಿರ್ವಾಹಕ ಸಂಪಾದಕರು/ಪ್ರಕಾಶನಗಳ ಮುಖ್ಯಸ್ಥರು: ವಾಲ್ಯೆಂಟೀನಾ ಹ್ಯೂರ್ಬರ್ಟ್
ಸಹಾಯಕ ಸಂಪಾದಕರು : ಆರತಿ ರೇಚೆಲ್ ಯೆಶಾಯ
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಥ್ ಡಿಸೈನ್ಸ್

Contact Information:
All Peoples Church & World Outreach
#75, Ist Floor, 14th Cross, Ist Block
R.T. Nagar, Bangalore 560 032
Karnataka, INDIA

Phone: +91-80-2354 4328, Extn. 35
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Laying the axe to the root)

# ಬೇರುಗಳಿಗೆ ಕೊಡಲಿ ಹಾಕುವುದು



# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | ಸ್ವದ ಬೇರಿಗೆ ಕೊಡಲಿ ಹಾಕುವುದು | 5 |
| 2. | ಹೊಟ್ಟೆಕಿಚ್ಚಿನ ಬೇರಿಗೆ ಕೊಡಲಿ ಹಾಕುವುದು | 29 |
| 3. | ಅಹಂಕಾರದ ಬೇರಿಗೆ ಕೊಡಲಿ ಹಾಕುವುದು | 49 |
| 4. | ದುರಿಚ್ಛೆಯ ಬೇರಿಗೆ ಕೊಡಲಿ ಹಾಕುವುದು | 75 |

# ಪೀಠಿಕೆ

**‘‘ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ ; ಒಳ್ಳೇ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು. ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕರೆಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು’’** (ಮತ್ತಾಯ 3:10-12)

ಸ್ನಾನಿಕನಾದ ಯೋಹಾನನು ಯೇಸುವಿನ ಭೂಲೋಕದ ಸೇವೆಯನ್ನು ಪರಿಚಯಿಸುವಾಗ, ಯೇಸುವು ಪವಿತ್ರಗೊಳಿಸುವ ಕಾರ್ಯ ಮಾಡಲು ಬಂದನು ಎಂದು ತಿಳಿಸಿದ್ದಾನೆ. ಒಳ್ಳೆ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು ಎಂಬ ಹೋಲಿಕೆಯ ಸಾಮ್ಯವನ್ನು ಸ್ನಾನಿಕನಾದ ಯೋಹಾನನು ಬಳಸಿದ್ದಾನೆ. ಅಲ್ಲದೆ ಗೋದಿಯಿಂದ ಹೊಟ್ಟನ್ನು ಬೇರೆ ಮಾಡುವುದನ್ನು ಕುರಿತು ಸಹ ಮಾತನಾಡುತ್ತಾನೆ. ಈ ಎರಡು ಸಾಮ್ಯಗಳು ಹಸನು ಮಾಡುವುದು, ಶುದ್ಧೀಕರಿಸುವುದನ್ನು ವಿಶ್ಲೇಷಿಸುತ್ತವೆ. ಮರಗಳ ಬೇರಿಗೆ ಕೊಡಲಿ ಹಾಕಿದೆ ಎಂಬುದು ಕೇವಲ ‘‘ಕೊಂಬೆಗಳನ್ನು ಮತ್ತು ಎಲೆಗಳನ್ನು ಕತ್ತರಿಸುವುದಲ್ಲ ಬದಲಾಗಿ ಬಹಳ ಆಳವಾಗಿರುವ ಕೆಲಸವಾಗಿದೆ ಅಂದರೆ ಮೂಲಕ್ಕೆ ಕೊಡಲಿ ಹಾಕುವುದು. ಅದೇ ರೀತಿ ಕ್ರಿಸ್ತನು ತೊಂದರೆಗಳ ಮೂಲದೊಟ್ಟಿಗೆ ವ್ಯವಹರಿಸಲು ಬಂದಿದ್ದಾನೆ. ಆತನು ಸಾಮಾನ್ಯವಾಗಿ ಕಣ್ಣಿಗೆ ಕಂಡುಬರದಿರುವ ತಳದಲ್ಲಿ ಅಡಗಿರುವ ಅಸತ್ಯವನ್ನು ಮತ್ತು ಗತಕಾಲದಲ್ಲಿ ತಲೆದೋರಿದ್ದರ ಪರಿಣಾಮಗಳ ಕುರಿತು ಚರ್ಚಿಸುತ್ತಾನೆ.

ಮತ್ತಾಯ 3:11 ರಲ್ಲಿರುವ ಪವಿತ್ರಾತ್ಮನ ಅದ್ಭುತ ದೀಕ್ಷಾಸ್ನಾನವನ್ನು ಒತ್ತಿ ಹೇಳುವಾಗ ವಚನ 11 ಅದು ಮೇಲಿನ ಮತ್ತು ಕೆಳಗಿನ ಎರಡು ವಚನಗಳ ಮಧ್ಯದಲ್ಲಿದ್ದು ಇದು ಯೇಸುವು ಮಾಡಲು ಬಂದಂತಹ ಶುದ್ಧೀಕರಿಸುವ ಕೆಲಸದ ಕುರಿತು ಮಾತನಾಡುತ್ತದೆ. ಆತನ ಬರೋಣದ ಘಟನೆಯು ಸಹ ‘‘ಮರದ ಬೇರಿಗೆ ಕೊಡಲಿ ಹಾಕಿ’’ ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಹಾಕುವುದರ ಸಮಯವನ್ನ ನಮ್ಮಲ್ಲಿ ಹಲವರು ಅಸಡ್ಡೆ ಮಾಡಿದ್ದಾರೆ. ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ವರಗಳು ಪ್ರದರ್ಶನಗೊಂಡಿರುವುದು, ಅನ್ಯ ಭಾಷೆಯಲ್ಲಿ ಮಾತನಾಡುವ ಅನುಭವಗಳು, ಪವಿತ್ರಾತ್ಮನ ದೀಕ್ಷಾಸ್ನಾನ ಇವುಗಳನ್ನು ನೋಡುವಾಗ ನಾವು ತುಂಬಾ ಸಂತೋಷ

ಪಡುತ್ತೇವೆ. ಆದರೆ ನಾವು ಪವಿತ್ರಾತ್ಮನ ಶುದ್ಧೀಕರಣ ಕಾರ್ಯಕ್ಕೆ ಅಷ್ಟು ಏಕಾಗ್ರತೆ ತೋರಿಸುವುದಿಲ್ಲ. ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ದೀಕ್ಷಾಸ್ನಾನವು, ಯೇಸುಕ್ರಿಸ್ತನ ಶುದ್ಧೀಕರಿಸುವ ಕೆಲಸದಿಂದ ಪ್ರಾರಂಭಿಸಿ ಮುಂದುವರೆಯುತ್ತದೆ. ನಮ್ಮಲ್ಲಿ ಅನೇಕರು ಕ್ರಿಸ್ತನ ಶುದ್ಧೀಕರಣ ಕೆಲಸಕ್ಕೆ ಅವಕಾಶಕೊಡದೇ, ಬರೀ ಆತ್ಮನ ದೀಕ್ಷಾಸ್ನಾನಕ್ಕೆ ಮನ ತೆರೆದಿದ್ದೇವೆ. ನಮ್ಮಲ್ಲಿ ಕರ್ತನು ಸಂಪೂರ್ಣ ಕೆಲಸ ಮಾಡಲು ಮನ ತೆರೆಯುವುದು ಬಹಳ ಪ್ರಾಮುಖ್ಯ.

ದೇವರ ವಾಕ್ಯವು, ಜೇನಿನ ರುಚಿಯಂತೆ, ಪ್ರತಿದಿನ ಸಂತೋಷದಿಂದ ಸೇವಿಸುವ ರೊಟ್ಟಿಯಂತೆ ತಂಪುಮಾಡುವ ಮಳೆಯಂತೆ, ಮಾರ್ಗ ತೋರಿಸುವ ದೀಪದಂತೆ, ಇದ್ದರೂ ಹೊಟ್ಟನ್ನು ಸುಡುವ ಬೆಂಕಿಯಂತೆ, ಕಲ್ಲನ್ನು ಒಡೆಯುವ ಸುತ್ತಿಗೆಯಂತೆ, ಭೇದಿಸುವ ಹರಿತವಾದ ಕತ್ತಿಯಂತೆ ಕೂಡ ಇದೆ. ಕ್ರೋಢೀಕರಿಸಿದ ಸುತ್ತಿಗೆ, ಬೆಂಕಿ ಮತ್ತು ಕತ್ತಿಯ ಪರಿಣಾಮವು ನಮ್ಮ ಜೀವಿತಗಳಲ್ಲಿ ಶುದ್ಧೀಕರಿಸುವ ಕಾರ್ಯ ಮತ್ತು ಇತರೆ ಕ್ಷೇತ್ರಗಳಲ್ಲಿ ತೊಳೆಯುವ ಕಾರ್ಯಕ್ಕೆ ಅವಕಾಶ ನೀಡಲು ಕೂಡ ಸಮರ್ಥವಾಗಿದೆ.

ಸತ್ಯವೇದವು ''ಅವರು ಹೊರಟುಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರಿದರು ; ಮತ್ತು ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕ ಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು'' ಎಂದು ಹೇಳುತ್ತದೆ. (ಮಾರ್ಕ 16:20) ಈ ವಾಕ್ಯದ ಆಧಾರದ ಮೇಲೆ, ನಾವು ಯಾವ ರೀತಿಯಲ್ಲಿ ನಿರ್ಲಕ್ಷದಿಂದ ಇದ್ದರೂ, ದೇವರು ನಮ್ಮಲ್ಲಿ ಕೆಲಸ ಮಾಡುತ್ತಾನೆಂಬ, ಅವಸರದ ತೀರ್ಮಾನ ಮಾಡುತ್ತೇವೆ. ದೇವರು ಯಾವುದೇ ನಿರ್ಬಂಧವಿಲ್ಲದೆ ನಮ್ಮಲ್ಲಿ ಕೆಲಸ ಮಾಡುತ್ತಾನೆಂಬುದು ಸತ್ಯ ಆದರೆ ನಮ್ಮ ಜೀವಿತಗಳಲ್ಲಿರುವ ಅನೇಕ ಸಂಗತಿಗಳು, ದೇವರು ನಮ್ಮಲ್ಲಿ ಕೆಲಸ ಮಾಡಲು ಅಡ್ಡಿಮಾಡುತ್ತವೆ. ನಮ್ಮ ಜೀವಿತಗಳಲ್ಲಿರುವ ಅನೇಕ ವಿಷಯಗಳು (ದೇವರ ಕೈ ಕಟ್ಟಿ ಹಿಡಿಯುತ್ತವೆ), ಆತನು ನಮ್ಮಲ್ಲಿ ಕಾರ್ಯಮಾಡದಂತೆ ಅಡ್ಡಿಪಡಿಸುತ್ತೇವೆ. ಅಂತಹ ವಿಷಯಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು.

ಸ್ವ (ಅಹಂ) ಹೊಟ್ಟೆಕಿಚ್ಚು, ಅಹಂಕಾರ ಮತ್ತು ದುರಿಚ್ಛೆ ಮುಂತಾದ ನಕಾರಾತ್ಮಕ ವಿಷಯಗಳು ದೇವರು ನಮ್ಮಲ್ಲಿ ಕೆಲಸ ಮಾಡದಂತೆ ತಡೆಹಿಡಿಯುತ್ತವೆ. ಇಂತಹ ನಕಾರಾತ್ಮಕ ಗುಣಗಳಿಗೆ, ದೇವರು ಕೊಡಲಿ ಹಾಕಲು: ಶುಚಿ ಮಾಡಲು, ಅವಕಾಶ ಕೊಟ್ಟರೆ ನಾವು ದೇವರ ದೃಷ್ಟಿಗೂ ಮತ್ತು ಇತರರೊಂದಿಗೂ ಉತ್ತಮ ಜನರಾಗುವೆವು.

# ಬೇರುಗಳಿಗೆ ಕೊಡಲಿ ಹಾಕುವುದು



ಸ್ವ • ಹೊಟ್ಟೆಕಿಚ್ಚು • ಅಹಂಕಾರ • ದುರಿಚ್ಛೆ

# 1

# ಸ್ವ ದ(ಅಹಂನ) ಬೇರಿನ ಮೂಲಕ್ಕೆ ಕೊಡಲಿ ಹಾಕುವುದು

ಅನೇಕ ಬಾರಿ ಕ್ರಿಸ್ತನನ್ನು ಮಹಿಮೆಪಡಿಸಬೇಕೆಂಬುದು ನಮ್ಮ ಸಂಪೂರ್ಣ ಹೃದಯದ ಬಯಕೆಯಾಗಿರುತ್ತದೆ. ಆದರೆ ನಮ್ಮ ಹೆಸರನ್ನು ಮೇಲೇರಿಸುವುದರಲ್ಲಿ, ಸ್ಥಾನಮಾನ, ಅಧಿಕಾರಗಳ ಆಶೆ, ಮತ್ತು ನಮ್ಮ ಪ್ರಭಾವ ಮುಂತಾದವುಗಳಿಂದ ಕಲುಷಿತಗೊಂಡಿರುತ್ತೇವೆ. ಅಥವಾ ನಮ್ಮಲ್ಲಿರುವ, ವರಗಳನ್ನು, ತಲಾಂತುಗಳನ್ನು ಯೋಗ್ಯತೆಗಳನ್ನು ಜನರು ಗುರ್ತಿಸಿ ಹೊಗಳಬೇಕೆಂಬುದು ಆಶೆಯಾಗಿರುತ್ತದೆ. ನಾವೇನಾದರೂ ಜಾಗರೂಕರಾಗದಿದ್ದರೆ, ನಮ್ಮ ಜೀವಿತದಲ್ಲಿ 'ಆತ್ಮ'ನ ಬದಲಾಗಿ 'ಸ್ವ' 'ನಾನು', ಅನ್ನುವ ಹಂತಕ್ಕೆ ಬರುತ್ತೇವೆ. ಪವಿತ್ರಾತ್ಮನು ಯಾವಾಗಲೂ ಕ್ರಿಸ್ತನನ್ನೇ ಮಹಿಮೆಪಡಿಸುವನು. (ಯೋಹಾನ 16:14). ಆದರೆ, 'ಅಹಂ', ಕ್ರಿಸ್ತನಿಗೆ ಸಲ್ಲಬೇಕಾದ ಮಹಿಮೆಯನ್ನು ಕದ್ದುಕೊಳ್ಳುತ್ತದೆ.

ನಾವು ಸಾಮಾನ್ಯವಾಗಿ ನಮ್ಮಲ್ಲಿ 'ಅಹಂ' ಪ್ರೇರೇಪಿಸುತ್ತಿದೆ ಎಂಬುದಾಗಿ ಸಾರ್ವಜನಿಕವಾಗಿ ಒಪ್ಪಿಕೊಳ್ಳದಿರುವುದು ಅಪಾಯಕಾರಿ ಸುಳ್ಳಾಗಿದೆ. ನಾವು ಪ್ರಾರ್ಥನೆ, ಉಪವಾಸ, ಆರಾಧನೆ ಮತ್ತು ಎಲ್ಲಾ ಒಳ್ಳೆಯ ಕೆಲಸಗಳನ್ನು ಮಾಡುವ ವಿಶ್ವಾಸಿಗಳಾಗಿರಬಹುದು. ಆದಾಗ್ಯೂ ನಾವೇನಾದರೂ ಹೃದಯಗಳ ಒಳಗೆ ಆಳವಾಗಿ ಅಥವಾ ನಮ್ಮ ಆತ್ಮಗಳ ಒಳಗಿರುವ ರಹಸ್ಯವಾದ ಸಂಗತಿಗಳನ್ನು, ದೇವರು ಪರೀಕ್ಷಿಸುವಂತೆ ಆಸ್ಪದ ನೀಡಿದರೆ, 'ಆತ್ಮ'ನಿಂದ ಮಾಡದೇ 'ಸ್ವ'ದಿಂದ ಮಾಡುವ ಕೆಲಸಗಳನ್ನು ಗುರ್ತಿಸುತ್ತೇವೆ. ನಮಗೆ ನಮ್ಮ ಸಾಮರ್ಥ್ಯ, 'ಅಹಂ'ನ ಕಾರ್ಯಗಳನ್ನು ಗುರುತಿಸುವುದು ಕಷ್ಟವಾದುದೇ.

ದೇಹದಿಂದ (ಅಹಂ) ಹುಟ್ಟಿದ್ದು ದೇಹವೇ (ಅಹಂ), ಆತ್ಮನಿಂದ ಹುಟ್ಟಿದ್ದು ಆತ್ಮವೇ (ಯೋಹಾನ 3:6). ಇವುಗಳಿಗೆ ಎರಡು ವಿಶಿಷ್ಟ ಉತ್ಪತ್ತಿಯಿದೆ. 'ಅಹಂ'ನಿಂದ ಹುಟ್ಟಿದ್ದು ಉತ್ತಮವಾಗಿ ರೂಪತಾಳಿದರೂ ಸಹ ಆತ್ಮನ ಕೆಲಸವಾಗಿ ರೂಪಾಂತರಿಸಲಾಗುವುದಿಲ್ಲ.

**''ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸತಕ್ಕದ್ದೇನೆಂದರೆ - ನೀವೂ ನಿಮ್ಮ ಸಂತತಿಯವರೂ ಈ ತೈಲವನ್ನು ನನ್ನ ಸೇವೆಗೆ ನೇಮಕವಾದ ಅಭಿಷೇಕ ತೈಲವೆಂದು ತಿಳಿದುಕೊಳ್ಳಬೇಕು. ಮೈಗೆ ಹಚ್ಚಿಕೊಳ್ಳುವದಕ್ಕೆ ಇದನ್ನು ಉಪಯೋಗಿಸಬಾರದು. ಇದರಲ್ಲಿರುವ ಜೀನಸುಗಳ ಮೇರೆಗೆ ಬೇರೆ ಕೆಲಸಕ್ಕೆ ತೈಲವನ್ನು ಮಾಡಲೇಬಾರದು, ಇದು ದೇವರ ವಸ್ತು; ಇದನ್ನು ಮೀಸಲೆಂದು ನೀವು ತಿಳಿದುಕೊಳ್ಳಬೇಕು. ಇದರಂತೆ ತೈಲವನ್ನು ಮಾಡುವವನಾಗಲಿ ಇದನ್ನು ಯಾಜಕನಲ್ಲದವನ ಮೇಲೆ ಹಚ್ಚುವವನಗಾಲಿ ತನ್ನ ಕುಲದಿಂದ ತೆಗೆದುಹಾಕಲ್ಪಡಬೇಕು ''** (ವಿಮೋಚನಕಾಂಡ 30:31-33).

ಪವಿತ್ರವಾದ ಅಭಿಷೇಕ ತೈಲವು, ಪವಿತ್ರಾತ್ಮನ ಪ್ರಸನ್ನತೆಯ ಮತ್ತು ಕಾರ್ಯದ ಸೂಚನೆಯಾಗಿದೆ, ಅದನ್ನು ಮೈಗೆ ಹಚ್ಚಬಾರದು ಮತ್ತು ಬೇರೆ ಕೆಲಸಗಳಿಗಾಗಿ ಅದನ್ನು ಮಾಡಲೇ ಬಾರದು. 'ಸ್ವ' ದಿಂದ ಹುಟ್ಟಿದ್ದನ್ನು ದೇವರು ಅಭಿಷೇಕಿಸುವುದಿಲ್ಲಾ ದೇಹದ ಬಲದಿಂದ, ಆತ್ಮನ ಕಾರ್ಯಗಳನ್ನು ಅಣಕಿಸುವುದು ಅಪಾಯಕಾರಿ. (ವಿಮೋಚನ ಕಾಂಡ 30:33).

ದೇಹದಿಂದ ಹುಟ್ಟಿದ್ದು ದೇಹವೇ (ಅಹಂ). ಶರೀರಭಾವಾಧೀನರು ದೇವರಿಗೆ ಮೆಚ್ಚಿಗೆಯಾಗಿರಲಾರರು. (ರೋಮಾಪುರ 8:8). ಎಂತಹ ಮಹಾ ಕೆಲಸವಾಗಿದ್ದರೂ ಶರೀರಭಾವದಿಂದ ಮಾಡಿದರೆ ದೇವರಿಗೆ ಮೆಚ್ಚಿಕೆಯಾಗಿರಲಾರದು. ಶರೀರ (ಅಹಂ), ಭಾವವನ್ನು ಬಿತ್ತುವವನು ದುರ್ವರ್ತನೆ ನಾಶನವನ್ನು ಕೊಯ್ಯುವನು. (ಗಲಾತ್ಯ 6:8)

ಶರೀರಭಾವದ ಕಾರ್ಯಗಳು ಶಾಶ್ವತವಾಗಿರುವುದಿಲ್ಲ. ಅಂದರೆ, ಕಟ್ಟಿಗೆ, ಹುಲ್ಲು ಅವುಗಳಿಂದ ಕಟ್ಟಿದವುಗಳು ಬೆಂಕಿಯಲ್ಲಿ ಶೋಧಿಸಲ್ಪಟ್ಟಾಗ ಉಳಿಯುವುದಿಲ್ಲ (1 ಕೊರಿಂಥ 3:12, 13).

ನಮ್ಮನ್ನು 'ಅಹಂ' ಪ್ರೇರಿಸಿದರೆ, ಅದು ಆತ್ಮನಿಂದ ನಡೆಸಿದುದಲ್ಲ, ಯಾಕೆಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ (ಗಲಾತ್ಯ 5:17). ಬದಲಾಗಿ ಪವಿತ್ರಾತ್ಮನಿಂದ ನಡೆಸಿಕೊಳ್ಳುವ ಕಾರ್ಯಗಳ ಮಾರ್ಗದರ್ಶನ ಪಡೆಯಬೇಕು. ಎಲ್ಲರೂ ನಮ್ಮ ಹದಯಗಳನ್ನು ತೆರೆದು, ಕರ್ತನು ನಮ್ಮ 'ಅಹಂ'ನ ಬೇರಿಗೆ ಕೊಡಲಿ ಹಾಕಲು ಅನುಮತಿ ಕೊಡಬೇಕು.

## ಸುವಾರ್ತಾ ಸೇವೆಯಲ್ಲಿನ ತಪ್ಪು ಪ್ರೇರಣೆಗಳು

**''ಕೆಲವರು ಹೊಟ್ಟೆಕಿಚ್ಚುಪಟ್ಟು, ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ ಬೇರೆ ಕೆಲವರು ಒಳ್ಳೇ ಭಾವದಿಂದ ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ. ಇವರಂತೂ ನಾನು ಸುವಾರ್ತೆಯ ವಿಷಯದಲ್ಲಿ ಉತ್ತರ**

**ಹೇಳುವದಕ್ಕೆ ಇಲ್ಲಿ ಬಿದ್ದಿರುತ್ತೇನೆಂದು ತಿಳಿದು ಪ್ರೀತಿಯಿಂದ ಪ್ರಸಿದ್ಧಿ ಪಡಿಸುತ್ತಾರೆ. ಆ ಬೇರೆ ತರದವರಾದರೋ ನಾನು ಬೇಡಿಬಿದ್ದಿರುವಾಗಲೂ ನನಗೆ ಸಂಕಟವನ್ನು ಎಬ್ಬಿಸಬೇಕೆಂದು ಯೋಚಿಸಿ ಕ್ರಿಸ್ತನನ್ನು ಯಥಾರ್ಥವಾಗಿ ಪ್ರಸಿದ್ದಿಪಡಿಸದ. ಕಕ್ಷಿಭಾವದಿಂದ ಪ್ರಸಿದ್ಧಿಪಡಿಸುತ್ತಾರೆ.** (ಫಿಲಿಪ್ಪಿ 1:15-17).

ಅಪೊಸ್ತಲನಾದ ಪೌಲನು ತಿಳಿಸುವುದೇನೆಂದರೆ, ಕ್ರೈಸ್ತರು ತಪ್ಪು ಪ್ರೇರಣೆಯಿಂದ ಒಳ್ಳೇ ಕೆಲಸಗಳನ್ನು ಮಾಡುವುದು ಸಾಧ್ಯ. ಪೌಲನು ಹೇಳುವುದೇನೆಂದರೆ ಕೆಲವರ ಹೊಟ್ಟೆಕಿಚ್ಚುಪಟ್ಟು, ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ ಬೇರೆ ಕೆಲವರು ಒಳ್ಳೇ ಭಾವದಿಂದ ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ.

**''ಸಭೆಗೆ ಕೆಲವು ಮಾತುಗಳನ್ನು ಬರೆದಿದ್ದೆನು; ಆದರೆ ಸಭೆಯವರಲ್ಲಿ ಪ್ರಮುಖನಾಗಬೇಕೆಂದಿರುವ ದಿಯೊತ್ರೇಫನು ನಮ್ಮ ಮಾತನ್ನು ಅಂಗೀಕರಿಸುವದಿಲ್ಲ''** (3 ಯೋಹಾನ 1:9).

ದಿಯೊತ್ರೇಫನು ಸಭೆಯುವರಲ್ಲಿ ಪ್ರಮುಖನಾಗಬೇಕೆಂದಿದ್ದವನು. ಪ್ರಾಮುಖ್ಯತೆಯ ಭಾವದಿಂದ ಕೂಡಿದವನಾಗಿದ್ದನು ಅವನು ಬೇರೆ ನಾಯಕರ ವಿರುದ್ಧವಾಗಿ ಹೊಟ್ಟೆಕಿಚ್ಚಿನ ಮಾತುಗಳನ್ನಾಡುವವನು. ಇವೂ ಸಾಲದೆ ತಾವು ಸಹೋದರರನ್ನು ಸೇರಿಸಿಕೊಳ್ಳಬೇಕೆಂದಿರುವವರಿಗೆ ಅಡ್ಡಿಮಾಡಿ ಅವರನ್ನು ಸಭೆಯೊಳಗಿಂದ ಬಹಿಷ್ಕರಿಸುವವನಾಗಿದ್ದನು. ಈತನು ''ನಾನು ಎಲ್ಲರಿಗೂ ಕಾಣಿಸಿಕೊಳ್ಳಬೇಕು'' ''ನಾನು ಎಲ್ಲರಿಗೂ ಗೊತ್ತಿರುವವನು'' ''ನಾನು ಅವರೆಲ್ಲರ ಮುಂದೆ ಪ್ರಮುಖನಾಗಿರಬೇಕು'' ''ನಾನು ನನ್ನ ಬಗ್ಗೆ ಎಲ್ಲೆಲ್ಲೂ ಕೇಳಲ್ಪಡುವವನಾಗಿರಬೇಕು'' ಎಂದು ಹೇಳುವ ವ್ಯಕ್ತಿಯಾಗಿದ್ದನು. ತಪ್ಪಾಗಿ ಪ್ರೇರಣೆ ಹೊಂದಿದವನಾಗಿರುವಾಗಲೂ ಸಹ ಆತ್ಮಿಕ ಕಾರ್ಯಗಳನ್ನು ಮಾಡಲು ಸಾಧ್ಯ. ನಾನು ಮಾಡುತ್ತಿರುವ ಕೆಲಸ ನನಗೆ ಸರಿಯಾಗಿ ಕಾಣಿಸುತ್ತದೆ ಅದ್ದರಿಂದ ಆ ಕೆಲಸ ಮಾಡುತ್ತಿದ್ದೇನೆ ಎಂಬುದಾಗಿ ನಮ್ಮನ್ನು ನಾವೇ ಸಮರ್ಥಿಸಿಕೊಳ್ಳಲಾಗುವುದಿಲ್ಲ. ನಾವು ಮಾಡುವ ಕೆಲಸಗಳ ಹಿಂದಿರುವ ಉದ್ದೇಶವನ್ನು ದೇವರು ಹುಡುಕುವವನಾಗಿದ್ದಾನೆ. ಅಂದರೆ ನಮ್ಮ ಹೃದಯಗಳ ಗುಪ್ತ ಭಾವವನ್ನು ಕರ್ತನು ಹುಡುಕುತ್ತಾನೆ.

**ದೇವರ ವಾಕ್ಯವನ್ನು ಕಲಬೆರಿಕೆ ಮಾಡುವವರಾದ ಹೆಚ್ಚು ಪಾಲಿನ ಜನರ ಹಾಗಿರದೆ ನಿಷ್ಕಪಟಿಗಳಾಗಿ ದೇವರಿಂದ ಉಪದೇಶ ಹೊಂದಿದವರಿಗೆ ತಕ್ಕ ಹಾಗೆ ಕ್ರಿಸ್ತನ ಅನ್ಯೋನ್ಯತೆಯಲ್ಲಿದ್ದುಕೊಂಡು ದೇವರ ಸಮಕ್ಷಮದಲ್ಲಿಯೇ ಮಾತಾಡುತ್ತೇವೆ''** (2 ಕೊರಿಂಥ 2:17).

ಪೌಲನು ಹೇಳುವುದೇನೆಂದರೆ, ಅನೇಕರು ದೇವರ ವಾಕ್ಯವನ್ನು ಕಲಬೆರಿಕೆ ಮಾಡುತ್ತಾರೆ 'ಕಲಬೆರಿಕೆ' ಪದದ ಅರ್ಥ ''ತಮ್ಮ ವೈಯಕ್ತಿಕ ಲಾಭಕ್ಕಾಗಿ ದೇವರ ವಾಕ್ಯವನ್ನು ಅಶುದ್ಧಗೊಳಿಸುವುದು'' ಅನೇಕ ಜನರು ತಮ್ಮ ವೈಯಕ್ತಿಕ ಲಾಭಕ್ಕಾಗಿ, ತಮ್ಮ ವೈಯಕ್ತಿಕ ಕಲುಷಿತ ವಿಚಾರಗಳಿಂದಲೂ ದೇವರ ವಾಕ್ಯವನ್ನು ಕಲಬೆರಿಕೆ ಮಾಡಿ ಪ್ರಸಂಗಿಸುತ್ತಾರೆ. ಪೌಲನ ಸಮಯದಲ್ಲೂ ಸಹ ಈ ಕಾರ್ಯ ಜರುಗಿತ್ತು. ನಮ್ಮ ಕಾಲದಲ್ಲೂ ಸಹ ಜರುಗಬಹುದು. ನಾವು ದೇವರ ವಾಕ್ಯ ಬೋಧಿಸುವಾಗ ನಮ್ಮ ಭಾವವನ್ನು ಕಾಯ್ದುಕೊಳ್ಳಬೇಕು. ಇದು ನನ್ನ ವೈಯಕ್ತಿಕ ಲಾಭಕ್ಕಾಗಿ ಮಾಡಿದೆನೋ? ಸ್ವಾರ್ಥ ಆಕಾಂಕ್ಷೆಯಿಂದ ಮಾಡಿದೆನೋ? ಪ್ರಾಮುಖ್ಯನಾಗಿರಲು ಮಾಡಿದೆನೋ ? ಎಂಬ ಪ್ರಶ್ನೆಗಳನ್ನು ನಮ್ಮೊಳಗೆ ಕೇಳಿಕೊಳ್ಳಬೇಕು.

| 'ಸ್ವ'ನಿಂದ ಜನಿಸಿದ್ದನ್ನು ದೇವರು ಅಭಿಷೇಕಿಸುವುದಿಲ್ಲ. |
|---|

## ಅಹಂನ (ಸ್ವ)ದ ಬೇರಿನ ಮೂಲದ ತೋರ್ಪಡಿಸುವಿಕೆ

ನಮ್ಮಲ್ಲಿ 'ಸ್ವ' ದ ಮೂಲವಿದೆ ಎಂಬುದಾಗಿ ಹೇಗೆ ಗೊತ್ತು? ಕೆಲವೊಮ್ಮೆ ಬಹುದಿನಗಳ ಉಪವಾಸ ಮತ್ತು ಪ್ರಾರ್ಥನೆಯಿಂದ ನನ್ನಲ್ಲಿರುವ 'ಅಹಂ' ಸಂಪೂರ್ಣವಾಗಿ ಸಾಯಲ್ಪಟ್ಟಿದೆ ಎಂದು ಗ್ರಹಿಸುತ್ತೇವೆ. ಕೆಲವು ಆತ್ಮಿಕ ಶಿಸ್ತುಗಳ ಪಾಲನೆಯನ್ನು ನಾವು ಮಾಡುತ್ತಿರುತ್ತೇವೆ. ಆದರೆ ಅಂತಹ ಆತ್ಮಿಕ ಶಿಸ್ತುಗಳು 'ಸ್ವ'ದ ಮೂಲವನ್ನು ನಿಜವಾಗಿಯೂ ಕಿತ್ತು ಹಾಕಿದೆಯೋ  ಎಂದು ತಿಳಿಯದೆ ಹೋಗುತ್ತೇವೆ.

'ಸ್ವ'ವನ್ನು ಪ್ರಕಟಿಸುವ ಕೆಲವು ಮೂಲಗಳನ್ನು ನೋಡೋಣ. ನಮ್ಮ ಮನೋವೃತ್ತಿಯನ್ನು ವ್ಯಕ್ತಪಡಿಸುವುದು, ಆಲೋಚನೆಗಳು ಅಥವಾ ನಡವಳಿಕೆಗಳು ಇವು ಅಹಂನಲ್ಲಿ ಅಡಗಿರುವ ಮೂಲಗಳು. ಇಂತಹ ತೋರ್ಪಡಿಸುವಿಕೆಯನ್ನು ನಮ್ಮ ಮನೋವೃತ್ತಿ, ಆಲೋಚನೆ  ನಡವಳಿಕೆಯಲ್ಲಿ ಇರುವುದನ್ನು ಗುರ್ತಿಸಿದರೆ, ಕರ್ತನು ಇಂತಹ ಗುಣದ ಬೇರಿಗೆ ಕೊಡಲಿ ಹಾಕುವಂತೆ ಕೇಳಿಕೊಳ್ಳಬೇಕು.

### ಸ್ವ-ಪದೋನ್ನತಿ : (ಮನುಷ್ಯರು ಇಷ್ಟಪಡಬೇಕು, ತಿಳಿಯಬೇಕೆಂಬ ಹಂಬಲ)

ಒಬ್ಬ ಕ್ರೈಸ್ತನು, ಅದ್ಭುತ ಗಾಯಕ ಅಥವಾ ಉತ್ತಮ ಸಂದೇಶಗಾರನೆಂದು ಜನರು ತಿಳಿದುಕೊಳ್ಳಬೇಕೆಂದು ಬಯಸುವುದೇ ಸ್ವ ಪದೋನ್ನತಿ. ಒಬ್ಬನು ಕೆಲಸ ಮಾಡುವುದರಲ್ಲಿ ಒಳ್ಳೆಯದಾಗಿರಬೇಕೆಂಬ ಆಶೆಗೂ ಒಳ್ಳೆಯದರ ಪ್ರಸಿದ್ಧಿ, ಹೆಸರು,

ಕೀರ್ತಿ ಗುರ್ತಿಸುವಿಕೆಗೂ ವ್ಯತ್ಯಾಸವಿದೆ. ನಾವು ಮಾಡುವ ಕೆಲಸಗಳನ್ನು ನಾವು ಏಕೆ ಮಾಡುತ್ತೆವೆ. ಯಾವುದು ನಮ್ಮನ್ನು ಮಾಡಲು ಪ್ರಚೋದಿಸುತ್ತದೆ? ಅನ್ನುವ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುತ್ತಿರಬೇಕು. ಇವು ಸಾಮಾನ್ಯ ಪ್ರಶ್ನೆಗಳು ಅನ್ನಿಸಬಹುದು, ಆದರೆ ಬಹಳ ಪ್ರಾಮುಖ್ಯವಾದವು. ಒಂದು ಸಭೆಯನ್ನು ಹೊಂದಿರುವ ಸಭಾಪಾಲಕನು ನನ್ನ ಸಭೆಯ ಸಭಿಕರ ಸಂಖ್ಯೆ ಹಲವು ಸಾವಿರಗಳಿರಬೇಕೆಂದು ಆಸೆಪಟ್ಟರೆ- ಈ ಪ್ರಶ್ನೆ ಕೇಳಿಕೊಳ್ಳಬೇಕು ''ನನಗೆ ನಿಜವಾಗಿಯೂ ಆತ್ಮಗಳ ರಕ್ಷಣೆಯಾಗಬೇಕೋ, ಅಥವಾ ನನ್ನ ಹೆಸರು ಪ್ರಖ್ಯಾತಿಗೆ ಬರಬೇಕು ಎಂಬುದು, ಅಡಗಿರುವ ಆಶೆಯೋ?- ಯಾರಿಗಾದರೂ ದೇವರ ವಾಕ್ಯ ಸಾರುವ ಆಶೆಯಿದ್ದರೆ- ''ನಿಜವಾಗಿಯೂ ನಾನು ಪ್ರಸಂಗಿಸುವ ವಾಕ್ಯವು ಜನರಿಗೆ ಲಾಭವಾಗತಕ್ಕದ್ದೋ, ಅಥವಾ ನಾನು ದೊಡ್ಡ ಸಂದೇಶಕ ಎಂಬ ಬಿರುದುಬೇಕೆಂಬ ಬಯಕೆಯೋ'' ಎಂಬ ಪ್ರಶ್ನೆ ಕೇಳಿಕೊಳ್ಳಬೇಕು. ಇಲ್ಲಿ ಅಡಗಿರುವ ವಿಷಯವು ಸ್ವ ಪದೋನ್ನತಿಯೋ ಅಥವಾ ಇದು ಯಥಾರ್ಥವಾಗಿ ಜನರಿಗೆ ಲಾಭವಾಗಬೇಕೆಂದೂ, ದೇವರಿಗೆ ಮಹಿಮೆಯುಂಟಾಗಬೇಕೆಂದೂ ಹಂಬಲವೋ ಎಂದು ಪರೀಕ್ಷಿಸಿಕೊಳ್ಳಬೇಕು.

**''ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವದಿಲ್ಲ. ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?''** (ಯೋಹಾನ 5:41, 44).

ಯೇಸುವು ಧಾರ್ಮಿಕ ನಾಯಕರುಗಳನ್ನು ಕುರಿತು ನೀವು ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಪೇಕ್ಷಿಸುತ್ತೀರಿ ಎಂದು ಹೇಳುತ್ತಿದ್ದಾನೆ. ಮನುಷ್ಯನಿಂದ ಉಂಟಾಗುವ ಮಾನವನ್ನು ಅಂಗೀಕರಿಸಲೊಲ್ಲದ ಕ್ರಿಸ್ತನ ಸ್ಥಾನಕ್ಕೆ ನಾವು ಬರಬೇಕು. ನಾವು ಪ್ರಾಮಾಣಿಕರಾಗಿದ್ದರೆ ಕೆಲವರು ಮಾತ್ರವೇ ಹೀಗಿದ್ದಾರೆ ಎಂದು ಹೇಳಬಹುದು!. ನಮ್ಮನ್ನು ಜನರು ಹೊಗಳಿದರೆ ಅದು ಬಹಳ ದಿನಗಳವರೆಗೆ ಉಳಿಯುವುದಿಲ್ಲ ಎಂದು ತಿಳಿಯಬೇಕು. ಬದಲಾಗಿ ನಾವು ದೇವರಿಂದ ಬರುವ ಮಾನವನ್ನ ಅಪೇಕ್ಷಿಸುವವರಾಗಿರಬೇಕು. ಮನುಷ್ಯರಿಂದ ಮಾನವನ್ನು ಅಪೇಕ್ಷಿಸದೇ, ಜನರ ಕೊರತೆಗಳನ್ನು ಸಂಧಿಸಲೂ, ದೇವರಿಗೆ ಮಹಿಮೆಯುಂಟಾಗಲೂ ಪ್ರಸಂಗಿಸುವ ಹಾಡುವ ಮತ್ತು ಸುವಾರ್ತಾ ಸೇವೆಯ ಕೆಲಸ ಮಾಡಬೇಕು. ನಾವು 'ಅಹಂ'ನಿಂದ ಸ್ವತಂತ್ರವಾಗಿ ನಡೆಯುತ್ತಿದ್ದೇವೆ ಎಂದು ನಮಗೆ ಗೊತ್ತಿದೆ. ಮನುಷ್ಯರು ಕೊಡುವ ಪದವಿಗಿಂತ ಪರಲೋಕದಿಂದ ಬರುವ ಹೊಗಳಿಕೆಯು ಬಹಳ ಅಮೂಲ್ಯವಾದುದು ಯಾವಾಗ ನಮ್ಮ ಅಭಿಲಾಷೆಯು ಮಾನವನಿಂದ ದೃಢೀಕರಿಸದೇ

ದೇವರಿಂದ ದೃಢೀಕರಿಸಲ್ಪಡುತ್ತದೊ, ಆಗ ನಮ್ಮ ಹೃದಯಗಳು ಪವಿತ್ರವಾಗಿರುತ್ತವೆ ಮತ್ತು 'ಅಹಂ'ನಿಂದ ಸ್ವತಂತ್ರವಾಗಿದ್ದೇವೆಂದು ತಿಳಿಯುತ್ತದೆ.

''**ಕಲ್ಪಿಸಿ ಹೇಳುವವನು ತನಗೆ ಮಾನ ಬರಬೇಕೆಂದು ಅಪೇಕ್ಷಿಸುತ್ತಾನೆ; ತನ್ನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು, ಅಧರ್ಮವು ಅವನಲ್ಲಿ ಇಲ್ಲ**'' (ಯೋಹಾನ 7:18).

ನಾವು ಅಪೇಕ್ಷಿಸುವ ಮಹಿಮೆ ದೇವರಿಗೋ ಅಥವಾ ನಮಗೋ? ಎಂಬ ಪ್ರಶ್ನೆಯನ್ನು ನಾವೇ ಕೇಳಿಕೊಳ್ಳಬೇಕು. ಸುವಾರ್ತಾ ಸೇವಕರಾಗಿ, ಸಭೆಗಳಾಗಿ, ಸೇವಾಸಂಸ್ಥೆಗಳಾಗಿ, ಕ್ರಿಸ್ತೀಯ ಸಂಘ ಸಂಸ್ಥೆಗಳಾಗಿ ನಾವು ಯಾವುದೇ ಘೋಷಣೆ ಅಥವಾ ಸ್ಥಳದ ಜಾಹಿರಾತು ಕೊಡುವಾಗ ನಮ್ಮನ್ನು ಮೇಲೇರಿಸಿಕೊಳ್ಳದಂತೆ, ಪ್ರವರ್ತಿಸಿಕೊಳ್ಳದಂತೆ ಜಾಗರೂಕರಾಗರಿಬೇಕು. ಆದರೆ ಕರ್ತನಾದ ಯೇಸುಕ್ರಿಸ್ತನನ್ನು ಮೇಲೇರಿಸಬೇಕು. ಹೆಸರುಗಳು ಗುರ್ತಿಸುವ ಉದ್ದೇಶಕ್ಕೂ ಮತ್ತು ಅನೇಕ ಕಾನೂನು ಉದ್ದೇಶಗಳಿಗೂ ಅವಶ್ಯಕ ಆದರೆ ನಮ್ಮನ್ನು ನಾವೇ ಮೇಲೇರಿಸಿಕೊಳ್ಳುವ ಉದ್ದೇಶಕ್ಕಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ನಾವು 'ಅಹಂ'ನಿಂದ ಮಾತಾಡುವಾಗ ನಮಗೆ ನಮ್ಮನ್ನು ನಾವೇ ಮನುಷ್ಯರ ಮುಂದೆ ಘನತೆಯನ್ನು, ಹೊಗಳಿಕೆಯನ್ನು ಬರುವಂತೆ ಮಾಡಿಕೊಳ್ಳುತ್ತೇವೆ ಮತ್ತು ನಮ್ಮ ಸ್ವಂತ ಮಹಿಮೆ ಅಥವಾ ಮಾನವನ್ನು ಬಯಸುತ್ತೇವೆ.

ನಾವು ಯಾವಾಗ ನಿಜವಾಗಿ ದೇವರಿಗೇ, ಆತನೊಬ್ಬನಿಗೇ ಮಹಿಮೆ ಉಂಟಾಗುವದನ್ನು ಹುಡುಕುತ್ತೇವೋ ಆಗ ನಮ್ಮ ಹೃದಯಗಳು ಪವಿತ್ರವಾಗಿರುತ್ತವೆ ಮತ್ತು ನಮ್ಮಲ್ಲಿ ಅನೀತಿ ಕಾಣಿಸುವುದಿಲ್ಲ.

''**ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ**'' (1 ಕೊರಿಂಥ 10:31).

ಸ್ವ-ಪದೋನ್ನತಿಯು ಈ ದಿನದಲ್ಲಿ ಕ್ರಿಸ್ತೀಯ ಸೇವೆಯಲ್ಲಿದವರಿಗೆ ಮಿತಿ ಮೀರಿದೆ. ಜನರು ಒಂದೇ ರಾತ್ರಿಯಲ್ಲಿ ಹೆಸರುಗಳಿಸಲು ಅಥವಾ ಸೇವಾ ಸಂಸ್ಥೆಯು ಹೆಸರು ಗಳಿಕೆಗೆ ಬರಬೇಕೆಂದು ಬಯಸುತ್ತಾರೆ. ಅಲ್ಲದೇ ಅನೇಕ ಸ್ವಾರ್ಥಪರರನ್ನು ಗಮನಿಸಬಹುದು, ಅಂದರೆ ಸೇವೆ ಮಾಡುವವರಲ್ಲಿಯೇ ಯಾರು ಹೆಚ್ಚು ಅಭಿಷೇಕ ಹೊಂದಿದವರು, ತಮ್ಮ ಸರಕುಗಳನ್ನು ಪ್ರವರ್ತಿಸಲು ಸುವಾರ್ತೆ ಸೇವೆ ಮಾಡುವುದು, ಮುಂತಾದ ಇನ್ನೂ ಅನೇಕ ಸಂಗತಿಗಳನ್ನು ಗುರ್ತಿಸಬಹುದು. 'ಅಹಂ' ಅನ್ನುವುದು

ಸಜೀವವಾದದು ಮತ್ತು ಪ್ರಬಲವಾದುದು. ಇದನ್ನು ತಡೆಯಲು ಮತ್ತು ನಮ್ಮ ಹೃದಯಗಳ ಪ್ರಚೋದನೆಯನ್ನು ಪ್ರಮಾಣಿಕವಾಗಿ ವಿಮರ್ಶಿಸುವುದು ಬಹಳ ಅವಶ್ಯ. ನಾವು ನಿಜವಾಗಿಯೂ ದೇವರಿಂದ ಬರುವ ಮಾನವನ್ನು ಅಪೇಕ್ಷಿಸುತ್ತಿದ್ದೇವೋ ಅಥವಾ 'ಅಹಂ'ನಿಂದ ಆವರಿಸಿ 'ಅಹಂ'ನಿಂದ ಪ್ರಚೋದಿಸಲ್ಪಟ್ಟಿದ್ದೇವೋ? ಆತ್ಮನ ಸಭ್ಯ ತಿದ್ದುಪಡಿಗೆ ನಮಗೆ ಸೂಕ್ಷ್ಮತೆ ಮತ್ತು ಸಮಯವಿದೆಯೋ? ನಾವು ಏನೇ ಮಾಡಿದರೂ ದೇವರಿಗೆ ಮಹಿಮೆಯುಂಟಾಗಲು ಮಾಡಬೇಕು.

**ಸ್ವಹಿತ: (ದೇವರಿಗಾಗಿ ಮಹತ್ಕಾರ್ಯಗಳನ್ನು ಮಾಡಿದ್ದನ್ನು ಗುರುತಿಸುವ ಬಯಕೆ)**

**''ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯ ದಯಾರಸಗಳು ಉಂಟಾಗುವವಾದರೆ ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ. ಪಕ್ಷಪಾತದಿಂದಾಗಲಿ ಒಣ ಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನ ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ''** (ಫಿಲಿಪ್ಪಿ 2:1-4)

ಪೌಲನು ಸ್ವಹಿತದಿಂದ ಯಾವುದನ್ನೂ ಮಾಡಬಾರದೆಂದು ಎಚ್ಚರಿಸುತ್ತಿದ್ದಾನೆ. ಸ್ವಹಿತದಿಂದ ಪ್ರಚೋದಿಸಲ್ಪಟ್ಟು ದೇವರ ಅನೇಕ ಕಾರ್ಯಗಳನ್ನು ಮಾಡಲು ಸಾಧ್ಯವಾಗಬಹುದು. ಸ್ವಹಿತವೆಂದರೆ 'ದೇವರಿಗಾಗಿ ಮಹತ್ಕಾರ್ಯಗಳನ್ನು ಮಾಡಿದವನು ಎಂದು ಗುರುತಿಸಬೇಕೆಂಬ ಬಯಕೆ ಎಂದು ಹೇಳಬಹುದು. ಪ್ರತಿಯೊಬ್ಬರಿಗೂ ದೇವರು ಮಹೋನ್ನತ ಯೋಜನೆಗಳನ್ನು ಇಟ್ಟುಕೊಂಡಿದ್ದಾನೆ. ಆತನ ರಾಜ್ಯವನ್ನು ಭೂಲೋಕದಲ್ಲಿ ಮುಂದುವರೆಸುವವರು ಆತನ ರಾಜ್ಯಕ್ಕಾಗಿ ಅಲುಗಾಡಿಸುವವರು ನಾವಾಗಿರಬೇಕೆಂದು ದೇವರು ಬಯಸುತ್ತಾನೆ.

ಈ ದೇವರ ರಾಜ್ಯದ ನಮ್ಮ ಎಲ್ಲಾ ಪ್ರಯತ್ನದಲ್ಲೂ, ಆತನ ಹೆಸರಿಗೆ ಬದಲಾಗಿ ನಾವು ಹೆಸರು ಮಾಡಬೇಕೆಂಬ ಪ್ರಚೋದನೆಗೆ ಒಳಗಾದರೆ, ನಾವು ಸ್ವಹಿತದಿಂದ ಪ್ರಚೋದಿಸಲ್ಪಟ್ಟಿದ್ದೇವೆ ಎಂದು ತಿಳಿಯಬೇಕು. ನಮ್ಮ ಪ್ರಚೋದನೆಯು ಜನಗಳ ಸೇವೆಯಲ್ಲಿ ಪ್ರಮಾಣಿಕವಾಗಿ ತೊಡಗಿದೆಯೋ, ನಾವು ಯಾರು, ನಮ್ಮ ಹೆಸರು ಜನರಿಗೆ ತಿಳಿದಿರಬೇಕು ಎಂದು ಲಕ್ಷಿಸದಿರುವುದು. ಕೊನೆಯಲ್ಲಿ 'ಅಹಂ'- ಏನಾದರೂ 'ಹೀರೋ' ಅಥವಾ 'ನಾಯಕ'ನಾದರೆ, ಅದು ಕ್ರಿಸ್ತ ಪ್ರೀತಿಯ ಬದಲು ಸ್ವಹಿತವನ್ನು ಪ್ರಚೋದಿಸಿದಂತೆ.

''ನನ್ನ ಕನಸುಗಳು ಮತ್ತು ದರ್ಶನಗಳಲ್ಲಿ ನಾಯಕನಾರು? ಎಂಬ ಮುಖ್ಯ ಪ್ರಶ್ನೆ ಕೇಳಿಕೊಳ್ಳಬೇಕು. ದೇವರೋ ಅಥವಾ ನಾನೋ? ''ನಾನು ಪ್ರಾರ್ಥಿಸಿದೆನು ಅವರಿಗೆ ಗುಣವಾಯಿತು'' ಎಂಬ ಸಾಕ್ಷಿ ನೀಡುವ ಜನರ ಬಗ್ಗೆ ಕೇಳುತ್ತಲೇ ಇದ್ದೇನೆ. ಗುಣಪಡಿಸಿದ 'ದೇವರನ್ನು ಬಿಟ್ಟು ನಾನು'' ಎಂಬುದಕ್ಕೆ ಪ್ರಾಧಾನ್ಯತೆ ಕೊಡುತ್ತೇವೆ. ಕರ್ತನಿಲ್ಲದೇ ನಮ್ಮ ಪ್ರಾರ್ಥನೆಗಳಿಂದ ಏನೂ ದೊರೆಯುವುದಿಲ್ಲ. ಈ ರೀತಿ ಮಹಿಮೆಪಡಿಸಿಕೊಳ್ಳುವ ವ್ಯಕ್ತಿಯು ಪ್ರಾರ್ಥನೆಗಳನ್ನು ಉತ್ತರಿಸಿದ ದೇವರಿಗಿಂತಲೂ, ತಾನು ಪ್ರಾರ್ಥಿಸಿದ ವ್ಯಕ್ತಿಯಾಗಿ ಕಾಣಿಸುತ್ತಾನೆ. ಒಂದು ದೊಡ್ಡ ಸುವಾರ್ತಾಕೂಟ ಮಾಡಬೇಕೆಂದು ಆಲೋಚಿಸಿದರೆ ನಮ್ಮ ಪ್ರೇರಣೆ, ಸ್ವಾರ್ಥ ಹಿತಚಿಂತನೆಯಿಂದ ಕೂಡಿದ್ದರೆ ದೇವರು ಆ ಮಹಾ ಸುವಾರ್ತಾ ಕೂಟದಿಂದ ಮೆಚ್ಚುವುದಿಲ್ಲ ಯಾಕೆಂದರೆ ಅದು ಶಾರೀರಿಕವಾಗಿರುವುದರಿಂದ ಕರ್ತನನ್ನು ಮೆಚ್ಚಿಸಲು ಸಾಧ್ಯವಿಲ್ಲ. ಇಂತಹ ದೊಡ್ಡ ಸುವಾರ್ತಾಕೂಟಗಳಿಂದ ಜನರು ದೇವರ ವಾಕ್ಯವನ್ನು ಪಡೆಯಬಹುದು, ನಂಬಬಹುದು, ಯಾಕೆಂದರೆ ದೇವರು ಯಾವಾಗಲೂ ತನ್ನ ವಾಕ್ಯವು ಕಾರ್ಯರೂಪಕ್ಕೆ ಬರುವುದರ ಬಗ್ಗೆ ಜಾಗರೂಕನಾಗಿರುತ್ತಾನೆ (ಯೆರೆಮೀಯ1:12). ನುಡಿಯಲ್ಪಟ್ಟ ಅಥವಾ ಹಂಚಲ್ಪಟ್ಟ ದೇವರ ವಾಕ್ಯದ ಪಾವಿತ್ರ್ಯತೆಯನ್ನು, ದೇವರು ಜನರ ಜೀವಿತಗಳಲ್ಲಿ ಸ್ಥಿರಗೊಳಿಸುತ್ತಾನೆ. ಹೇಗಿದ್ದರೂ ಆತನ ಮನಸ್ಸಿನಲ್ಲಿರದ, ಆತನ ಹೆಸರಿನ ನಿಮಿತ್ತ ಮಾಡಿದ ಅನೇಕ ಮಹತ್ಕಾರ್ಯಗಳಿಗಿಂತ ತಂದೆಯ ಚಿತ್ತವನ್ನು ನೆರವೇರಿಸುವುದು ಅತೀ ಪ್ರಧಾನವಾದುದು. (ಮತ್ತಾಯ 7:21-23).

ನಾವು 'ಅಹಂ'ನಿಂದ ಸ್ವತಂತ್ರವಾಗಿ ನಡೆಯುತ್ತಿದ್ದೇವೆ ಎಂದು ತಿಳಿದಾಗ ಮನುಷ್ಯರು ಕೊಡುವ ಪದವಿಗಿಂತ ಪರಲೋಕದಿಂದ ಬರುವ ಹೊಗಳಿಕೆಯು ಬಹಳ ಅಮೂಲ್ಯ ಎಂದು ತಿಳಿಯಬಹುದು. ಯಾವಾಗ ನಮ್ಮ ಅಭಿಲಾಷೆಯು ಮಾನವನಿಂದ ದೃಢೀಕರಿಸದೇ ದೇವರಿಂದ ದೃಢೀಕರಿಸಲ್ಪಡುತ್ತದೊ ಆಗ ನಮ್ಮ ಹೃದಯಗಳು ಪವಿತ್ರವಾಗಿರುತ್ತದೆ ಮತ್ತು 'ಅಹಂ' ನಿಂದ ಬಿಡುಗಡೆ ಹೊಂದಿದ್ದೇವೆ ಅಥವಾ ಸ್ವತಂತ್ರವಾಗಿದೆಯೆಂದು ತಿಳಿಯುತ್ತದೆ.

ಸ್ವಹಿತ ಅಥವಾ ಸ್ವಾರ್ಥ ಹಿತಚಿಂತನೆಯ ಪ್ರತಿರೋದಕದ ಕುರಿತು ಪೌಲನು ತಿಳಿಸುವುದೇನೆಂದರೆ, ತಗ್ಗಿದ ಮನಸ್ಸುವುಳ್ಳವರಾಗಿ, ಬೇರೆಯವರು ನಮಗಿಂತಲೂ ಶ್ರೇಷ್ಟರೆಂದೆಣಿಸಬೇಕು ಮತ್ತು ಅಭಿನಂದಿಸಬೇಕು. ನಾವು ಇತರರಿಗೆ ಹೆಚ್ಚು ಅಭಿಮಾನ

ತೋರಿಸಬೇಕು ಮತ್ತು ಅವರ ಆಸಕ್ತಿಗಳು - ಅವರ ಉಪಕಾರಗಳು ಅವರ ಕ್ಷೇಮ ಸುಖ ಮತ್ತು ಅವರ ಆಶೀರ್ವಾದಗಳನ್ನು ನೋಡುವವರಾಗಿರಬೇಕು.

## ಆತ್ಮವಿಶ್ವಾಸ-ಸ್ವಾವಲಂಬನೆ (ಪವಿತ್ರಾತ್ಮನ ಮೇಲೆ ಅವಲಂಬನೆಯಾಗುವುದರ ಬದಲು ಸ್ವ-ಅವಲಂಬನೆಯಾಗುವುದು)

**''ನಿಜವಾದ ಸುನ್ನತಿಯವರು ಯಾರಂದರೆ-ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರ ಸಂಬಂಧವಾದವುಗಳಲ್ಲಿ ಭರವಸೆವಿಲ್ಲದವರೂ ಆಗಿರುವ ನಾವೇ.''** (ಫಿಲಿಪ್ಪಿ 3:4)

**''ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರ ಸಂಬಂಧವಾಗಿ ಅರಿತುಕೊಳ್ಳುವುದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರ ಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳಿದುಕೊಳ್ಳುವುದಿಲ್ಲ''** (2 ಕೊರಿಂಥದವರಿಗೆ 5:16).

**''ಆದ ಕಾರಣ ಮನುಷ್ಯಮಾತ್ರದವರ ವಿಷಯದಲ್ಲಿ ಯಾರೂ ಹಿಗ್ಗದಿರಲಿ''** (1 ಕೊರಿಂಥದವರಿಗೆ 3:21).

ಆತ್ಮ ವಿಶ್ವಾಸವು ಕರ್ತನ ಬದಲಾಗಿ ನಮ್ಮ ಮೇಲೆ ಅಥವಾ ಬೇರೆಯವರ ಸಾಮರ್ಥ್ಯದ ಮೇಲೆ ಅವಲಂಬನೆಯಾಗುವುದು. ನಮ್ಮ ವಿದ್ಯಾಭ್ಯಾಸ, ಅನುಭವಗಳು, ಅರ್ಹತೆಗಳು ಮತ್ತು ಕೌಶಲ್ಯಗಳಿಂದ ನಿರ್ಣಯಿಸಿಕೊಳ್ಳುತ್ತೇವೆ. ''ದೇವರು ಸಹಾಯ ಮಾಡದಿದ್ದರೂ, ನಾನು ಈ ಕೆಲಸ ಮಾಡಿ ಮುಗಿಸುತ್ತೇನೆ'' ಎಂಬುದು ಸ್ವಂತ ಕೌಶಲ್ಯತೆಯ ಮೇಲೆ ದೃಢವಿಶ್ವಾಸ ಮತ್ತು ಮೈಮರೆತ ಯೋಚನೆ ಎಂಬುದಾಗಿ ತಿಳಿಯಬಹುದು. ಖಂಡಿತವಾಗಿ ನಾವು ಇದನ್ನು ಸೂಕ್ಷ್ಮವಾಗಿ ಗಮನಿಸುವುದಿಲ್ಲ! ಬದಲಾಗಿ ಸೂಕ್ತ ಆತ್ಮಿಕ ಹೇಳಿಕೆಗಳನ್ನು ಹೇಳುವ ಮೂಲಕ ನಮ್ಮ ಸ್ವಾವಲಂಬನೆಯನ್ನು ಮುಂಜಾಗ್ರತೆಯಿಂದ ಮರೆಯಲ್ಲಿ ಅಡಗಿಸಿಕೊಳ್ಳುತ್ತೇವೆ.

ಅಪೊಸ್ತಲನಾದ ಪೌಲನಂತೆ ನಾವು ಯಾರನ್ನೂ ಶರೀರ ಸಂಬಂಧವಾಗಿ ತಿಳಿಯದೇ ದೇವರಾತ್ಮನಿಂದ ಪ್ರೇರಿತರಾದವರರಾಗಿ ತಿಳಿಯಬೇಕು. ಜನರು ಸ್ವಾಭಾವಿಕವಾಗಿ ಯಾವ ರೀತಿ ಕಾಣಿಸುತ್ತಾರೆ ಮತ್ತು ಅವರು ಯಾವುದನ್ನು ಹೊಂದಿದ್ದಾರೆ ಎಂಬುದಾಗಿ ನಾವು ಮೌಲ್ಯೀಕರಿಸುವುದಿಲ್ಲ. ಕ್ರೈಸ್ತ ಪ್ರಪಂಚದಲ್ಲಿರುವ ಸಾಮಾನ್ಯ ಆಚರಣೆಯೆಂದರೆ, ''ಶರೀರ ಸಂಬಂಧವಾಗಿ'' ಜನರನ್ನು ತಿಳಿದುಕೊಳ್ಳಲು ಬಯಸುತ್ತೇವೆ. ಸಮಾಜದಲ್ಲಿ ವಿಶೇಷವಾಗಿ ಗೌರವ ಮಾನ, ಮರ್ಯಾದೆ ಹೊಂದಿದವರು ನಮ್ಮನ್ನು ಜೀವಿತದಲ್ಲಿ

ಮತ್ತು ಸೇವೆಯಲ್ಲಿ ಉನ್ನತ ಸ್ಥಿತಿಗೆ ತರುತ್ತಾರೆಂದು, ನಾವು ಅವರೊಂದಿಗೆ ಸಂಬಂಧ ಬೆಳಸಲು ತವಕಿಸುತ್ತೇವೆ.

ನಮ್ಮ ಭಾರತದ ಸಭೆಗಳಲ್ಲಿರುವ ಸಾಮಾನ್ಯ ವಿಷಯ ಇದಾಗಿದೆಯಲ್ಲವೆ? ನಾವು ವಿದೇಶಿಯರನ್ನು ಯಾವ ರೀತಿ ನೋಡುತ್ತೇವೆಂದರೆ ಅವರನ್ನು ಬಹಳವಾಗಿ ಮೆಚ್ಚಿಸಿ, ಆಧಾರ ಪೀಠಗಳಾಗಿ ಮಾಡಿ ಅವರಿಂದ ಅವರ ಸಂಪರ್ಕ ವಿವರಣೆಗಳನ್ನ ಶೀಘ್ರವಾಗಿ ಪಡೆದುಕೊಳ್ಳುತ್ತೇವೆ! ವಿದೇಶಿಯರ ಸಂಪರ್ಕಗಳು ನಮಗೆ ಹೊರದೇಶಗಳಿಗೆ ಹೋಗಲು ಅವಕಾಶ ಕಲ್ಪಿಸಿಕೊಡುತ್ತದೆಂಬ ರಹಸ್ಯ ನೀರಿಕ್ಷೆಯನ್ನು ಇಟ್ಟುಕೊಳ್ಳುತ್ತೇವೆ. ನಮ್ಮಲ್ಲಿ ಅನೇಕರು ಕೆಲವು ಇಂತಹ ವಿಷಯುಗಳನ್ನು ಮಾಡುವುದರಲ್ಲಿ ದೋಷಿಗಳಾಗುತ್ತೇವೆ.

ಆದರೆ ಪೌಲನು ಶರೀರ ಸಂಬಂಧವಾಗಿ ಜನರನ್ನು ಅರಿತುಕೊಳ್ಳಬಾರದೆಂದು ಎಚ್ಚರಿಸುತ್ತಾನೆ. ನಾವು ಎಲ್ಲರನ್ನು ಸಮಾನವಾಗಿ ನೋಡಬೇಕು- ರಾಷ್ಟ್ರೀಯತೆ, ಸ್ಥಾನಮಾನ, ಚರ್ಮದ ಬಣ್ಣಗಳು ಮುಂತಾದವುಗಳ ಮೇಲೆ ಕೇಂದ್ರಿಕೃತವಾಗಿ ನೋಡದೆ ಎಲ್ಲರನ್ನು ಸಮಾನವಾಗಿ ನೋಡಬೇಕು. ಇಂತಹ ಶರೀರ ಸಂಬಂಧಗಳನ್ನು ದೇವರು ತನ್ನ ದೈವಿಕ ಸಂಬಂಧಕ್ಕೆ ತರದೇ, ನಾವು ವೈಯಕ್ತಿಕ ಒಳಿತಿಗಾಗಿ ಅವರನ್ನು ಹುಡುಕುತ್ತಾ ಹೋದರೆ ನಾವು ಸ್ವ-ಅವಲಂಬನೆಯ ಕ್ಷೇತ್ರದಲ್ಲಿರುತ್ತೇವೆ. ಅಂದರೆ ನಮ್ಮ ಸ್ವಂತ ಅಥವಾ ಬೇರೆ ವ್ಯಕ್ತಿಗಳ ಯೋಗ್ಯತೆಗಳ ಮೇಲೆ ಅವಲಂಬಿಸಿರುತ್ತೇವೆ. ಇದು 'ಶರೀರ' ಸಂಬಂಧವಾದುದು ಮತ್ತು ದೇವರನ್ನು ಮೆಚ್ಚಿಸುವುದಿಲ್ಲ.

**''ನೀವು ನನ್ನಲ್ಲಿ ನೆಲೆಗೊಂಡಿರ್ರಿ ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು, ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲ ಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ ನೀವು ಕೊಂಬೆಗಳು ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು, ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ''** (ಯೋಹಾನ 15:4, 5)

ಕರ್ತನು ನಮ್ಮೊಂದಿಗಿಲ್ಲದಿದ್ದರೆ, ನಾವು ಏನೂ ಮಾಡಲು ಆಗುವುದಿಲ್ಲ. ನಮ್ಮ ಅಸಮರ್ಥತೆಯಲ್ಲ. ಖಂಡಿತವಾಗಿ ಅನೇಕರು ತಮ್ಮ ಸ್ವಂತ ಸಾಮರ್ಥ್ಯದಿಂದ ಅನೇಕ ಸಂಗತಿಗಳನ್ನು ಪೂರ್ಣಗೊಳಿಸುವುದು ಸಾಧ್ಯವೆ. ಹೀಗಿದ್ದರೂ ಕ್ರಿಸ್ತನಿಲ್ಲದೇ, ನಾವು ದೇವರ ದೃಷ್ಠಿಯಲ್ಲಿ ಪ್ರಾಮುಖ್ಯವಾದ ಮತ್ತು ನಿತ್ಯತ್ವಕ್ಕೂ ಸ್ಥಿರವಾಗಿರುವ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ.

**ಸ್ವಪಾಲನೆ - (ಆತ್ಮರಕ್ಷೆ) (ಜೀವವು ತನಗೆ ಅತಿ ಪ್ರಿಯವಾದುದೆಂದು ಯೋಚಿಸುವುದು)**

ಪ್ರತಿಯೊಬ್ಬರಲ್ಲೂ ಸ್ವಸಂರಕ್ಷಣೆಯ ಸಹಜ ಗುಣವಿರುತ್ತದೆ ಅದನ್ನು ದೇವರು ಕೊಟ್ಟಿರುವುದು ಮತ್ತು ಅಗತ್ಯವಾದುದು. ನಾವು ಬೀದಿಗಳಲ್ಲಿ ಗೊತ್ತುಗುರಿಯಿಲ್ಲದೆ ಓಡುವುದಿಲ್ಲ, ಮಹಡಿಯ ಮೇಲಿಂದ ಜಿಗಿಯುವುದಿಲ್ಲ ಯಾಕೆಂದರೆ ನಮ್ಮ ಸ್ವಂತ ಜೀವಿತ ಬಹಳ ಪ್ರಾಮುಖ್ಯ ಹೀಗಿದ್ದರೂ ಅವಿಧೇಯತೆಯಿಂದ ನಮ್ಮನ್ನು ದೇವರಿಂದ ದೂರವಿಡುವ ಸ್ವ-ಸಂರಕ್ಷಣೆಯು ಒಳ್ಳೆಯದಲ್ಲಾ, ನಮ್ಮ ಜೀವಿತಗಳಲ್ಲಿ ದೇವರ ಕರೆಯ ವಿಧೇಯತೆಗೆ, ಆದ್ಯತೆ ನೀಡದೇ ಸ್ವ-ಪಾಲನೆಗೆ ಆದ್ಯತೆ ಕೊಟ್ಟರೆ ನಾವು ಆತ್ಮಿಕವಾಗಿ ಅಪಾಯಕಾರಿ ಸ್ಥಿತಿಯಲ್ಲಿರುತ್ತೇವೆ. ಇದು 'ಅಹಂ'ನ ತೋರ್ಪಡಿಸುವಿಕೆಯ ಮೂಲವಾಗಿರುತ್ತದೆ ಮತ್ತು ಇದನ್ನು ನಾಶಪಡಿಸಿ ದೇವರಿಗೆ ವಿಧೇಯರಾಗುವ ಬದಲು ಸ್ವಂತ ವ್ಯಯದಿಂದ ಒಬ್ಬನು ಜೀವಿತ, ಐಶ್ವರ್ಯ, ಪ್ರತಿಷ್ಠೆ ಗೌರವವನ್ನು ಸಂಪಾದಿಸಬೇಕೆಂದು ಬಯಸಿದರೆ, ಅವನಲ್ಲಿ ಇನ್ನೂ 'ಅಹಂ' ಪ್ರಬಲವಾಗಿದೆ ಎಂದು ಗುರುತಿಸಬಹುದು ಮತ್ತು ಅದನ್ನು ದೂರಮಾಡಲು ಪ್ರಯತ್ನಿಸಬೇಕು.

**''ಇಗೋ, ನಾನು ಈಗ ಆತ್ಮನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭವಿಸುವದೋ ನಾನರಿಯೆ. ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡಿವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ; ಇಷ್ಟು ಮಾತ್ರ ಬಲ್ಲೆನು. ಆದರೆ ಪ್ರಾಣ ಉಳಿಸಿಕೊಳ್ಳುವದೇ ವಿಶೇಷವೆಂದು ನಾನು ಎಣಿಸುವುದಿಲ್ಲ. ದೇವರ ಕೃಪೆಯ ವಿಷಯವಾದ ಸುವಾರ್ತೆಯನ್ನು ಆಸಕ್ತಿಯಿಂದ ಪ್ರಕಟಿಸಬೇಕೆಂಬುದಾಗಿ ಕರ್ತನಾದ ಯೇಸುವಿನಿಂದ ನಾನು ಹೊಂದಿರುವ ಸೇವೆಯೆಂಬ ಓಟವನ್ನು ಕಡೆಗಾಣಿಸುವದೊಂದೇ ನನ್ನ ಅಪೇಕ್ಷೆ.** (ಅಪೊಸ್ತಲರ ಕೃತ್ಯಗಳು 20:22-24).

ಉದಾಹರಣೆಗೆ, ಕರ್ತನನ್ನು ಪ್ರೀತಿಸುವ, ಬೆಂಗಳೂರು ಪಟ್ಟಣದ ಒಬ್ಬ ಯೌವನಸ್ಥನನ್ನು ಕುರಿತು ಆಲೋಚಿಸುವ ಈ ಯೌವನಸ್ಥನಿಗೆ ಅಮೆರಿಕಾಕ್ಕೆ ಹೋಗಲು ಅವಕಾಶ ಸಿಗುತ್ತದೆ. ಅಲ್ಲಿ ಒಳ್ಳೆಯ ವಿದ್ಯಾಭ್ಯಾಸ ಮತ್ತು ಉತ್ತಮ ಜೀವನ ವೃತ್ತಿ, ಒಳ್ಳೆಯ ಕೆಲಸ, ವಾಸಿಸಲು ಸುಂದರ ಸ್ಥಳ, ಮದುವೆಯಾಗುವ ತವಕ, ಮತ್ತು ಅಲ್ಲಿಯೇ ನೆಲೆಯೂರಲು ಅವಕಾಶ ದೊರೆಯುತ್ತದೆ. ಭಾರತದಲ್ಲಿರುವ ಅವನ ತಂದೆ ತಾಯಿ ಮತ್ತು ಅಜ್ಜ - ಅಜ್ಜಿಯುವರು ತಮ್ಮ ಮಗನ ಸಾಧನೆಯ ಬಗ್ಗೆ ಹೆಮ್ಮೆಯುಳ್ಳವರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ದೇವರು ಅವನನ್ನು ತನ್ನ ರಾಜ್ಯದ ಕೆಲಸಕ್ಕಾಗಿ ಭಾರತದ ಯಾವುದಾದರೂ ಸ್ಥಳಕ್ಕೆ ಹಿಂತಿರುಗುವಂತೆ ನಡೆಸುತ್ತಿದ್ದಾನೆ ಎಂಬುದನ್ನು ಅರಿತ ಈ ಯೌವನಸ್ಥನು ಅವನ ಜೀವನದ ಪ್ರಾಮುಖ್ಯ ಹಂತದಲ್ಲಿದ್ದಾನೆ

ಎಂದು ತಿಳಿಯಬಹುದು. ಅವನೇ ಕರ್ತನ ವಾಕ್ಯಕ್ಕೆ ವಿಧೇಯನಾಗಲೂ ಅಥವಾ ನನ್ನ ಸ್ವಂತ ಇಚ್ಛೆಗನುಸಾರ ನಡೆಯಲೋ ಎಂದು ತೀರ್ಮಾನಿಸಬೇಕು. ಒಳ್ಳೆಯ ಕೆಲಸ, ಜೀವಿತದಲ್ಲಿ ಇದೊಂದೆ ಉತ್ತಮ ಅವಕಾಶ ಅಂದುಕೊಂಡು ಅಮೆರಿಕಾದಲ್ಲೇ ಉಳಿಯಲು ತೀರ್ಮಾನಿಸಿದರೆ ಅವನು ಸ್ವ-ಸಂರಕ್ಷಣೆಯ ನಿಮಿತ್ತ ಕರ್ತನ ಮಾತಿಗೆ ಅವಿಧೇಯನಾದಂತೆ. ಅಮೇರಿಕಾದಲ್ಲಿ ತನಗಿರುವ ಸ್ಥಾನಮಾನ, ಘನತೆ, ಗೌರವ, ಸಾಧನೆ, ಯಶಸ್ಸು, ಕೀರ್ತಿ, ನೆಮ್ಮದಿ ಎಲ್ಲವನ್ನು ತೊರೆದು ದೇವರ ಮಾತಿಗೆ ವಿಧೇಯನಾಗಿ, ಕರೆದಾತನ ಕಾರ್ಯವನ್ನು ಮಾಡಲು ಹಿಂತಿರುಗಿದರೆ, ಇಲ್ಲಿ 'ಅಹಂ'- ಅಥವಾ 'ಸ್ವ' ಅನ್ನುವುದು ಸಾಯುತ್ತದೆ. ಈ ಕಾರ್ಯದಿಂದ ದೇವರು ಅತ್ಯಂತ ಸಂತೋಷಪಡುತ್ತಾನೆ!.

**''ನಿಮಗೆ ನಿಜವಾಗಿ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವುದು; ಸತ್ತರೆ ಬಹಳ ಫಲ ಕೊಡುವುದು ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನು ನಿತ್ಯ ಜೀವನಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು''** (ಯೋಹಾನ 12 : 24, 25).

'ಸ್ವ ಸಂರಕ್ಷಣೆ'-ಎಂದರೆ ನಮ್ಮ ಸ್ವಂತ ಜೀವಿತ - ನಮ್ಮನ್ನು ನಾವೇ ಪಾಲನೆ ಮಾಡಿಕೊಳ್ಳುವುದು. ನಾವು ಇದನ್ನು ಮಾಡುವಾಗ, ನಾವು ಏಕಾಂಗಿಯಾಗಿ ನೆಲೆಗೊಳ್ಳುತ್ತೇವೆ. ಸ್ವ-ರಕ್ಷೆಯು, ಕರ್ತನು ನಮ್ಮ ಜೀವಿತಗಳಲ್ಲಿ ಇಚ್ಚಿಸುವ ಫಲದಾಯಕ ಮತ್ತು ಅಭಿವೃದ್ಧಿಯ ಕಾರ್ಯಗಳಿಗೆ ಅಡ್ಡಿಯನ್ನುಂಟು ಮಾಡುತ್ತದೆ. ದೇವರಿಗೆ ಅವಿಧೇಯರಾಗಿ ನಮ್ಮ ಸ್ವಸಂರಕ್ಷಣೆ ಮಾಡುವ ಇಷ್ಟವುಳ್ಳವರಾಗಿದ್ದರೆ, ಇದು ನಮ್ಮನ್ನು ದೇವರ ರಾಜ್ಯಕ್ಕೆ ಫಲಕಾರಿಯಾಗದೆಯೂ, ಅಭಿವೃದ್ಧಿ ತಾರದವರಾಗುವಂತೆಯು ಮಾಡುತ್ತದೆ. ನಾವು 'ಅಹಂ'' ಅಥವಾ 'ಸ್ವ'-ಇಂತಹ ಗುಣವನ್ನು ಸಾಯಿಸಿದರೆ ಮಾತ್ರ ಫಲಭರಿತರಾಗುತ್ತೇವೆ.

ಉದಾಹರಣೆ, ಕ್ರಿಸ್ತೀಯ ಸೇವೆಯಲ್ಲಿ, ದೇವರಿಂದ ಅತ್ಯದ್ಭುತವಾಗಿ ಉಪಯೋಗಿಸಲ್ಪಡಬೇಕಾದರೆ, ನಮ್ಮ ಪ್ರತಿಷ್ಟೆ ಗೌರವಗಳನ್ನು ತೊರೆಯಬೇಕು. ಅವುಗಳಿಗೆ ಸಾಯಬೇಕು. ಪ್ರತಿ ಸಮಯದಲ್ಲೂ ನಾವು ಆತ್ಮನಿಗೆ ಶರಣಾಗಿ, ಪ್ರವಾದನೆಗಳ ಸಮೃದ್ಧಿ ಪವಿತ್ರಾತ್ಮನ ವರಗಳನ್ನು ಹೊಂದಿಕೊಂಡು ಜೀವಿಸುತ್ತಿದ್ದರೆ, ನಾವು 'ಅಹಂ' ಅಥವಾ 'ಸ್ವ'ವನ್ನು ಸಾಯಿಸುತ್ತಿದ್ದೇವೆ ಎಂದರ್ಥ. ನಾವು ಸಂಪೂರ್ಣವಾಗಿ ಪವಿತ್ರಾತ್ಮನ ಮೇಲೆ ಆದರಿಸದೆ ಏನಾದರೂ ತಪ್ಪು ಮಾಡಿದ ನಿಮಿತ್ತ

ನಮ್ಮ ಗೌರವ ಪ್ರತಿಷ್ಠೆಯನ್ನು ತೊರೆಯದೆ ಇದ್ದರೆ ನಾವು ಅಪಾಯದ ಅಂಚಿನಲ್ಲಿದ್ದೇವೆ. ಹೇಗಿದ್ದರೂ 'ಅಹಂ'ನ್ನು ಬಿಟ್ಟು ಪವಿತ್ರಾತ್ಮನಿಂದ ತುಂಬಿ ಮುಂದುವರೆಯಲು ನಂಬಿಕೆ ಬೇಕು. ನಮ್ಮಲ್ಲಿ ಪವಿತ್ರಾತ್ಮನ ವರಗಳು ತುಂಬಿ ಹರಿಯಬೇಕಾದರೆ, ದೇವ ಜನರ ಕೊರತೆಗಳನ್ನು ಸಂಧಿಸಲು ಸೇವೆ ಮಾಡಬೇಕಾದರೆ ನಂಬಿಕೆ ಬೇಕು. ಆತ್ಮನಲ್ಲಿ ತುಂಬಿ ಹೊರಸೂಸಬೇಕಾದರೆ 'ಅಹಂ' ಅಥವಾ 'ಸ್ವ'ವನ್ನು ಬಿಡುವುದು ಅಗತ್ಯ. ಸ್ವ ಸುರಕ್ಷತೆಯ ಪ್ರವೃತ್ತಿಯ, ಪರಿಣಾಮವಾಗಿ ನಮ್ಮಲ್ಲಿ ಪವಿತ್ರಾತ್ಮನು ಮಾಡಲು ಇಚ್ಛಿಸುವ ಕಾರ್ಯಗಳನ್ನು ಮಿತಿಗೊಳಿಸುತ್ತದೆ.

> ನಾವು 'ಅಹಂ'ನಿಂದ ಮಾತಾಡುವಾಗ, ನಮ್ಮ ಘನತೆ, ಗೌರವವನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತೇವೆ. ಮತ್ತು ಮನುಷ್ಯನಿಂದ ಹೊಗಳಿಕೆಯನ್ನ ಕೋರುತ್ತೇವೆ, ನಮ್ಮ ಸ್ವಂತ ಕೀರ್ತಿ ಅಥವಾ ಮಹಿಮೆಯನ್ನು ಹುಡುಕುತ್ತೇವೆ. ನಾವು ಯಾವಾಗ ನಿಜವಾಗಿ ದೇವರನ್ನು ಮಹಿಮೆಪಡಿಸಲು ಮತ್ತು ಆತನನ್ನೇ ಮಹಿಮೆ ಪಡಿಸಲು ಬಯಸುತ್ತೇವೊ, ಆಗ ನಮ್ಮ ಹೃದಯಗಳು ಪವಿತ್ರವಾಗಿರುತ್ತವೆ ಮತ್ತು ಅನೀತಿಯು ನಮ್ಮಲ್ಲಿ ಕಂಡು ಬರುವುದಿಲ್ಲ.

**ತನ್ನನ್ನು ತಗ್ಗಿಸಿಕೊಳ್ಳುವಿಕೆ**

ಅಹಂ ಅಥವಾ ಸ್ವ-ನ ಮತ್ತೊಂದು ತೋರ್ಪಡಿಸುವಿಕೆಯೆಂದರೆ ತನ್ನನ್ನು ತಗ್ಗಿಸಿಕೊಳ್ಳುವಿಕೆ ಇದು ಹಿಂದೆ ನಾವು ತಿಳಿಸಿದ 'ಅಹಂ'ನ ತೋರ್ಪಡಿಸುವಿಕೆಗಿಂತ ಸ್ವಲ್ಪ ವಿರುದ್ಧವಾಗಿದೆ. ದೀನತೆ ಬಹಳವಾಗಿ ಅವಶ್ಯಕ. ಹೇಗಾದರೂ, ದೀನತೆಯ ಸ್ವರೂಪವು, ಸತ್ಯ ನಮ್ರತೆಯನ್ನು ಹೋಲುತ್ತದೆ, ಆದರೆ ಅದು 'ಅಹಂ'ನಿಂದ ಜನಿಸಿರುತ್ತದೆ. ನಾವು ಇದನ್ನು 'ಸ್ವ-ದೀನತೆ' ತಮ್ಮನ್ನೇ ತಾವೇ ತಗ್ಗಿಸಿ ನೋಡಿಕೊಳ್ಳುವ ಭಾವವೆಂದು ಕರೆದಿದ್ದೇವೆ. ಇಂತಹವರು, ಅವರನ್ನವರೇ, ಕೀಳಾಗಿ ನೋಡುವುದು, ಬಡವರಾಗಿರುವುದು, ಕೀಳರಿಮೆ ಮುಂತಾದ ಮಾತುಗಳಿಂದ ತುಂಬಿದವರಾಗಿರುತ್ತಾರೆ. ಅವರು ಅದು ಒಳ್ಳೆಯದೆಂದು ಅಭಿಪ್ರಾಯ ಪಡುತ್ತಾರೆ. ಇಂತಹ ದೀನತೆಯಿಂದ ದೇವರು ತಮ್ಮನ್ನು ಅಂಗೀಕರಿಸುತ್ತಾನೆಂದು ಭಾವಿಸುತ್ತಾರೆ ! ಉದಾಹರಣೆಗೆ ನಾವು ಹಾಡಿದಂತಹ ಹಾಡಿಗೆ ಹೊಗಳಿಕೆ ಬಂದರೆ, ಅದನ್ನು ನಾವು ಅಂಗೀಕರಿಸಿ, ಕರ್ತನಿಗೆ ಮಹಿಮೆ ಸಲ್ಲಿಸಬೇಕು. ಬದಲಾಗಿ ಇನ್ನು ಸರಿಯಾಗಿ ಹಾಡಬಹುದಿತ್ತು ಎಂದು ನಿರಾಕರಿಸುವುದು ಇಂತಹ ದೀನತೆಯು ತಪ್ಪು ದೀನತೆಯಾಗಿದೆ ಮತ್ತು ಅಹಂ ಅಥವಾ

'ಸ್ವಂ'ದಿಂದ ಆವೃತವಾಗಿದೆ. ಹೊಗಳಿಕೆಯನ್ನು ಅಂಗೀಕರಿಸಿ ದೇವರಿಗೆ ಮಹಿಮೆ ಸಲ್ಲಿಸಿದರೆ ಅದು ಸರಿಯಾದ ವರ್ತನೆಯಾಗಿ ತೋರಿ ಬರುತ್ತದೆ.

**ನಮ್ಮಿಂದಲೇ ಏನಾದರೂ ಉಂಟಾಯಿತೆಂದು ತೀರ್ಮಾನಿಸಿಕೊಳ್ಳುವದಕ್ಕೆ ನಮ್ಮಷ್ಟಕ್ಕೆ ನಾವೇ ಸಮರ್ಥರೆಂತಲ್ಲ, ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು** (2 ಕೊರಿಂಥದವರಿಗೆ 3:5).

**''ನಿಮಗೆ ಜ್ಞಾಪಕಕೊಡಬೇಕೆಂದು ಅಲ್ಲಲ್ಲಿ ಹೆಚ್ಚಾದ ಧೈರ್ಯದಿಂದ ಬರೆದಿದ್ದೇನೆ. ಯಾಕೆಂದರೆ ನಾನು ಅನ್ಯಜನರಿಗೋಸ್ಕರ ಯೇಸುಕ್ರಿಸ್ತನ ಸೇವಕನಾಗುವದಕ್ಕೆ ನನಗೆ ದೇವರ ಅನುಗ್ರಹವಾಯಿತು. ನಾನು ದೇವರ ಸುವಾರ್ತೆಯ ಸೇವೆಯನ್ನು ಯಾಜಕ ಸೇವೆ ಎಂಬಂತೆ ನಡಿಸಿ ಅನ್ಯದೇಶಸ್ಥರೆಂಬ ಕಾಣಿಕೆಯು ಪವಿತ್ರಾತ್ಮನ ಮೂಲಕವಾಗಿ ಪವಿತ್ರವಾಗಿದ್ದು ದೇವರಿಗೆ ಸಮರ್ಪಕವಾಗುವಂತೆ ಯತ್ನೈಸುವವನಾಗಿದ್ದೇನೆ. ದೇವರ ಸೇವೆಯಲ್ಲಿ ಹೊಗಳಿಕೊಳ್ಳುವುದಕ್ಕೆ ಕ್ರಿಸ್ತ ಯೇಸುವಿನಲ್ಲಿ ನನಗೆ ಕಾರಣವುಂಟು. ಕ್ರಿಸ್ತನು ಅನ್ಯಜನಗಳನ್ನು ತನಗೆ ಅಧೀನಮಾಡಿಕೊಳ್ಳುವದಕ್ಕಾಗಿ ನನ್ನ ಕೈಯಿಂದ ಮಾತಿನಲ್ಲಿಯೂ ಕ್ರಿಯೆಯಲ್ಲಿಯೂ ಸೂಚಕಕಾರ್ಯ ಅದ್ಭುತ ಕಾರ್ಯಗಳ ಬಲದಿಂದಲೂ ಪವಿತ್ರಾತ್ಮನ ಬಲದಿಂದಲೂ ಮಾಡಿಸಿದ ಕಾರ್ಯಗಳನ್ನೇ ಹೊರತು ಬೇರೆ ಯಾವ ಕಾರ್ಯಗಳನ್ನೂ ಹೇಳುವದಕ್ಕೆ ನನಗೆ ಧೈರ್ಯಸಾಲದು. ನಾನು ಯರೂಸಲೇಮ್ ಮೊದಲುಗೊಂಡು ಇಲ್ಲುರಿಕ ಸೀಮೆಯ ಪರ್ಯಂತರಕ್ಕೂ ಸುತ್ತಿ ಕ್ರಿಸ್ತನ ಸುವಾರ್ತೆಯ ಸಾರೋಣವನ್ನು ನೆರವೇರಿಸಿದ್ದೇನೆ''** (ರೋಮಾಪುರದವರಿಗೆ 15:15-19)

ನಮಗೆ ಅನುಕೂಲತೆಗಳು ದೇವರಿಂದ ಬಂದಿವೆ ಎಂಬ ಅರಿವುಂಟಾಗಬೇಕು, ನಾವು ನಟನೆ (ಸುಳ್ಳು) ತೋರಿಸಬಾರದು ಯಾಕೆಂದರೆ ದೇವರಿಂದ ನಮಗೆ ಕೊಡಲ್ಪಟ್ಟ ಮೂಲಗಳು, ವರಗಳು, ಕರೆ, ಅರ್ಹತೆ ಮತ್ತು ಸೇವೆಗಳನ್ನು ಅಂಗೀಕರಿಸುವದರಲ್ಲಿ ಸೋಲುತ್ತೇವೆ. ಪೌಲನು ಧೈರ್ಯದಿಂದ ಮಾತಾಡಿದ ವ್ಯಕ್ತಿ ಮತ್ತು ದೇವರ ಸುವಾರ್ತೆಯ ಸೇವೆಗೆ ಕರೆಯಲ್ಪಟ್ಟಿದ್ದನೆಂದು ಚೆನ್ನಾಗಿ ತಿಳಿದಿದ್ದನು. ಪೌಲನು ಇಲ್ಲಿ ಕರ್ತನು, ತನ್ನ ಮೂಲಕ ಮಾಡಿಸಿದ ಕಾರ್ಯಗಳಿಗೆ 'ಹೆಮ್ಮೆ' ಪಡುತ್ತಾನೆ. ಪೌಲನು, ಸುಳ್ಳು ತೋರಿಕೆಯ ಸ್ವ-ದೀನತೆಯಲ್ಲಿ ನಡೆಯಲಿಲ್ಲ.

ಮೋಶೆಯು ಎರಡು ವಿರುದ್ಧ ತೀವ್ರತೆಗಳ ಮನುಷ್ಯನಾಗಿದ್ದನು. ಮೊದಲು ಪ್ರಾರಂಭಿಸಿದಾಗ ಅವನು ಅತಿರೇಕವಾದ ಸ್ವ-ಭರವಸೆಯ ವ್ಯಕ್ತಿಯಾಗಿದ್ದನು. ಫರೋಹನ ಅರಮನೆಯಲ್ಲಿ ತರಬೇತಿ ಹೊಂದಿದವನಾದನು ಮೋಶೆಯು'' ಐಗುಪ್ತರ ಬಂಧನದಿಂದ ಇಬ್ರಿಯರನ್ನು ಬಿಡಿಸಬೇಕೆಂದು ದೇವರು ತನ್ನನ್ನು ಎಬ್ಬಿಸಿದ್ದಾನೆಂದು ತಿಳಿದುಕೊಂಡಾಗ, ಅವನು ಸ್ವಂತವಾಗಿ ಕಾರ್ಯ ಪೂರೈಸಬಹುದೆಂದು ಆಲೋಚಿಸಿದ್ದನು. ಸ್ವ-ಭರವಸೆ ಮತ್ತು ಅವನ 'ಅಹಂ' ಅಥವಾ ಸ್ವ-ಆತುಕೊಂಡವನಾಗಿ ಹೊರಟನು. (ಅಪೊಸ್ತಲರ ಕೃತ್ಯ 7:22-25) ದೇವರು ಅದರ

ಬಗ್ಗೆ ವ್ಯವಹರಿಸಿದನು, ಮತ್ತು ಮೋಶೆಯು ಮರುಭೂಮಿಯಲ್ಲಿ ಉಳಿಯಬೇಕಾಯಿತು. ನಲ್ವತ್ತು ವರುಷ ತುಂಬಿದ ಮೇಲೆ ಆತನು 'ಸ್ವ-ಹೀನೈಸು'ವವನಾದನು. ಅಂದರೆ ದೇವರು ಕರೆದು ನೇಮಿಸಿದ ಕೆಲಸ ಮಾಡಲು ಮನಸ್ಸಿಲ್ಲದೇ ಕಾರಣಗಳನ್ನು ಹೇಳುವವನಾದನು. ಸ್ವಾಮೀ, ಈ ಕಾರ್ಯಕ್ಕೆ ಬೇರೊಬ್ಬನನ್ನು ನೇಮಿಸಬೇಕು ಎನ್ನಲು ಯೆಹೋವನು ಅವನ ಮೇಲೆ ಕೋಪಗೊಂಡನು. (ವಿಮೋಚನಕಾಂಡ 4:13, 14)

ಹಲವು ಸಮಯಗಳಲ್ಲಿ ನಮ್ಮ ತೋರಿಕೆಯ ಅಥವಾ ಕಪಟ ದೀನತೆಯು, ದೇವರು ಕೋಪಗೊಳ್ಳುವಂತೆ ಮಾಡುತ್ತದೆ. ನಾವು ತುಂಬಾ ತಗ್ಗಿಸಿಕೊಂಡಿದ್ದೆವೆಂದು ನೆನಸುತ್ತೇವೆ ಆದರೆ ಅದು ದೇವರನ್ನು ಕೆರಳಿಸುವಿಕೆಯಲ್ಲಿ ಕೊನೆಗೊಳ್ಳುತ್ತದೆ. ದೇವರು ನಮಗೆ ಕೊಟ್ಟಿರುವ ಯಾವುದರಲ್ಲೂ, ಮಿಥ್ಯ ಅಥವಾ ಕಪಟ ತೋರಿಕೆಯ ದೀನತೆಯಲ್ಲಿ ನಡೆಯುವುದಿಲ್ಲವೆಂದು ಒಪ್ಪಿಕೊಳ್ಳಬೇಕು. ಸ್ವ-ಮುಖಭಾವದ ಬೇರಿಗೆ ಕೊಡಲಿ ಹಾಕಿರಿ, ಮತ್ತು ದೇವರಲ್ಲಿ ಭರವಸೆಯುಳ್ಳವರಾಗಿರಿ!

## 'ಅಹಂ'ನ ನಾಶನ ಅಥವಾ 'ಸ್ವ'ಕ್ಕೆ ಸಾಯುವುದು - ಅಪೊಸ್ತಲನಾದ ಪೌಲನ ಸಾಕ್ಷಿ

**''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ''** (ಗಲಾತ್ಯದವರಿಗೆ 2:20).

**''ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ''** (ಫಿಲಿಪ್ಪಿಯವರಿಗೆ 1:21).

**''ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ.** (ಫಿಲಿಪ್ಪಿಯವರಿಗೆ 3:7).

**''ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು''** (2 ಕೊರಿಂಥದವರಿಗೆ 5:14, 15).

ಕ್ರೈಸ್ತರಾಗಿ, ನಾವು 'ಅಹಂ' ಅಥವಾ 'ನಾನು' ಅನ್ನುತ್ತಾ ನಾವು ಇನ್ನು ಬದುಕಲಾಗದು. ನಮ್ಮನ್ನು ಪ್ರೀತಿಸಿ, ಪ್ರಾಣಕೊಟ್ಟವನಿಗಾಗಿ ಜೀವಿಸುವವರಾಗಿದ್ದೇವೆ.

''ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ'' ಅಂದರೆ 'ಅಹಂ' ಅಥವಾ 'ಸ್ವ'-ಸ್ವಾರ್ಥ ಇಚ್ಛೆಗಳು, ಸ್ವಾರ್ಥ ಆಕಾಂಕ್ಷೆ, ಸ್ವ-ಪದನ್ನೋತಿ, ಸ್ವ-ಸಂರಕ್ಷಣೆ ಮುಂತಾದವುಗಳನ್ನು ವಿಸರ್ಜಿಸಲು ಸಿದ್ಧರಿರಬೇಕು. ಕರ್ತನು ನಮ್ಮಿಂದ ಮಾಡಬೇಕಾದ ಕಾರ್ಯಗಳನ್ನು ನಾವು ಮಾಡುವವರಾಗಿರಬೇಕು.

**''ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ನಿಮ್ಮನ್ನು ಕುರಿತು ನನಗಿರುವ ಹೆಚ್ಚಳದ ಮೇಲೆ ಆಣೆ ಇಟ್ಟು ನಾನು ದಿನಾಲು ಸಾಯುತ್ತಲಿದ್ದೇನೆ ಎಂದು ಹೇಳುತ್ತೇನೆ. ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯಾದ್ಧ ಮಾಡಿದ್ದು ಕೇವಲ ಮಾನುಷಾಭಿಪ್ರಾಯ ದಿಂದಾದರೆ ನನಗೇನು ಪ್ರಯೋಜನ? ಸತ್ತವರು ಎದ್ದು ಬರುವದಿಲ್ಲವಾದರೆ - ತಿನ್ನೋಣ, ಕುಡಿಯೋಣ, ನಾಳೆ ಸಾಯುತ್ತೇವೆಲ್ಲಾ.''** (1 ಕೊರಿಂಥದವರಿಗೆ 15:31, 32).

ಪಾಲನು ಹೇಳಿದ್ದು, ''ನಾನು ದಿನಾಲು ಸಾಯುತ್ತಲಿದ್ದೇನೆ'' ಅವನು ಶಿಲುಬೆಗೆ ಹಾಕಲ್ಪಟ್ಟ ಜೀವನ ನಡೆಸಿದನು. ಅವನ ಹಿಂಸಕರಿಂದ, ಪ್ರತಿದಿನವು ಅಪಾಯವಿತ್ತು ಮತ್ತು ಮರಣಕ್ಕೆ ಪ್ರತಿದಿನವು ಸಮೀಪಿಸುತ್ತಿದ್ದುದು ಸತ್ಯವಾದುದು. ಆದಾಗ್ಯೂ ಶಿಲುಬೆಗೆ ಹಾಕಲ್ಪಟ್ಟವನಂತೆ ಜೀವಿಸಿದನು. 'ಅಹಂ'ಗೆ ಸಾವು ಅನ್ನುವುದು ಒಂದು ಸಲದ ಘಟನೆಯಲ್ಲ. ನಾವು ಪ್ರತಿದಿನ ಶಿಲುಬೆ ಹೊತ್ತವರಾಗಿರಬೇಕು (ಲೂಕ 9:23) ಯಾಕೆಂದರೆ ಇದನ್ನು ಮಾಡದಿದ್ದರೆ, ನಾವು ಕ್ರಿಸ್ತನ ಶಿಷ್ಯರಾಗಲು ಸಾಧ್ಯವಿಲ್ಲ. (ಲೂಕ 14:27).

> ನಮ್ಮ ಸ್ವ ಸಂರಕ್ಷಣೆಯ ಇಚ್ಛೆಯು - ದೇವರಿಗೆ ವಿಧೇಯರಾಗುವ ಬದಲು ನಮ್ಮ ಜೀವಿತಗಳನ್ನು ಸಂರಕ್ಷಿಸಿಕೊಂಡರೆ - ಇದು ದೇವರ ರಾಜ್ಯದಲ್ಲಿಲ್ಲದೆ ಇರುವುದರಿಂದ ನಾವು ಫಲಕಾರಿಯಾಗಿಯೂ, ಅಭಿವೃದ್ಧಿಕರವಾಗಿಯೂ ಇರುವುದರಿಂದ ನಮ್ಮನ್ನು ದೂರ ಇರಿಸುತ್ತದೆ.

ಶಿಲುಬೆಯನ್ನು ಹೊತ್ತುಕೊಳ್ಳುವುದರ ಅರ್ಥವೇನು? ಹಲವು ಬಾರಿ ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಎಂಬುದರ ಕುರಿತು ಮಾತಾಡುವಾಗ, ಇಹಲೋಕವನ್ನು ತ್ಯಜಿಸಿ, ಸನ್ಯಾಸಿಯಾಗಿ ಜೀವಿಸುವವನ ಚಿತ್ರವನ್ನು ಚಿತ್ರಿಸುತ್ತಾರೆ. ಆದರೆ ''ಶಿಲುಬೆಯನ್ನು ಹೊತ್ತುಕೊಂಡು'' ಅನ್ನುವುದು ಬಾಹ್ಯತೋರಿಕೆಗಿಂತ ಆಂತರಿಕವಾಗಿ

ಏನಾಗಿದ್ದೇವೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಶಿಲುಬೆಯು ಮರಣದ ಸ್ಥಳವಾಗಿದೆ - ''ಅಹಂ''ಗೆ ಮರಣವಾಗಿದೆ. ಒಬ್ಬನು ಗುಡಿಸಲಿನಲ್ಲಿ, ಶಾರೀರಿಕ ಸುಖವಿಲ್ಲದೆ ಜೀವಿಸಬಹುದು. ಆದರೆ ಸ್ವ-ಚಿತ್ತವುಳ್ಳವನಾಗಿ, ಸ್ವ-ಆಡಳಿತಗಾರನಾಗಿ, ಸ್ವ-ಕೇಂದ್ರೀಕೃತವಾಗಿ, ಸ್ವಾರ್ಥ-ಆಕಾಂಕ್ಷೆ, ನೆರವೇರಿಸಿಕೊಳ್ಳುವವನಾಗಿ ಮತ್ತು 'ಅಹಂ'ನ್ನು ಹುಡುಕಿ ಪ್ರವರ್ತಿಸುವವನಾಗಬಹುದು. ಇದೆಲ್ಲವೂ ನಿಜವಾಗಿ ''ಶಿಲುಬೆಯನ್ನು ಹೊರುವುದಲ್ಲ''. ಮತ್ತೊಬ್ಬನು ಸುಂದರ ಮನೆಯಲ್ಲಿ ವಾಸಿಸಬಹುದು, ಒಳ್ಳೆಯ ಕಾರು ಹೊಂದಿರಬಹುದು. ಆದರೆ 'ಅಹಂ'ನಲ್ಲಿ ಸತ್ತವನಾಗಿರಬಹುದು. ಅವನು 'ಅಹಂ'ನಿಂದ ಸ್ವತಂತ್ರಗೊಂಡ ತಗ್ಗಿದ ಆತ್ಮವುಳ್ಳವನಾಗಿರುತ್ತಾನೆ. ಆದುದರಿಂದ ''ನಮ್ಮ ಶಿಲುಬೆಯನ್ನು ಹೊತ್ತುಕೊಂಡು'' ಮತ್ತು ''ಅಹಂ' ಅಥವಾ 'ನಾನು' ಅನ್ನುವುದರಲ್ಲಿ ಸತ್ತು''-ಇದು ಹೊರಗಿನ ತೋರಿಕೆ, ಕರುಣೆ ಮತ್ತು ದೈವನಿಷ್ಠೆಗಿಂತ, ನಾವು ಆಂತರಿಕವಾಗಿ ಏನಾಗಿದ್ದೇವೆ ಎಂಬುದನ್ನು ಹೆಚ್ಚಾಗಿ ಪ್ರತಿಬಿಂಬಿಸುವಂಥದ್ದಾಗಿದೆ.

''**ನಮ್ಮನ್ನೇ ಪ್ರಸಿದ್ಧಿಪಡಿಸಿಕೊಳ್ಳದೆ ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತೇಸುವನ್ನೇ ಕರ್ತನೆಂತಲೂ ಪ್ರಸಿದ್ಧಿಪಡಿಸುತ್ತೇವೆ**'' (2 ಕೊರಿಂಥದವರಿಗೆ 4:5)

ಯಾರಿಗೆ ನಾವು ಪ್ರಸಿದ್ಧಿಪಡಿಸುತ್ತಿದ್ದೇವೆ, ಪ್ರವರ್ತಿಸುತ್ತಿದ್ದೇವೆ. ಮತ್ತು ಮಹಿಮೆಪಡಿಸುತ್ತಿದ್ದೇವೆ? ಇದು ನಮಗೋ ಅಥವಾ ಕ್ರಿಸ್ತನಿಗೋ? ಕೊನೆಯಲ್ಲಿ ಜನರು ಕ್ರಿಸ್ತನ ಬದಲಾಗಿ ನಮ್ಮ ಬಗ್ಗೆ ಮಾತಾಡಿದರೆ ನಿಜವಾಗಿಯೂ ಅಲ್ಲಿ ಕ್ರಿಸ್ತನ ಬಗ್ಗೆ ಸಾರೋಣವಾಗಿಲ್ಲ. ಕ್ರಿಸ್ತನ ಸಮೀಪಕ್ಕೆ ಜನರು ಬಾರದೆ ನಮ್ಮ ಮೇಲೆ ಆಕರ್ಷಿತರಾದರೆ, ನಾವು ನಿಜವಾಗಿ ಕ್ರಿಸ್ತನ ಬಗ್ಗೆ ಪ್ರಸಂಗಿಸಲಿಲ್ಲವೆಂದು ತಿಳಿದುಬರುತ್ತದೆ.

## ದಿನನಿತ್ಯದ ಜೀವನಕ್ಕೆ ಇದನ್ನು ಅನ್ವಯ ಮಾಡುವದು

### ಮನೆಯಲ್ಲಿ - ಗಂಡನು ಮತ್ತು ಹೆಂಡತಿಯಾಗಿ

ಪ್ರತಿ ಸಮಯದಲ್ಲೂ ನಮ್ಮ ಹಕ್ಕುಗಳನ್ನು ಬಿಟ್ಟುಕೊಡುತ್ತೇವೆ, ಉದಾಹರಣೆಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ನಮ್ಮ ಆದ್ಯತೆ ಹಾಜರಾಗುವುದರಲ್ಲಿ ನಮ್ಮ ಹಕ್ಕು ಕೇಳುವುದರಲ್ಲಿ ನಮ್ಮ ಹಕ್ಕು - ನಾವು 'ಅಹಂ'ಗೆ ಸಾಯುವವರಾಗಿದ್ದೇವೆ.

ಯಾವುದನ್ನೂ ಹಿಂತಿರುಗಿ ಪಡೆಯಲು ಬಯಸದೆ ಕೊಡುವದನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. (ಲೂಕ 6:30)

ಪ್ರತೀಕಾರ ಮಾಡುವ ಬದಲು ಕ್ಷಮಿಸುವ ಗುಣದ ಸಾಮರ್ಥ್ಯವನ್ನು ಸ್ವಷ್ಟಗೊಳಿಸು ಹಿಂತಿರುಗಿ ಹೊಡೆಯಬೇಡ.

ಯಾವುದನ್ನು ಹಿಂತುರುಗಿ ಪಡೆಯಲು ಬಯಸದೇ ಪ್ರೀತಿಸುವ ಸಾಮರ್ಥ್ಯವನ್ನು ಪಕ್ವಗೊಳಿಸಿಕೋ. ''ನೀನು ನನ್ನನ್ನು ಪ್ರೀತಿಸದಿದ್ದರೂ, ನಾನು ನಿನ್ನನ್ನು ಪ್ರೀತಿಸುತ್ತೇನೆ'' ಎಂಬುದಾಗಿ ಹೇಳಲು ಶಕ್ತನಾಗಿರು. ಇದು ನಿಜವಾದ ಅಗಾಪೆ ಪ್ರೀತಿ! ಅಗಾಪೆ ಪ್ರೀತಿಯೂ, ಪ್ರತಿದಿನವು ತುಂಬಿಸಲ್ಪಡುವ ತನ್ನ ''ಪ್ರೀತಿ ತೊಟ್ಟಿ ಮೇಲೆ ಆತುಕೊಳ್ಳುವುದಿಲ್ಲ''. ಅಗಾಪೆ ಪ್ರೀತಿಯು ದೇವರಿಂದ ಉತ್ಪತ್ತಿಯಾಗಿದೆ. ಮತ್ತು ಒಂದೇ ಪ್ರೀತಿ ಭಾಷೆ ಹೊಂದಿದೆ. ಅಂದರೆ ಯಾವುದನ್ನು ತಿರುಗಿ ಬಯಸದೇ ಪ್ರೀತಿಸುವ ಸಾಮರ್ಥ್ಯ. ಅಗಾಪೆ ಪ್ರೀತಿಯು ನೀನು ಕೊಡುವುದರ ಮೇಲೆ ಆತುಕೊಳ್ಳುವುದಿಲ್ಲ, ನೀನು ಎಷ್ಟು ಸ್ಪರ್ಶಿಸುತ್ತಿ, ಮಾತುಗಳ ಸತ್ಯ ಪ್ರತಿಜ್ಞೆ ಅಥವಾ ಯಾವುದೇ ರೀತಿಯ ಸಂಗತಿಗಳ ಮೇಲೆ ಆತುಕೊಳ್ಳುವುದಿಲ್ಲ. ಆಗಾಗ್ಗೆ ಇವೆಲ್ಲ ವಿಷಯಗಳು ಮಾಡಲು ಉತ್ತಮವಾಗಿವೆ ಮತ್ತು ಅವುಗಳನ್ನು ಮಾಡಿ ದೇವಕರುಣೆಯ ಪ್ರೀತಿಯಲ್ಲಿ ನಡೆಯಲು ಕರೆಯಲ್ಪಟ್ಟಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ವಿಧದ ಪ್ರೀತಿಯು ಯಾವುದನ್ನು ಹಿಂತುರುಗಿ ಪಡೆಯಲು ಬಯಸದಿರುವ ಪ್ರೀತಿಯಾಗಿದೆ.

**ಮನೆಯಲ್ಲಿ - ತಂದೆ-ತಾಯಂದಿರಾಗಿ**

ನಮ್ಮ ಮಕ್ಕಳ ಮೇಲೆ, ನಮ್ಮ ಸ್ವಾರ್ಥದಿಂದ ತುಂಬಿದ ಕನಸುಗಳನ್ನು ಹೇರಬಾರದು. ಅವರ ಜೀವಿತಗಳಲ್ಲಿರುವ ದೇವರ ಅದ್ವಿತೀಯ ಕರೆಯನ್ನು ತಿಳಿದು ನೆರವೇರಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುವವರು, ಮತ್ತು ದೇವರಿಂದ ಹೊರಟ ಮಾತುಗಳನ್ನು ಕೇಳುವವರು ಆಗಿರಬೇಕು. ನಮ್ಮ ಮಕ್ಕಳ ಜೀವಿತಗಳಿಂದ ನಮ್ಮ ಕನಸುಗಳನ್ನು ನೆರವೇರಿಸಿಕೊಳ್ಳುವ ತಪ್ಪುಗಳನ್ನು ನಾವು ಮಾಡಬಾರದು. ಅದು ಸ್ವಾರ್ಥತೆಯಾಗಿರುತ್ತದೆ. ನಮ್ಮ ಮಕ್ಕಳ ಜೀವಿತದಲ್ಲಿ ದೇವರ ಕನಸುಗಳನ್ನು ಅವರು ಮುಂದುವರೆಸಲು ಅವಕಾಶ ಕಲ್ಪಿಸಬೇಕು. ನಮ್ಮ ಮಕ್ಕಳ ಮೂಲಕ ''ಎರಡನೆ'' ಜೀವನ ನಡೆಸಲು ಪ್ರಯತ್ನಿಸಬಾರದು.

**ಮನೆಯಲ್ಲಿ - ಮಕ್ಕಳಾಗಿ**

ಸ್ವ ಚಿತ್ತವುಳ್ಳವರಾಗಿರಬೇಡಿರಿ ಮತ್ತು ಮೊಂಡರಾಗಿರಬೇಡಿರಿ. ವಿಧೇಯರಾಗುವದನ್ನು ಕಲಿಯುವುದರಿಂದ 'ಅಹಂ'ಗೆ ದೂರವಾಗಿರಿ. ನಿಮ್ಮ ಸ್ವಂತ ಅಗತ್ಯತೆಗಳು ಮತ್ತು

ಸಂವೇದನೆಗಳಲ್ಲೆ ಸುತ್ತುವರಿಯದೆ ತಂದೆತಾಯಿಗಳ ಸಂವೇದನೆ, ಅಗತ್ಯತೆಗಳನ್ನು ಗಮನಿಸುವವರಾಗಿರಿ.

**ಶಾಲೆಗಳಲ್ಲಿ/ ಕಾಲೇಜುಗಳಲ್ಲಿ (ಯೌವನ ಪ್ರಾಯ / 20ರ ಹರೆಯ)**

ನಿಮ್ಮ ಸಮಾನರೊಟ್ಟಿಗೆ ಪ್ರೀತಿಯಲ್ಲಿ ನಡೆದುಕೊಳ್ಳಿರಿ. ಪ್ರತೀಕಾರ ಮಾಡುವ ಬದಲು ಪ್ರೀತಿಸಿರಿ ಮತ್ತು ಕ್ಷಮಿಸಿರಿ. ಬೇರೆಯವರಿಗೂ ಸಹ ಅವಕಾಶಗಳನ್ನು ಬಿಟ್ಟುಕೊಡಿರಿ. ಸದಾವಕಾಶವೆಂಬ ಬೀಜವನ್ನು ಬಿತ್ತಿರಿ ಮತ್ತು ದೇವರು ನಿಮಗೆ ಬಹುಮಾನ ಕೊಡುವನೆಂದು ನಂಬಿರಿ !

**ಕೆಲಸದಲ್ಲಿ**

ನಮ್ಮ ಸ್ವಂತ ವಿಚಾರಗಳನ್ನು ಆಗ್ರಹ ಮಾಡುವ ಬದಲು ಫಲಕೊಡುವುದನ್ನು ಕಲಿತುಕೊಳ್ಳಬೇಕು. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳೋಣ. ನಾವು ತಪ್ಪು ಮಾಡಿದವೆಂದು ಹೇಳುವದರಲ್ಲಿ ಭಯಪಡದೆ, ತಪ್ಪನ್ನು ಹೇಳುವವರಾಗೋಣ. ಕ್ಷಮೆ ಕೇಳುವದರಲ್ಲಿ ಧೈರ್ಯವಾಗಿರೋಣ. ಯಾವಾಗ ನಮ್ಮ ಗರ್ವವನ್ನು ನಾಶಮಾಡುತ್ತೆವೋ, ಆಗ ಸಾವಿರ ಭಾರಿ 'ಅಹಂ'-ನ ಪಾಲಿಗೆ ಸಾಯುತ್ತೇವೆ.

**ಆಲಯದಲ್ಲಿ (ಸಭೆಯಲ್ಲಿ)**

ಸಭೆಗಳಲ್ಲಿ ಘನತೆಗೌರವಗಳಿಗೆ, ಗುರ್ತಿಸುವಿಕೆ, ಪ್ರಧಾನತೆಗಳಿಗೆ ಒಬ್ಬರಿಗೊಬ್ಬರು ಸ್ಪರ್ಧಿಸುವವರಾಗಿರಬಾರದು. ನಾವು ಏನೇ ಮಾಡಿದರೂ, ಸ್ವಾರ್ಥರಹಿತ ಸೇವಕರ ಹೃದಯವುಳ್ಳವರಾಗಿ ಮಾಡೋಣ. ನಮ್ಮನ್ನು ನಾವೇ ಹೆಚ್ಚಿಸಿಕೊಂಡರೆ, ತಗ್ಗಿಸಲ್ಪಡುತ್ತೇವೆ. ನಮ್ಮನ್ನು ತಗ್ಗಿಸಿಕೊಂಡರೆ, ಹೆಚ್ಚಿಸಲ್ಪಡುತ್ತೇವೆ. (ಲೂಕ 14:7-11).

ಸಭೆಗಳಲ್ಲಿ - ನಮ್ಮ ಕರೆ, ನಮ್ಮ ತಲಾಂತುಗಳು, ವರಗಳು, ಅಭಿಷೇಕಗಳಲ್ಲಿ ನಮ್ಮನ್ನು ನಾವೇ ಪ್ರವರ್ತಿಸಿಕೊಳ್ಳದಂತೆ ಎಚ್ಚರಿಕೆಯಾಗಿರೋಣ. ನಾವು ಮಾಡುವುದು, ಹೇಳುವುದು ಎಲ್ಲದರಲ್ಲಿಯೂ ಯೇಸುವಿಗೆ ಮಹಿಮೆಯನ್ನು ತರುವಂತೆ ಮತ್ತು ಆತನೊಬ್ಬನಲ್ಲಿಯೇ ಎಲ್ಲವನ್ನು ಮಾಡೋಣ.

ನಮ್ಮನ್ನು ಗುರ್ತಿಸುವ, ನಮ್ಮ ಮಾತು ಕೇಳುವ, ಕಾಣಿಸಿಕೊಳ್ಳುವ ಒಪ್ಪಿಕೊಳ್ಳುವ ಇಚ್ಛೆಗಳನ್ನು ಸಾಯಿಸೋಣ. ಸ್ವ-ಪ್ರಾಮುಖ್ಯತೆ ಪಾಲಿಗೆ ಸತ್ತವರಾಗೋಣ. ನಮ್ಮ

ಜೀವಿತದ ಎಲ್ಲಾ ಕ್ಷೇತ್ರಗಳಲ್ಲೂ ದೇವರಿಗೇ ಶ್ರೇಷ್ಟತೆ ಕೊಡುವವರಾಗೋಣ. ಅದ್ವಿತೀಯವಾಗಿ ದೇವರಿಂದ ಉಪಯೋಗಿಸಲ್ಪಡಲು, ನಮ್ಮ ಪ್ರತಿಷ್ಟೆ, ಗೌರವಗಳ ಪಾಲಿಗೆ ಸತ್ತವರಾಗಿರಬೇಕು.

### ಸುವಾರ್ತಾ ಸೇವೆಯಲ್ಲಿ

ಗಂಡಂದಿರೇ, ನೀವು ಸೇವೆ ಮಾಡುವವರಾಗಿದ್ದರೆ, ನಿಮ್ಮ ಹೆಂಡತಿಯರಿಗೆ ಸೇವೆಯ ಕರೆಯಲ್ಪಡುವಿಕೆಯಲ್ಲಿ ಆಸಕ್ತಿಯಿಲ್ಲದಿದ್ದರೆ, ಅವರ ಜೀವಿತದಲ್ಲಿ ತಮಗಿರುವ ಕರೆಯನ್ನು ಬಿಟ್ಟು ನಿಮ್ಮನ್ನು ಹಿಂಬಾಲಿಸುವಂತೆ ಒತ್ತಾಯ ಮಾಡಬೇಡಿರಿ. ಇದು ಒಂದು ಸ್ವಾರ್ಥವುಳ್ಳ ಕ್ರಿಯೆ. ಬದಲಾಗಿ ಗಂಡಂದಿರೇ, ನಿಮ್ಮ ಹೆಂಡತಿಯರ ಜೀವಿತಗಳಲ್ಲಿ ಅವರ ದೈವಿಕ ಕರೆಗನುಗುಣವಾಗಿ ನಡೆಯುವಂತೆಯೂ, ಅದನ್ನು ನೆರವೇರಿಸುವಂತೆ ಪ್ರೋತ್ಸಾಹಿಸಿರಿ ಮತ್ತು ಅವಕಾಶ ನೀಡಿರಿ. ಉದ್ಯೋಗದ ಪ್ರಪಂಚದಲ್ಲೂ ಸರಿಸಮವೆಂದು ಅವಕಾಶ ಮಾಡಿಕೊಡಿರಿ.

ನಾವೇನಾದರೂ, ಹಳ್ಳಿಗಳಿಗೆ ಹೋಗಿ ಸುವಾರ್ತೆ ಸೇವೆ ಮಾಡಿದರೆ, ಮತ್ತು ಪ್ರಾಕೃತಿಕ ಸುಖ ಸಮಾಧಾನ ನೀಡಲು ಉಪಯೋಗಿಸಲ್ಪಟ್ಟಿದ್ದರೆ ಕೊಡಲ್ಪಟ್ಟ ಅನುಕೂಲತೆಗಳಿಗೆ ಹೊಂದಿಕೊಳ್ಳುವುದನ್ನುಸರಿಪಡಿಸಿಕೊಳ್ಳುವುದನ್ನು ಇರುವುದರಲ್ಲೇ ತೃಪ್ತಿಯಾಗಿರುವುದನ್ನು ಕಲಿತುಕೊಳ್ಳಬೇಕು. ಸುಖಸಾಧನಗಳಿಗಾಗಿ ಒತ್ತಾಯ ಮಾಡಬೇಡಿರಿ. ಇದು ನಮ್ಮ ಶರೀರಕ್ಕೆ ಕಷ್ಟವಾದರೂ 'ಅಹಂ'ನ್ನು ಸಾಯಿಸಲು ಒಂದು ಉತ್ತಮ ಅವಕಾಶ ಸಿಕ್ಕಂತಾಗುತ್ತದೆ.

## ಪಶ್ಚಾತ್ತಾಪ ಮತ್ತು 'ಅಹಂ'ನ್ನು ಸಾಯಿಸುವುದು

ನಾವೇನಾದರೂ ದೇವರ ಉನ್ನತ ಕ್ಷೇತ್ರಗಳ ಪ್ರಯಾಣದಲ್ಲಿದ್ದರೆ ಆ ಕ್ಷೇತ್ರ ತಲುಪಲು ಅಡ್ಡಿ ಮಾಡುವ ಎಲ್ಲಾ ವಿಷಯಗಳನ್ನು ವಿಸರ್ಜಿಸಬೇಕು. ನಾವು 'ಅಹಂ'ನಿಂದ ಹೊರಬಂದಿದ್ದೇನೆ ಎಂಬುದಾಗಿ ಹೇಳುವ ಸ್ಥಿತಿಗೆ ಬರಬೇಕು. ನಾವು 'ಅಹಂ'ನ ಮೂಲದಲ್ಲಿ ಬೇರೂರಿದ್ದರೆ, ದೇವರಿಗೆ ಮಹಿಮೆ ಸಲ್ಲಿಸಲು, ಆತನೊಬ್ಬನಿಗೆ ಮೀಸಲಾದ ಮಹಿಮೆಯನ್ನು ಸಲ್ಲಿಸಲು ಸಾಧ್ಯವಿಲ್ಲ "ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (1 ಕೊರಿಂಥ ದವರಿಗೆ 1:29). ಸ್ನಾನಿಕನಾದ ಯೋಹಾನನಂತೆ "ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು" (ಯೋಹಾನ 3:30) ಎಂದು ಹೇಳುವವರಾಗಿರಬೇಕು. ದೇವರು

ನಮ್ಮ ಆಂತರಿಕ ಆಲೋಚನೆಗಳನ್ನು ಒಳಹೊಕ್ಕಿ ನೋಡಿ, ಯಾವುದಾದರೊಂದು ಮಾರ್ಗದಲ್ಲಿ 'ಅಹಂ'ನಿಂದ ಪ್ರಚೋದಿಸಲ್ಪಟ್ಟ ಕಾರ್ಯಚಟುವಟಿಕೆಗಳನ್ನು ಪರೀಕ್ಷಿಸಲು ಅವಕಾಶ ಮಾಡಿಕೊಡಬೇಕು. ''ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೊ; ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತಮಾಡು. ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ ಸನಾತನ ಮಾರ್ಗದಲ್ಲಿ ನನ್ನನ್ನು ನಡಿಸು'' (ಕೀರ್ತನೆಗಳು 139 : 23, 24). ನಮ್ಮ ಪ್ರಚೋದನೆಯನ್ನು ಪರೀಕ್ಷಿಸಿಕೊಳ್ಳೋಣ ನಮ್ಮ ಪ್ರೇರಣೆಯೇನಾದರೂ, ಸ್ವ-ಪದೋನ್ನತಿ - ಸ್ವಾರ್ಥ-ಹೆಬ್ಬಯಕೆ ಅಥವಾ ಸ್ವ-ಸಂರಕ್ಷಣೆಗಳಿಂದ ಕೂಡಿದ್ದರೆ ಅವುಗಳನ್ನು ನಿಲ್ಲಿಸೋಣ. ನಮ್ಮ ಜೀವಿತಗಳಲ್ಲಿ 'ಅಹಂ'ನ ಮೂಲದೊಟ್ಟಿಗೆ ವ್ಯವಹರಿಸದೆ, ಮುಂದುವರೆಯಲೂ ಪ್ರಯತ್ನಿಸಬಾರದು. ನಮ್ಮ ಹೃದಯಗಳನ್ನು ಬದಲಾಯಿಸುವಂತೆ ಕರ್ತನನ್ನು ಕೇಳಿಕೊಳ್ಳೋಣ.

ನಾವು 'ಅಹಂ'ನ ಮೂಲದೊಟ್ಟಿಗೆ ವ್ಯವಹರಿಸಬೇಕು, ನಮ್ಮ ತಪ್ಪು ಪ್ರೇರಣೆಗಳನ್ನು ನಮ್ಮ ಶ್ರೇಷ್ಟತೆಯ ಆಶೆ, ಸ್ವಾರ್ಥ, ಹೆಬ್ಬಯಕೆ ಮತ್ತು ಸ್ವ-ಹುಡುಕುವಿಕೆಗಳನ್ನು ಶಿಲುಬೆಗೆ ಹಾಕೋಣ. ದೇವರ ಮುಂದೆ ಪಾರದರ್ಶಕವಾಗಿರೋಣ, ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನು ಆಳವಾಗಿ ಶುದ್ಧೀಕರಿಸುವ ಕೆಲಸಕ್ಕೆ ಆಸ್ಪದ ಮಾಡಿಕೊಡೋಣ.

## ಪ್ರಾರ್ಥನೆ

*ತಂದೆಯೇ, ಯಾವಾಗಲೂ ನನ್ನ ಪ್ರಚೋದನೆಗಳು ಪವಿತ್ರವಾಗಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಅನೇಕ ಸಮಯಗಳಲ್ಲಿ ನನ್ನನ್ನು ಪ್ರವರ್ತಿಸಿಕೊಳ್ಳಲು. ಇಚ್ಛೈಪಟ್ಟೆನು. ಹಲವು ಬಾರಿ ನಿನಗೊಬ್ಬನಿಗೇ ಸಲ್ಲಬೇಕಾದ ಮಹಿಮೆಯನ್ನು ನಾನು ಹೊಂದಲು ಪ್ರಯತ್ನಿಸಿದ್ದೆನು. ನನ್ನ ಸ್ವಾರ್ಥಯುತ ಆಸಕ್ತಿಯಿಂದಾಗಿ, ಹಲವು ಸಾರಿ ನಿನ್ನ ಯೋಜನೆ ಮತ್ತು ಉದ್ದೇಶಗಳನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪಿದ್ದೇನೆ.*

*ತಂದೆಯೇ, 'ಅಹಂ'ನಿಂದ ಬಿಡುಗಡೆಗೊಂಡ ಸ್ವತಂತ್ರ ಜೀವಿತ ಮಾಡಲು ಬಯಸುತ್ತೇನೆ. ಕರ್ತನೇ, ನನ್ನಲ್ಲಿ ಆಳವಾಗಿ ಬೇರೂರಿರುವ 'ಅಹಂ'ಗೆ ಕೊಡಲಿ ಹಾಕಿ ಅದನ್ನು ಹೋಗಲಾಡಿಸು ಎಂದು ಪ್ರಾರ್ಥಿಸುತ್ತೇನೆ 'ಅಹಂ'ನ ಪಾಲಿಗೆ ಸತ್ತವನಾಗಿ, ನಿನಗಾಗಿ ಜೀವಿಸಲು ಸಹಾಯಮಾಡು. ನನ್ನ ಪ್ರೇರಣೆಗಳನ್ನು*

ಪವಿತ್ರಗೊಳಿಸು, ನೀನು ತಕ್ಕ ಸಮಯದಲ್ಲಿ ನನ್ನನ್ನು ಮೇಲಕ್ಕೆ ತರುತ್ತೀ ಎಂದು ತಿಳಿದು ನನ್ನನ್ನು ತಗ್ಗಿಸಿಕೊಳ್ಳಲು ಕೃಪೆಯನ್ನು ದಯಪಾಲಿಸು. ಮಾನವನಿಂದ ಬರುವ ಹೊಗಳಿಕೆಯನ್ನು ಹುಡುಕದೆ ನಿನ್ನಿಂದ ಬರುವ ಘನತೆ, ಹೊಗಳಿಕೆಯನ್ನು ಹುಡುಕುವಂತೆ ಸಹಾಯಮಾಡು.

ತಂದೆಯೇ, ನೀನು ನಿನ್ನಾತ್ಮನಿಂದ ನನ್ನಲ್ಲಿ ಕಾರ್ಯಮಾಡುತ್ತಿರುವುದಕ್ಕಾಗಿ ವಂದನೆಗಳು ಯೇಸುವಿನ ನಾಮದಲ್ಲಿ ಪ್ರಾರ್ಥಿಸುತ್ತೇನೆ. - ಆಮೇನ್.

# ಬೇರುಗಳಿಗೆ ಕೊಡಲಿ ಹಾಕುವುದು



ಸ್ವ • ಹೊಟ್ಟೆಕಿಚ್ಚು • ಅಹಂಕಾರ • ದುರಿಚ್ಛೆ

# 2

# ಹೊಟ್ಟೆಕಿಚ್ಚಿನ ಬೇರಿಗೆ ಕೊಡಲಿ ಹಾಕುವುದು

ಹೊಟ್ಟೆಕಿಚ್ಚಿಗಿರುವ ಮತ್ತೊಂದು ಪದ ಅಸೂಹೆ. ನಮ್ಮ ಜೀವಿತಗಳಲ್ಲಿರುವ ಅನೇಕ ವಿಷಯಗಳು ಬಹಳ ಅಪಾಯಕಾರಿಯಾಗಿವೆ. ಅವುಗಳಲ್ಲಿ ಹೊಟ್ಟೆಕಿಚ್ಚು ಒಂದಾಗಿದೆ. ಇದು ಎಷ್ಟೊಂದು ಗಂಭೀರ ಎಂದು ಪರಿಗಣಿಸದೆ ಇರುವುದರಲ್ಲಿ ನಾವು ಸೋಲುತ್ತೇವೆ. ಕೆಲವು ವೇಳೆ ಇದು ವ್ಯಕ್ತಿತ್ವ ಘರ್ಷಣೆ ಎಂದು ತಳ್ಳಿ ಹಾಕುತ್ತೇವೆ. ಹೇಗಿದ್ದರೂ, ಇದು ಹೊಂದಿರುವ ಗಂಭೀರತೆಯೊಡನೆ ವ್ಯವಹರಿಸಬೇಕು. ಈ ಅಧ್ಯಾಯದಲ್ಲಿ ಹೊಟ್ಟೆಕಿಚ್ಚು ಅಂದರೇನು, ಅದರ ಗಂಭೀರತೆ ಮತ್ತು ಅದರೊಟ್ಟಿಗೆ ಹೇಗೆ ವ್ಯವಹರಿಸಬೇಕು ಎಂದು ನಾವು ಅಭ್ಯಾಸಿಸಬೇಕು. 'ಹೊಟ್ಟೆಕಿಚ್ಚು'-ಪದದ ವಿವರಣೆಯನ್ನು ದೇವರ ವಾಕ್ಯದಲ್ಲಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ಪವಿತ್ರಾತ್ಮನು ಅಸೂಹೆಯ ಮೂಲವನ್ನು ನಮ್ಮೊಳಗಿಂದ ಬೇರು ಸಹಿತ ಹೊರ ತೆಗೆಯಲು ಅವಕಾಶ ನೀಡಬೇಕು. ಆವಾಗ ಮಾತ್ರ ಪ್ರತಿಯೊಬ್ಬರು ಇದರಿಂದ ಸ್ವತಂತ್ರವಾಗಿರಲು ಸಾಧ್ಯ.

**''ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವು ಯಾವುವೆಂದರೆ-ಜಾರತ್ವ,ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ''** (ಗಲಾತ್ಯದವರಿಗೆ 5:19-21).

ಹೊಟ್ಟೆಕಿಚ್ಚು ಮತ್ತು ಮತ್ಸರ ಎಂಬ ಎರಡು ಪದಗಳು ಮೇಲಿನ ವಚನಭಾಗದಲ್ಲಿದೆ. ಹೊಟ್ಟೆಕಿಚ್ಚು ಮತ್ತು ಮತ್ಸರದಲ್ಲಿ ನಡೆಯುವವರು ''ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು'' ನಾವು ಓದುತ್ತೇವೆ ಮತ್ತು ಅದರ ತೀವ್ರತೆಯ ಬಗ್ಗೆ ತಿಳಿಯುತ್ತೇವೆ. ಸತ್ಯವೇದವು ಇಂಥ ಕಾರ್ಯಗಳನ್ನು ನಡೆಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ಹೇಳುವುದನ್ನು ನೋಡುತ್ತೇವೆ. ಅದು ಬಹಳ ಗಂಭೀರ ವಿಷಯವಾಗಿದೆ ಮತ್ತು ಇದನ್ನು ಬಗೆಹರಿಸಬೇಕು. ನಾವು ಎಲ್ಲೆಲ್ಲಿಯೂ ಹೊಟ್ಟೆಕಿಚ್ಚಿನ ಸಮಸ್ಯೆ ಎದುರಿಸುತ್ತೇವೆ. ಗಂಡಂದಿರು ಮತ್ತು ಹೆಂಡತಿಯರು, ಒಡಹುಟ್ಟಿದವರು, ಯಜಮಾನರು ಮುಂತಾದವರುಗಳ ನಡುವೆ ನೋಡುತ್ತೇವೆ. ಸ್ನೇಹಿತರು ಮತ್ತು ಅವರ ಜೊತೆ ಸ್ನೇಹಿತರೊಂದಿಗೆ ಅಸೂಹೆಯಿರಬಹುದು. ದೇವರ

ಮಕ್ಕಳ ಮಧ್ಯದಲ್ಲೂ, ದೇವರ ಸುವಾರ್ತಿಕರ ಮಧ್ಯದಲ್ಲೂ, ಸಭೆಗಳಲ್ಲೂ ಹೊಟ್ಟೆಕಿಚ್ಚನ್ನು ಕಾಣಬಹುದು.

## ಹೊಟ್ಟೆಕಿಚ್ಚನ್ನು ಬಗೆಹರಿಸಲೇಬೇಕು

**''ಯಾಕೆಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ''** (1 ಕೊರಿಂಥ ದವರಿಗೆ 3:3).

ಇಲ್ಲ ಪೌಲನು ಪವಿತ್ರಾತ್ಮಭರಿತರಾದ, ಅನ್ಯಭಾಷೆ-ಮಾತನಾಡುವ ಕ್ರೈಸ್ತರ ಕುರಿತು ಮಾತಾಡುತ್ತಾನೆ. ಅವರು ಆತ್ಮನಿಂದ ನಡೆಸಲ್ಪಟ್ಟವರು ಅವರೊಳಗಿದ್ದ ಹೊಟ್ಟೆಕಿಚ್ಚು, ಜಗಳ, ಮತ್ಸರಗಳ ನಿಮಿತ್ತ ಪೌಲನು ಅವರನ್ನು ''ನರಪ್ರಾಣಿ''ಗಳೆಂದು ಕರೆಯುತ್ತಾನೆ. ಅವರು ಶರೀರಾಧೀನ ಸ್ವಭಾವವುಳ್ಳವರಾಗಿ ನಡೆಯುವವರಾಗಿದ್ದಾರೆ.

**''ಕೆಲವರು ಹೊಟ್ಟೆಕಿಚ್ಚು ಪಟ್ಟು ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ ಬೇರೆ ಕೆಲವರು ಒಳ್ಳೇ ಭಾವದಿಂದ ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ. ನಾನು ಸುವಾರ್ತೆಯ ವಿಷಯದಲ್ಲಿ ಉತ್ತರ ಹೇಳುವುದಕ್ಕೆ ಇಲ್ಲಿ ಬಂದಿರುತ್ತೇನೆಂದು ತಿಳಿದು ಪ್ರೀತಿಯಿಂದ ಪ್ರಸಿದ್ಧಿ ಪಡಿಸುತ್ತಾರೆ''**(ಫಿಲಿಪ್ಪಿಯವರಿಗೆ 1:15, 17).

ಇಲ್ಲಿ ಪೌಲನು ಸೂಚಿಸುವುದೇನೆಂದರೆ, ಕೆಲವರು ಹೊಟ್ಟೆಕಿಚ್ಚು ಪಟ್ಟು ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ. ಕ್ರಿಸ್ತನ ಸುವಾರ್ತೆ ಹೇಳುವುದು ಒಳ್ಳೆಯ ಕಾರ್ಯವೇ, ಆದರೆ ಹೊಟ್ಟೆಕಿಚ್ಚಿನ ಭಾವದಿಂದ ತುಂಬಿದ್ದರೆ ಅದು ದೇವರ ದೃಷ್ಟಿಯಲ್ಲಿ ಸರಿಯಾದುದಲ್ಲ. ಒಬ್ಬ ಸಂದೇಶಗಾರನು, ಟಿ.ವಿ. ಪರದೆ ಮೇಲೆ ಪ್ರಸಂಗಿಸುತ್ತಾನೆ. ನಾನು ಸಹ ಅವನಂತೆ ಟಿ.ವಿ.ಯಲ್ಲಿ ಪ್ರಸಂಗಿಸಬೇಕೆಂದು ಬಯಸಿದರೆ ಅವನ ಪ್ರಚೋದನೆ ತಪ್ಪಾಗಿರುತ್ತದೆ. ಅವನು ಉತ್ಸಾಹಭರಿತನಾಗಿ ದೇವರ ವಾಕ್ಯ ಪ್ರಸಂಗಿಸಬೇಕು ಎಂದು ಬಯಸಿದರು, ಅವನ ಪ್ರೇರಣೆ ಹೊಟ್ಟೆಕಿಚ್ಚಿನಿಂದ ತುಂಬಿದ್ದರೆ ಅದು ಬಹಳ ಅಪಾಯಕಾರಿ. ಹೊಟ್ಟೆಕಿಚ್ಚು ಶರೀರಾಧೀನ ಸ್ವಭಾವ, ಹೊಟ್ಟೆಕಿಚ್ಚಿನಿಂದ ಅನೇಕ ಕಾರ್ಯಗಳನ್ನು ಸಾಧಿಸಬಹುದಾದರೂ ಆತ್ಮಿಕತೆಯಲ್ಲಿ ಈ ಗುಣದಿಂದ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ ರೋಮಾಪುರದವರಿಗೆ -8:8ರಲ್ಲಿ ''ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು''. ಎಂದು ನೋಡುತ್ತೇವೆ.

ಅರಣ್ಯಕಾಂಡ 5:14ರಲ್ಲಿ ಗಂಡ ಮತ್ತು ಹೆಂಡತಿಯ ನಡುವೆಯಿರುವ ಮತ್ಸರ ನೋಡುತ್ತೇವೆ (ಆದುದರಿಂದ ಹೊಟ್ಟೆಕಿಚ್ಚಿನ ಆತ್ಮವು ಕೆಲವು ಭಾರಿ ದೆವ್ವಗಳಿಂದ ಉತ್ಪತ್ತಿಯಾದ ಹೊಟ್ಟೆಕಿಚ್ಚಾಗಿರುತ್ತದೆ).

## ಸತ್ಯವೇದದಲ್ಲಿರುವ ಹೊಟ್ಟೆಕಿಚ್ಚು

ಸತ್ಯವೇದದಲ್ಲಿ ಹೊಟ್ಟೆಕಿಚ್ಚಿಗೆ ಅನೇಕ ಉದಾಹರಣೆಗಳಿವೆ.

### ಕಾಯಿನನು ಮತ್ತು ಹೇಬೆಲನು

ಕಾಯಿನ ಮತ್ತು ಹೇಬೆಲರು ವಿಭಿನ್ನ ವೃತ್ತಿಮಾಡುವವರಾಗಿದ್ದರು. ಕಾಯಿನನು ವ್ಯವಸಾಯ ಮಾಡುವವನು, ಹೇಬೆಲನು ಕುರಿ ಕಾಯುವವನು. ಇಬ್ಬರೂ ಯೆಹೋವನಿಗೆ ಕಾಣಿಗೆ ತಂದರು. ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದನು, ಮತ್ತು ಹೇಬೆಲನು ಚೊಚ್ಚಲ ಕುರಿಯನ್ನು - ಕಾಣಿಕೆಯಾಗಿ ತಂದನು. ಯೆಹೋವನು ಹೇಬಲನ ಕಾಣಿಕೆಯನ್ನು ಮೆಚ್ಚಿದನು. ಇದರಿಂದ ಕಾಯಿನನಿಗೆ ಹೊಟ್ಟೆಕಿಚ್ಚು ಉಂಟಾಯಿತು. ಸತ್ಯವೇದವು ಹೇಳುತ್ತದೆ ಕಾಯಿನನು ಬಹುಕೋಪಗೊಂಡನು ಮತ್ತು ಹೊಟ್ಟೆಕಿಚ್ಚುಪಟ್ಟನು ಮತ್ತು ತನ್ನ ತಮ್ಮನ ಮೇಲೆ ಬಿದ್ದುಕೊಂದನು (ಆದಿಕಾಂಡ 4:1 - 9).

### ಯೋಸೇಫನು ಮತ್ತು ಅವನ ಅಣ್ಣಂದಿರು

ಯಾಕೋಬನಿಗೆ 12 ಮಂದಿ ಮಕ್ಕಳಿದ್ದರು, ಅವರಲ್ಲಿ ಯೋಸೇಫನನ್ನು ಅವನು ಬಹಳವಾಗಿ ಪ್ರೀತಿಸುತ್ತಿದ್ದನು. ಇದು ಅಣ್ಣಂದಿರ ಮಧ್ಯದಲ್ಲಿ ಹೊಟ್ಟೆಕಿಚ್ಚು ಉಂಟುಮಾಡಿತು. ಇದು ತಂದೆತಾಯಿಂದಿರಿಗೆ ಒಂದು ಎಚ್ಚರಿಕೆ, ಯಾಕೆಂದರೆ ಕುಟುಂಬದಲ್ಲಿ ಯಾರನ್ನೂ ಪ್ರತ್ಯೇಕವಾಗಿ, ಬಹಳವಾಗಿ ಇಷ್ಟಪಡದೆ ಎಲ್ಲರನ್ನೂ ಒಂದೇ ರೀತಿ ನೋಡಬೇಕು, ಯಾಕೆಂದರೆ ಪಕ್ಷಪಾತವು ಅವರೊಳಗೆ ಹೊಟ್ಟೆಕಿಚ್ಚನ್ನು ಉಂಟುಮಾಡುತ್ತದೆ. ಯಾಕೋಬನು ಯೋಸೇಫನಿಗೆ ನಿಲುವಂಗಿಯನ್ನು ಮಾಡಿಸಿಕೊಟ್ಟು ಗೌರವಿಸಿದನು. ಅಲ್ಲದೆ ತಾನು ಕಂಡ ಕನಸುಗಳಿಂದ ಬರುವ ದೊರೆತನ ಮಾಡುವ ಗೌರವ ಹುದ್ದೆ ದೊರೆಯುವ ವಿಷಯ ತಿಳಿಸಿದಾಗ, ಅವರು ಯೋಸೇಫನನ್ನು ಮತ್ತಷ್ಟು ಹಗೆ ಮಾಡಿದರು, ಅವನನ್ನು ಕೊಲ್ಲಬೇಕೆಂದು ತೀರ್ಮಾನಿಸಿದರು. ದೈವಿಕ ಮಧ್ಯಸ್ಥಿಕೆಯಿಂದ ಯೋಸೇಫನು ಐಗುಪ್ತದೇಶಕ್ಕೆ ಬಂದನು (ಆದಿಕಾಂಡ 37:3,4,8; ಅಪೊಸ್ತರ ಕೃತ್ಯಗಳು 7:8)

### ಸೌಲನು ಮತ್ತು ದಾವೀದನು

1 ಸಮುವೇಲನು 18:5 - 30ರಲ್ಲಿ ಅರಸನಾದ ಸೌಲನು ಮತ್ತು ದಾವೀದನ ನಡುವೆ ಉಂಟಾದ ಹೊಟ್ಟೆಕಿಚ್ಚನ್ನು ನೋಡಬಹುದು. ದಾವೀದನು ಕುರಿಕಾಯುವ

ಹುಡುಗನಾಗಿದ್ದರೂ ದೇವರ ಸಹಾಯದಿಂದ ಗೊಲ್ಯಾತನನ್ನು ಬೋರಲು ಬೀಳಿಸಿ ಕೊಂದನು. ದಾವೀದನು ಯುದ್ಧಭೂಮಿಯಿಂದ ಹಿಂತುರುಗಿದಾಗ ಸ್ತ್ರೀಯರು ಸಂತೋಷದಿಂದ ಹಾಡುತ್ತಾ ಕುಣಿಯುತ್ತಾ ಅರಸನಾದ ಸೌಲನನ್ನು ಎದುರುಗೊಂಡರು. ಅವರು ಪರಸ್ಪರವಾಗಿ, ಸೌಲನು ಸಾವಿರಗಟ್ಟಳೆಯಾಗಿ ಕೊಂದನು, ಆದರೆ ದಾವೀದನು ಹತ್ತು ಸಾವಿರ ಗಟ್ಟಳೆಯಾಗಿ ಕೊಂದನು ಎಂದು ಹಾಡಿದರು. ಸೌಲನು ಜನರ ದಾವೀದನ ಮೇಲಿನ ಗೌರವದ ಮಾತುಗಳಿಗೆ ಹೊಟ್ಟೆಕಿಚ್ಚುಪಟ್ಟನು. ಇಲ್ಲಿ ಅಸೂಹೆಯ ಪ್ರಥಮ ಬೀಜಗಳು ಸೌಲನ ಮನಸ್ಸಿನಲ್ಲಿ ಬಿತ್ತಲ್ಪಟ್ಟವು ಮತ್ತು ಅವನು ದಾವೀದನನ್ನು ಕೊಲ್ಲುವಂತೆ ಪ್ರೇರೇಪಿಸಲ್ಪಟ್ಟನು. ಸೌಲನು ದಾವೀದನನ್ನು ಕೊಲ್ಲಲು ಯೋಜನೆಗಳನ್ನು ಮಾಡಲಾರಂಭಿಸಿದನು. ಸೌಲನು ದಾವೀದನನ್ನು ವೀರನಾಗಿ ಹೋಗಿ ಯುದ್ಧಗಳನ್ನು ಮುಂದೆ ನಿಂತು ನಡೆಸಲು ನೇಮಿಸಿದನು. ಇವನು ನನ್ನಕೈಯಿಂದಲ್ಲ, ಫಿಲಿಷ್ಟಿಯರ ಕೈಯಿಂದ ಸಾಯಲಿ ಎಂದು ಸಾವಿರ ಫಿಲಿಷ್ಟಿಯರನ್ನು ಸಾಯಿಸಿದವರಿಗೆ ತನ್ನ ಹಿರೀ ಮಗಳನ್ನು ಮದುವೆ ಮಾಡಿಕೊಡುತ್ತೇನೆ ಅಂದನು.

ಹಲವು ಜನರು ಕೆಲಸ ಮಾಡುವ ಸ್ಥಳದಲ್ಲಿ ಅಸೂಹೆಯನ್ನು ಎದುರಿಸುತ್ತಾರೆ. ಅವರು ವರದಿ ಸಲ್ಲಿಸುವ, ವ್ಯವಸ್ಥಾಪಕನು ಅವರ ಜೀವಿತಗಳಲ್ಲಿ ''ಅರಸ ಸೌಲ'' ನಾಗಿರಬಹುದು. ಅಧೀನ ಅಧಿಕಾರಿಗಳು ಅಥವಾ ಕೆಲಸಗಾರರು, ತಮ್ಮ ಕೆಲಸದಲ್ಲಿ ಪ್ರವೀಣತೆ ತೋರಿಸುವಾಗ ವ್ಯವಸ್ಥಾಪಕನು, ತನ್ನ ಅಧೀನಾಧಿಕಾರಿಗಳು ಕೆಲಸದಲ್ಲಿ ನನಗಿಂತ ಮುಂದುವರೆಯಬಹುದೆಂದು ಭಯಪಟ್ಟರೆ, ಪ್ರಬಂಧಕನ ಹೃದಯದಲ್ಲಿ ಹೊಟ್ಟೆಕಿಚ್ಚು ಉದ್ಭವವಾಗುತ್ತದೆ. ಈ ಅಸೂಯೆಯ ಪರಿಣಾಮ ಪ್ರಬಂಧಕನು ಮನನೊಂದುಕೊಳ್ಳಬಹುದು ಅಥವಾ ಒರಟನಾಗಬಹುದು. ಇದರಿಂದ ಅಧೀನ ಅಧಿಕಾರಿಗಳು ನಾವು ಮಾಡಿದ ತಪ್ಪೇನಾದರೂ ಏನು ಎಂದು ಆಶ್ಚರ್ಯಚಕಿತರಾಗಬಹುದು.

[1]ಸಮುವೇಲ 18ನೇ ಅಧ್ಯಾಯುದಲ್ಲಿ ದಾವೀದನು ಅನೇಕಬಾರಿ ಬುದ್ಧಿವಂತಿಕೆಯಿಂದ ನಡೆದುಕೊಂಡದ್ದನ್ನು ನೋಡುತ್ತೇವೆ. ದಾವೀದನು, ಸೌಲನನ್ನು ಅವನ ಸ್ಥಾನದಲ್ಲಿ ಇಡಲು ಬಯಸಲಿಲ್ಲ ಮತ್ತು ಸೇಡು ತೀರಿಸಿಕೊಳ್ಳಲು ಹೋಗಲಿಲ್ಲ. ಬದಲಾಗಿ ಬುದ್ಧಿವಂತಿಕೆಯಿಂದ ನಡೆದನು. ದೇವರು ಮಧ್ಯಸ್ಥಿಕೆವಹಿಸಿ ಅವನ ಪರಿಸ್ಥಿತಿ ನಿಭಾಯಿಸಿದನು. ನೀವೇನಾದರೂ ನಿಮ್ಮ ಕೆಲಸದ ಸ್ಥಳದಲ್ಲಿ ಅಸೂಯೆ

ಎದುರಿಸುತ್ತಿದ್ದರೆ ಅವರಿಗೆ ಪ್ರತೀಕಾರ ಮಾಡಬೇಡಿರಿ. ಬುದ್ದಿವಂತಿಕೆಯಿಂದ ವರ್ತಿಸಿರಿ. ಕರ್ತನು  ಮಧ್ಯಸ್ಥಿಕೆ ವಹಿಸಲಿ - ಅತನು ನಿಜವಾಗಿಯೂ ಹಾಗೆ ಮಾಡುವನು.

> ಹೊಟ್ಟೆಕಿಚ್ಚು ಶರೀರಭಾವಾಧೀನ ಸ್ವಭಾವ, ಅಸೂಹೆಯಿಂದ ಯಾವ ಕಾರ್ಯಗಳನ್ನು ಮಾಡಿದರೂ - ಆತ್ಮಿಕವಾಗಿ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ ರೋಮಪುರದವರಿಗೆ 8:8ರಲ್ಲಿ ''ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು'' ಎಂದು ಹೇಳುತ್ತದೆ.

## ಹೊಟ್ಟೆಕಿಚ್ಚಿನೊಂದಿಗೆ ವ್ಯವಹರಿಸುವುದು

ಹೊಟ್ಟೆಕಿಚ್ಚಿನೊಂದಿಗೆ ವ್ಯವಹರಿಸುವ ಮೊದಲು ನಮ್ಮ ಹೃದಯಗಳಲ್ಲಿ ಹೊಟ್ಟೆಕಿಚ್ಚಿನ ಅಸ್ತಿತ್ವವಿದೆ ಎಂದು ಒಪ್ಪಿಕೊಳ್ಳಬೇಕು. ಅನೇಕರು ಹೊಟ್ಟೆಕಿಚ್ಚನ್ನು ರಹಸ್ಯವಾಗಿ ಅಡಗಿಸಿಕೊಂಡಿರುತ್ತಾರೆ. ನಮ್ಮ ಸ್ನೇಹಿತನು ನಮಗಿಂತಲೂ ಉತ್ತಮ ಹೆಸರುಳ್ಳ ಕಾರನ್ನು ಖರೀದಿಸಿದನೆಂದು ತಿಳಿಸಿದರೆ ನಮ್ಮಲ್ಲಿ ತುಸು ಅಸೂಯೆ ಆವರಿಸಿಕೊಳ್ಳುತ್ತದೆ. ಅದನ್ನು ಮುಚ್ಚಿಕೊಳ್ಳಲು ''ದೇವರಿಗೆ ಸ್ತೋತ್ರ ಸಹೋದರನೇ'' ಎಂದು ಸಂತೋಷಕರವಾಗಿ ಹೇಳುವ ಬದಲು ಹೊಟ್ಟೆಕಿಚ್ಚನ್ನು ಒಪ್ಪಿಕೊಂಡು ಒಳಗಿಂದ ಹೊರಡಿಸಬೇಕು. ನಿರಾಕರಣೆಯಿಂದ ನಾವು ಹೊರಬರುವುದು ಬಹಳ ಪ್ರಾಮುಖ್ಯ. ಹೊಟ್ಟೆಕಿಚ್ಚು ಇಲ್ಲವೋ ಎಂಬಂತೆ ಅಸೂಯೆಯನ್ನು ರಹಸ್ಯವಾಗಿಟ್ಟುಕೊಂಡರೆ, ತೊಂದರೆಗಳನ್ನು ಪತ್ತೆ ಮಾಡಲು ಆಗುವುದಿಲ್ಲ. ಬದಲಾಗಿ ದೇವರ ಮುಂದೆ ಪಾರದರ್ಶಕರಾಗಿರಬೇಕು ಅಥವಾ ಮನ ತೆರೆದವರಾಗಿರಬೇಕು. ದೇವರನ್ನು ಅಸೂಹೆ ತೆಗೆಯಲು ಕೇಳಿಕೊಂಡರೆ ಆತನು ತೆಗೆದುಬಿಡುತ್ತಾನೆ. ಹೀಗಿದ್ದರೂ, ನಾವು ನಿರಾಕರಿಸಿದರೆ, ಕರ್ತನು ಮಧ್ಯಸ್ಥಿಕೆ ವಹಿಸುವುದಿಲ್ಲ ಮತ್ತು ಸಹಾಯ ಮಾಡಲು ಸಾಧ್ಯವಾಗುವುದಿಲ್ಲ.

## ಹೊಟ್ಟೆಕಿಚ್ಚಿನ ತೋರಿಕೆ (ಪ್ರದರ್ಶನ)

### ಹತ್ಯೆ (ಕೊಲೆ)

ಅಸೂಯೆಯ ಫಲಿತಾಂಶವಾಗಿ ಕಾಯಿನನು ಹೇಬೆಲನನ್ನು ಕೊಂದನು. (ಆದಿಕಾಂಡ 4:8). ನಮ್ಮಲ್ಲಿ ಕೆಲವರು ಕಾಯಿನನ ಕೊಲೆಪಾತಕ ಭಾವನೆಗಳು ನಮ್ಮಲ್ಲಿಲ್ಲ ಎಂದುಕೊಂಡು ಬೇಗನೆ ಮುಗಿಸುತ್ತೇವೆ ಕೆಳಗಿನ ವಚನಗಳನ್ನು ನೋಡಿದರೆ ನಾವು ತಿರುಗಿ ಯೋಚಿಸುವಂತೆ ಮಾಡುತ್ತದೆ.

**‘‘ನರಹತ್ಯೆ ಮಾಡಬಾರದು; ನರಹತ್ಯೆ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು ಹಿರಿಯರಿಗೆ ಹೇಳಿದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ - ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯ ವಿಚಾರಣೆಗೆ ಗುರಿಯಾಗುವನು ತನ್ನ ಸಹೋದರನನ್ನು ನೋಡಿ ಛೀ ನೀಚಾ ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗುವನು, ಮೂರ್ಖಾ ಅನ್ನುವವನು ಅಗ್ನಿ ನರಕಕ್ಕೆ ಗುರಿಯಾಗುವನು** (ಮತ್ತಾಯ 5:21, 22).

**‘‘ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವುದಿಲ್ಲವೆಂಬುದು ನಿಮಗೆ ಗೊತ್ತಾಗಿದೆ’’** (1 ಯೋಹಾನ 3:15).

ಯೇಸು ಹೇಳಿದ್ದು; ಅಕಾರಣವಾಗಿ ಅಥವಾ ಕಾರಣವಿಲ್ಲದೇ ಯಾರ ಮೇಲಾದರೂ ಕೋಪಗೊಂಡರೆ, ಕೊಲೆಗಾರರಂತೆಯೇ ನಾನು ಬೇರೊಬ್ಬನನ್ನು ದ್ವೇಷಿಸಿದರೆ ನಾನು ಕೊಲೆಗಾರನೇ..

## ಕೋಪದ ಸ್ಫೋಟ (ಉದ್ರೇಕ)

**‘‘ಏಕೆಂದರೆ ಮತ್ಸರವು ಪತಿಗೆ ಕ್ರೋಧವನ್ನುಂಟು ಮಾಡುತ್ತದೆ. ಮುಯ್ಯಿ ತೀರಿಸತಕ್ಕ ದಿನದಲ್ಲಿ ವ್ಯಭಿಚಾರಿಯನ್ನು ಉಳಿಸನು’’** (ಜ್ಞಾನೋಕ್ತಿ 6:34)

ಇಲ್ಲಿರುವ ಸನ್ನಿವೇಶವೆನೆಂದರೆ, ವ್ಯಭಿಚಾರಿಣಿಯಾದ ಹೆಂಡತಿ ಮತ್ತು ಕೋಪಗೊಂಡ ಆಕೆಯ ಗಂಡನ ಹೊಟ್ಟೆಕಿಚ್ಚು ಪತಿಯನ್ನು ಆವೇಶಗೊಳ್ಳುವಂತೆ ಮಾಡಿತು. ಗಂಡನಿಗೆ ಆಕ್ರೋಶ ತರಿಸುವ, ಅಸೂಹೆಯ ಮತ್ತೊಂದು ಸಂದರ್ಭವು ಇರಬಹುದು. ಯಾವಾಗಲೂ, ಹೊಟ್ಟೆಕಿಚ್ಚಿನಿಂದ ಕೋಪವು ಹೊರಬರುತ್ತದೆ. ಗಂಡಂದಿರು ಮತ್ತು ಹೆಂಡತಿಯರು ಕ್ರೋಧವನ್ನು ತಮ್ಮತಮ್ಮೊಳಗೆ ಪರೀಕ್ಷಿಸಿಕೊಳ್ಳಬೇಕು. ನಿಶ್ಚಯವಾಗಿ ಹೊಟ್ಟೆಕಿಚ್ಚು ಉದ್ರೇಕಕ್ಕೆ ಮೂಲ ಕಾರಣವಾಗಿದೆ. ಪತಿಯು ತನಗಿಂತ ಕೆಲವು ಸಾವಿರ ರೂಪಾಯಿಗಳ ಹೆಚ್ಚಿನ ಸಂಪಾದನೆಯಿರುವ ಪತ್ನಿಯನ್ನು ನೋಡಿ, ಆಕೆಯ ಮೇಲೆ ಮತ್ಸರ ತುಂಬಿದವನಾಗಿ ಆಕೆಯನ್ನು ತನ್ನ ಹತೋಟಿಯಲ್ಲಿಡಲು ಪ್ರಯತ್ನಿಸುತ್ತಾನೆ. ಇಂತಹ ಕೀಳರಿಮೆ ಭಾವ, ಗಂಡನಲ್ಲಿ ಬಹಳ ದಿನಗಳಿಂದ ಬೇರೂರಿ, ತಕ್ಷಣವೇ ಕೋಪವನ್ನು ಹೊರಸೂಸುತ್ತದೆ.

ಸಾರ್ವಜನಿಕವಾಗಿ ದೇವಾರಾಧನೆಯಲ್ಲಿ ಸೇರಿಬಂದಾಗ ನಾವು ಗಾಢವಾದ ಮಟ್ಟದಲ್ಲಿ ಆರಾಧಿಸುತ್ತೇವೆ. ಆದರೆ ಏಕಾಂತವಾಗಿ ಮನೆಗಳಲ್ಲಿ ಹೇಗೆ ವರ್ತಿಸುತ್ತೇವೆ? ಎಂಬ ಪ್ರಶ್ನೆ ಹಾಕಿಕೊಳ್ಳಬೇಕು. ನಮ್ಮ ಹೆಂಡತಿಯರನ್ನು ನಾವು ಹೇಗೆ ಕಾಣುತ್ತೇವೆ?

ಮನೆಯಲ್ಲಿರುವ ಸ್ಥಿತಿಗತಿಗಳಲ್ಲಿ ಹೇಗೆ ಪ್ರತಿಕ್ರಿಯಿಸುತ್ತೇವೆ? ಅಸೂಯೆಯ ಮೂಲದ, ಅಸ್ತಿತ್ವದ, ಮೇಲೆ ಈ ಪ್ರಶ್ನೆಗಳ ಉತ್ತರ ಅಡಕವಾಗಿದೆ.

### ಸೇಡು ತೀರಿಸಿಕೊಳ್ಳುವುದು (ಹಗೆ ತೀರಿಸಿಕೊಳ್ಳುವುದು)

**ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ, ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬುದಾಗಿ ಬರೆದಿದೆ. ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು, ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೊಡಿಸಿಟ್ಟಂತಾಗುವದು. ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು''** (ರೋಮಾಪುರದವರಿಗೆ 12: 19-21).

ಸತ್ಯವೇದವು, ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ ಎಂದು ಹೇಳುತ್ತದೆ. ಇದು 1 ಥೆಸಲೋನಿಕದವರಿಗೆ 5:15 ರಲ್ಲಿಯು ``ಯಾರೂ ಅಪಕಾರಕ್ಕೆ ಅಪಕಾರ ಮಾಡದಂತೆ ನೋಡಿಕೊಳ್ಳಿರಿ, ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ'' ಎಂಬುದಾಗಿ ಮುಂದುವರೆದಿದೆ.

ನಾವು ಸುಶಿಕ್ಷಿತ ರೀತಿಯಲ್ಲಿ ನಾವೇ ಹಗೆ ತೀರಿಸಿಕೊಳ್ಳುತ್ತೇವೆ. ನಮ್ಮ ಕ್ರಿಯೆಗಳು ಬಹಿರಂಗವಾಗಿ ಅಪಕಾರದಿಂದ ಕೂಡಿರುವುದಿಲ್ಲ ಆದಾಗ್ಯೂ, ದೇವರಿಂದ ನಮ್ಮ ಹೃದಯಗಳನ್ನು ಮುಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ, ಮನೆಯಲ್ಲಿ ಮಾತನಾಡಲು ನಿರಾಕರಿಸುವುದು, ಕಾಫಿ ಕುಡಿಯಲು ತಿರಸ್ಕಾರ ಅಥವಾ ಮನೆಯಲ್ಲಿ ಯಾರೊಂದಿಗಾದರೂ ಸಮಾಧಾನ ತಿರಸ್ಕರಿಸುವುದೇ ಕೆಲಸದ ಸ್ಥಳದಲ್ಲಿ - ಬೇರೆಯವರಿಂದ ಅತಿ ಮುಖ್ಯ ಮಾಹಿತಿಗಳನ್ನು ತಡೆದಿಡುವುದು. ಇಂತಹ ನಡವಳಿಕೆಗಳನ್ನು ದೇವರ ವಾಕ್ಯ ಬೋಧಿಸುವ ಪ್ರಸಂಗಗಳಲ್ಲೂ, ಸಭಾಪಾಲಕರುಗಳಲ್ಲೂ ಕಾಣುತ್ತೇವೆ. ಉದಾಹರಣೆಗೆ ಒಬ್ಬ ಸಭಾಪಾಲಕರು, ಮತ್ತೊಬ್ಬರ ಜೊತೆ ಸುವಾರ್ತಾ ಸೇವಕರಿಂದ ಒಂದು ಸಮಾವೇಶಕ್ಕೆ ಕರೆಯಲ್ಪಟ್ಟಿದ್ದರೆ, ಮತ್ತು ಆ ಮೇಳದಲ್ಲಿ ತನಗೆ ಗೌರವ ಸಿಗಲಿಲ್ಲ ಎಂಬುದಾಗಿ ಮನಸ್ಸಿನಲ್ಲಿ ಅಂದುಕೊಂಡರೆ, ಆ ಸಭಾಪಾಲಕನು ತಾನು ಏರ್ಪಡಿಸಿದ ಸಮಾವೇಶಕ್ಕೆ (ಕೂಟಕ್ಕೆ) ಮತ್ತೊಬ್ಬ ದೇವರ ಸೇವಕನನ್ನು ಕರೆದು, ಅವರಿಗೆ ಅಗೌರವ ತೋರಬಹುದು. ಆತನ ಇಂತಹ ನಡವಳಿಕೆಗಳಿಗೆ ಮೂಲ ಕಾರಣವೆಂದರೆ, ಅಸೂಯೆಯ ದೆವ್ವವೇ.

**ಕರುಣೆಯಿಲ್ಲದಿರುವುದು, ಕೆಟ್ಟಭಾವನೆ, ಅಸಮಾಧಾನ:**

**''ಕೋಪವು ಕ್ರೂರ, ಕ್ರೋಧವು ಪ್ರವಾಹ; ಮಾತ್ಸರ್ಯಕ್ಕೆ ಎದುರಾಗಿ ಯಾರು ನಿಂತಾರು ?** (ಜ್ಞಾನೋಕ್ತಿ 27:4)

ಕೋಪವು ಕ್ರೂರವಾಗಿದ್ದರೆ, ಮಾತ್ಸರ್ಯವು ಎರಡು ಪಟ್ಟು ಕ್ರೂರವಾಗಿರುತ್ತದೆ. ಜನರೊಟ್ಟಿಗೆ ಅಸಮಾಧಾನದಿಂದಲೂ ಅಥವಾ ಕರುಣೆಯಿಲ್ಲದೆಯೂ ಇರುವುದು ಹೊಟ್ಟೆಕಿಚ್ಚಿನ ನಿಮಿತ್ತವೆ. ಪರಮಗೀತ 8:6 (ಬಿ)ಯಲ್ಲಿ ''ಪ್ರೀತಿಯು ಮರಣದಷ್ಟು ಬಲವಾಗಿದೆ (ಪ್ರೀತಿದ್ರೋಹದಿಂದ ಹುಟ್ಟುವ) ಮತ್ಸರವು ಪಾತಾಳದಷ್ಟು ಕ್ರೂರ ಅದರ ಜ್ವಾಲೆಯು ಬೆಂಕಿಯ ಉರಿ, ಅದು ಯೆಹೋವನ ರೋಷಾಗ್ನಿಯು'' ಮತ್ಸರವು ಪಾತಾಳದಷ್ಟು ಕ್ರೂರವಾಗಿದೆ. ಅಸೂಹೆಯ ನಿಮಿತ್ತ ನಾವು ಹಲವು ಬಾರಿ ಒರಟರಾಗಿ ಮತ್ತು ಕರುಣೆಯಿಲ್ಲದವರಾಗಿ ಜನರೊಂದಿಗೆ ವರ್ತಿಸುತ್ತೇವೆ. ಸ್ವಲ್ಪವಾಗಿಯೂ ನಡವಳಿಕೆ ಬದಲಿಸಿಕೊಳ್ಳುವುದಿಲ್ಲಾ, ಬದಲಾಗಿ ಮೂಲ ಕಾರಣದೊಟ್ಟಿಗೆ ವ್ಯವಹರಿಸಬೇಕು. ಇಬ್ಬರ ನಡುವಿನ ಕರುಣೆಯಿಲ್ಲದಿರುವಿಕೆಗೆ ಮತ್ಸರವೇ ಮೂಲ ಕಾರಣ.

**ವಿಭಜನೆ**

ಇದೂ ಮತ್ಸರದ ಕಾರಣದಿಂದಲೇ. ಒಬ್ಬನ ಹೃದಯದಲ್ಲಿರುವ ಅಸೂಯೆಯ ಕಾರಣದಿಂದಲೇ ಅನೇಕ ವಿಭಾಗಗಳಾಗುತ್ತವೆ. ಇದು ಎಲ್ಲಾ ಕಡೆ ಹರಡುತ್ತದೆ. ಕಲಹ ಮತ್ತು ವಿಭಾಗ ಇದರ ಫಲಿತಾಂಶ.

**ತೀವ್ರ ಪೈಪೋಟಿ**

ಒಳ್ಳೆಯ ಸ್ಥಳಗಳಲ್ಲಿ ಉತ್ತಮ ಪೈಪೋಟಿ ಒಳ್ಳೆಯದೇ, ಉದಾಹರಣೆಗೆ ಕ್ರೀಡೆಯಲ್ಲಿ ಸ್ಪರ್ಧಿಸುವುದು, ಗೆಲ್ಲುವ ಆಶೆಹೊಂದುವುದು ಸರಿಯಾದುದು. ಬೇರೆಯವರಿಗಿಂತ ಉತ್ತಮ ಸಾಧನೆ ಮಾಡುವ ಆಶೆ ಬಹಳ ಒಳ್ಳೆಯದು ಮತ್ತು ನಾವು ಅದರಲ್ಲಿ ಮಿಂಚುವಂತೆ ಮಾಡುತ್ತದೆ. ಆದರೆ ನಾವು ಅನೇಕ ಬಾರಿ ಮಾಡುವ ತಪ್ಪುಗಳೇನೆಂದರೆ, ಅಂತಹ ಪೈಪೋಟಿಗಳನ್ನು ದೇವರ ಮನೆಯೊಳಗೂ ತರುತ್ತೇವೆ ಮತ್ತು ನಷ್ಟವನ್ನುಂಟು ಮಾಡುತ್ತೇವೆ. ನಮ್ಮ ಪ್ರತಿಯೊಬ್ಬರ ಆತ್ಮಿಕ ಜೀವಿತಗಳಲ್ಲೂ ಪೈಪೋಟಿ ಮಾಡುತ್ತೇವೆ. ಉದಾಹರಣೆಗೆ, ಒಬ್ಬನು ಸ್ಪರ್ಧಿಸುವ ಉದ್ದೇಶದಿಂದ ಪ್ರೇರಣೆಗೊಂಡು ಮತ್ತೊಬ್ಬನಿಗಿಂತ ಸುಧೀರ್ಘ ಉಪವಾಸ ಪ್ರಾರ್ಥನೆ ಮಾಡಬೇಕೆಂದು ತೀರ್ಮಾನಿಸಿದರೆ ನಾವು ಅವನು ಮಾಡುವ ಉಪವಾಸಕ್ಕಿಂತ ಇನ್ನೂ ಹೆಚ್ಚಾಗಿ ಮಾಡಲು ಇಚ್ಚಿಸುತ್ತೇವೆ.

ತೀವ್ರ ಆತ್ಮಿಕ ಪೈಪೋಟಿಯು, ಹೊರತೋರಿಕೆಗೆ ಮಾತ್ರ ಶ್ರೇಷ್ಟ ಆತ್ಮಿಕ ಗುರಿಗಳನ್ನು ಪಾಲಿಸುವಂತೆ ನಡೆಸುತ್ತದೆ. ಅಸೂಯೆಯಿಂದ ಪ್ರೇರೇಪಿಸಲ್ಪಟ್ಟ ಇಂತಹವುಗಳು ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿರುವುದಿಲ್ಲ.

### ಜಗಳ ಮತ್ತು ವಾದವಿವಾದ

ಜ್ಞಾನೋಕ್ತಿ 10:12ರಲ್ಲಿ ''ದ್ವೇಷವು ಜಗಳಗಳನ್ನೆಬ್ಬಿಸುತ್ತದೆ'' ಎಂಬುದಾಗಿ ನೋಡುತ್ತೇವೆ. ಈ ದ್ವೇಷವು, ಅಸೂಯೆಯ ಫಲಿತಾಂಶವಾದ ಜಗಳದಿಂದ ಉಂಟಾಗುತ್ತದೆ.

### ಪ್ರತ್ಯೇಕತೆ, ಸ್ವಾತಂತ್ರ್ಯ ಮತ್ತು ಅಭದ್ರತೆ

ಹೊಟ್ಟೆಕಿಚ್ಚು ಅಭದ್ರತೆಯನ್ನು ಉಂಟುಮಾಡಿ, ಒಬ್ಬನು ಪ್ರತ್ಯೇಕತೆಯ ಕಡೆಗೆ ಹೋಗುವಂತೆ ಮತ್ತು ಸ್ವತಂತ್ರನಾಗುವಂತೆ ಮಾಡುತ್ತದೆ. ಉದಾಹರಣೆಗೆ ಕೆಲವು ಸಭಾಪಾಲಕರು, ಅವರ ಸಭಿಕರನ್ನು, ಬೇರೆ ವಿಶ್ವಾಸಿಗಳಿಂದ, ಸುವಾರ್ತೆ ಸೇವೆಯಿಂದ, ಇತರ ಸೇವಕರಿಂದ, ತಮ್ಮನ್ನು ಪ್ರತ್ಯೇಕಿಸಿಕೊಳ್ಳುವಂತೆ ಆದೇಶಿಸುತ್ತಾರೆ. ಇದು ಅಸೂಯೆಯಿಂದುಂಟಾದ ಅಭದ್ರತೆಯ ನಿಮಿತ್ತವಾಗಿರುತ್ತದೆ. ತಮ್ಮ ಸ್ಥಳೀಯ ಸಭೆಗೆ ಸಂಬಂಧಿಸದಿರದ ವಿಶ್ವಾಸಿಗಳೊಂದಿಗಿನ ಅನ್ಯೋನ್ಯತೆ, ಮತ್ತು ಯಥಾರ್ಥ ಸೇವಕರನ್ನು ಅಂಗೀಕರಿಸಲು ವಿಶ್ವಾಸಿಗಳಿಗೆ ಸ್ವತಂತ್ರವಿರುತ್ತದೆ.

### ಮಿತಿಮೀರಿದ ರಕ್ಷಣೆ

ಹೊಟ್ಟೆಕಿಚ್ಚಿನಿಂದ ಹೊರಬಂದ ಮಿತಿಮೀರಿದ ರಕ್ಷಣೆಯು ಯಥಾರ್ಥ ಕಾಳಜಿ ಎಂದು ಕಾಣಿಸುತ್ತದೆ. ಉದಾಹರಣೆಗೆ, ಉದ್ಯೋಗದಲ್ಲಿ ಕೌಶಲ್ಯ ಹೊಂದಿರುವ ಹೆಂಡತಿಯನ್ನು ನೀನು ಮನೆಯಲ್ಲೇ ಉಳಿದುಕೋ, ಕುಟುಂಬದ ಅಗತ್ಯತೆಗಳನ್ನು ನಾನೇ ನೋಡಿಕೊಳ್ಳುತ್ತೇನೆಂದು ಗಂಡನು ಹೇಳಿ ಮನದಟ್ಟು ಮಾಡಿಕೊಟ್ಟರೆ ಹೇಗಾದರೂ ಇದು ಮಿತಿಮೀರಿದ ರಕ್ಷಣೆಯಾಗಿರುತ್ತದೆ. ಮತ್ತು ಹೆಂಡತಿಯ ಕೌಶಲ್ಯತೆಯ ಬಗ್ಗೆ ಅಸೂಯೆಗೊಂಡ ಗಂಡನ ಮತ್ಸರದ ಮೂಲದಿಂದ ಬಂದಿರುತ್ತದೆ. ಬಹುಶಃ ಆಕೆಯು ಕೆಲಸದಲ್ಲಿ ಬೇರೆ ಪುರುಷರೊಂದಿಗೆ ಸಂಭಾಷಣೆ ಮಾಡುವುದರಿಂದ ಅವನಿಗೆ ಮತ್ಸರವುಂಟಾಗುತ್ತದೆ. ತನಗಿಂತಲೂ ಅಧಿಕವಾಗಿ ಸಂಪಾದಿಸುತ್ತಾಳೆಂಬ ಅಭದ್ರತೆಯಿರಬಹುದು. ಹೇಗಿದ್ದರೂ ಮಿತಿಮೀರಿದ ರಕ್ಷಣೆಯು, ಮತ್ಸರದಿಂದ ಉಂಟಾದುದಾಗಿದೆ.

### ಸಣ್ಣತನ

ಹಲವು ಬಾರಿ ಚಿಕ್ಕ ವಿಷಯಗಳನ್ನು, ದೊಡ್ಡ ಪ್ರಮಾಣದಲ್ಲಿ ಊದಿ, ಸಣ್ಣ ವಿಷಯವನ್ನು ದೊಡ್ಡ ಪರ್ವತದಂತೆ ಮಾಡುವುದು. ಮತ್ಸರವೇ ಇವಕ್ಕೆ ಕಾರಣವಾಗಿದೆ.

> ತೀವ್ರ ಆತ್ಮಿಕ ಪೈಪೋಟಿಯು ಹೊರತೋರಿಕೆಗೆ ಮಾತ್ರ ಶ್ರೇಷ್ಟ ಆತ್ಮಿಕ ಗುರಿಗಳನ್ನು ಪಾಲಿಸುವಂತೆ ನಡೆಸುತ್ತದೆ. ಅಸೂಯೆಯಿಂದ ಪ್ರೇರೇಪಿಸಲ್ಪಟ್ಟ ಇಂತಹವುಗಳು ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿರುವುದಿಲ್ಲ.

## ಹೊಟ್ಟೆಕಿಚ್ಚಿನ ಪರಿಣಾಮಗಳು

ನಮ್ಮ ಹೃದಯಗಳಲ್ಲಿ ಹೊಟ್ಟೆಕಿಚ್ಚಿಗೆ ಅವಕಾಶಕೊಟ್ಟರೆ, ನಾವು ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ. ನಾವು ಅಸೂಹೆಯ ಪರಿಣಾಮ ಅರ್ಥ ಮಾಡಿಕೊಂಡಾಗ, ಅದರ ಬೇರಿನ ಮೂಲಕ್ಕೆ ಕೊಡಲಿ ಹಾಕಬೇಕೆಂದು ಸಂತೋಷವಾಗಿ ಒಪ್ಪುವೆವು.

### ಹೊಟ್ಟೆಕಿಚ್ಚು ಮಾರಕವಾಗಿದೆ

‘‘ಅಸೂಯೆ ಸಾಯಿಸುತ್ತದೆ! ‘‘ಕರಕರೆಯಿಂದ ಮೂರ್ಖನಿಗೆ ನಾಶನವು. ರೋಷದಿಂದ ಮೂಢನಿಗೆ ಮರಣವು ಸಂಭವಿಸುದಲ್ಲವೇ’’ (ಜ್ಞಾನೋಕ್ತಿ 5:2) ನೋವು ಪಡದೇ ಅಸೂಯೆಯಿಟ್ಟುಕೊಂಡು ಮುಂದುವರೆಯಲಾಗದು. ಹೊಟ್ಟೆಕಿಚ್ಚು ಯಾರಲ್ಲಿರುತ್ತದೋ ಅದು ಅವರನ್ನು ನಿಧಾನವಾಗಿ ಮತ್ತು ಖಂಡಿತವಾಗಿ ನಾಶಪಡಿಸುತ್ತದೆ.

### ಹೊಟ್ಟೆಕಿಚ್ಚು ಆರೋಗ್ಯ ಕೆಡಿಸುತ್ತದೆ

‘‘ಶಾಂತಿಗುಣವು ದೇಹಕ್ಕೆ ಜೀವಾಧಾರವು; ಕ್ರೋಧವು ಎಲುಬಿಗೆ ಕ್ಷಯವು’’. (ಜ್ಞಾನೋಕ್ತಿ 14:30). ಹೊಟ್ಟೆಕಿಚ್ಚು ನಮ್ಮ ದೈಹಿಕ ಮಾನಸಿಕ ಆರೋಗ್ಯವನ್ನು ಕೆಡಿಸುತ್ತದೆ. ಕೆಲವೊಮ್ಮೆ ಜನರು ಶಾರೀರಿಕ ಕಾಯಿಲೆಗಳಿಂದ ಬಾಧೆಗಳನ್ನು ಅನುಭವಿಸುತ್ತಿರಲು ಹೊಟ್ಟೆಕಿಚ್ಚಿನ ಮೂಲವೇ ಕಾರಣವಾಗಿರುತ್ತದೆ.

### ಹೊಟ್ಟೆಕಿಚ್ಚು ನಮ್ಮ ದರ್ಶನಗಳನ್ನು ಅಸ್ಪಷ್ಟಗೊಳಿಸುತ್ತದೆ, ನಮ್ಮ ಏಕಾಗ್ರತೆ ಕಳೆದುಕೊಳ್ಳಲು ಕಾರಣವಾಗುತ್ತದೆ.

ಅಸೂಹೆ ನಮ್ಮ ದರ್ಶನಗಳನ್ನು ಅಗೋಚರಗೊಳಿಸುತ್ತದೆ. ನಮ್ಮ ಏಕಾಗ್ರತೆ ಕಳೆದುಕೊಳ್ಳುವಂತೆಯೂ, ಮೂಢರಾಗುವಂತೆಯೂ ಮಾಡುತ್ತದೆ. ''ಪಾಪಿಗಳನ್ನು ನೋಡಿ ಹೊಟ್ಟೆಕಿಚ್ಚುಪಡಬೇಡ; ಯೆಹೋವನಲ್ಲಿ ದಿನವೆಲ್ಲಾ ಭಯಭಕ್ತಿಯುಳ್ಳವನಾಗಿರು'' (ಜ್ಞಾನೋಕ್ತಿ 23:17). ಉದಾಹರಣೆಗೆ ನಮ್ಮ ಕೆಲಸದ ಸ್ಥಳದಲ್ಲಿ, ದೇವರಿಗೆ ಭಯಪಡದಿರುವವರು, ಅಭಿವೃದ್ಧಿಯಾಗುತ್ತಿರುವುದನ್ನು ನೋಡಿ ಅಸೂಯೆ ಪಟ್ಟುಕೊಳ್ಳಬಾರದು. ದೇವರ ಭಯವಿಲ್ಲದೆ ಅಭಿವೃದ್ಧಿಯಾಗುತ್ತಿರುವ ಜನರನ್ನು ಕಂಡು ಹೊಟ್ಟೆಕಿಚ್ಚುಪಟ್ಟರೆ, ನಾವು ಏಕಾಗ್ರತೆಯನ್ನು ಕಳೆದುಕೊಳ್ಳಲು ದಾರಿ ಮಾಡಿಕೊಡುತ್ತದೆ.

### ಹೊಟ್ಟೆಕಿಚ್ಚು ಅವಿವೇಕಿಗಳನ್ನಾಗಿಸುತ್ತದೆ ಮತ್ತು ಬೆಳಕನ್ನು ನೋಡುವುದಕ್ಕೆ ತಡೆಮಾಡುತ್ತದೆ

ಯೇಸುವು ಶಿಲುಬೆಗೆ ಹಾಕಲ್ಪಟ್ಟದ್ದಕ್ಕೆ ಅಸೂಹೆಯು ಒಂದು ಮುಖ್ಯ ಕಾರಣವಾಗಿದೆ. ಮಹಾಯಾಜಕನು ಯೇಸುವಿನ ಮೇಲೆ ಅಸೂಹೆಗೊಂಡನು. ''ಮಹಾ ಯಾಜಕರು ಹೊಟ್ಟೆಕಿಚ್ಚಿನಿಂದ ಯೇಸುವನ್ನು ಒಪ್ಪಿಸಿಕೊಟ್ಟಿದ್ದಾರೆಂದು ಪಿಲಾತನು ಗ್ರಹಿಸಿಕೊಂಡು- ನಾನು ಯೆಹೂದ್ಯರ ಅರಸನನ್ನು ನಿಮಗೆ ಬಿಟ್ಟುಕೊಡ ಬೇಕೆನ್ನುತ್ತೀರೋ? (ಮಾರ್ಕ 15:9, 10) ಎಂದು ಹೇಳಿದನು. ಯೇಸು ಮಾಡಿದ ಮಹತ್ಕಾರ್ಯಗಳನ್ನು ಮತ್ತು ಆತನ ಪ್ರಖ್ಯಾತಿಯನ್ನು ಕಂಡು ಮಹಾಯಾಜಕರು ಅಸೂಹೆಗೊಂಡಿದ್ದರು. ಹೊಟ್ಟೆಕಿಚ್ಚು ಅವರ ಹೃದಯಗಳನ್ನು ಮುಚ್ಚಿತ್ತು ಮತ್ತು ಯೇಸುವೇ ಮೆಸ್ಸೀಯನೆಂದು ಗುರ್ತಿಸಲು ಅಸಾಧ್ಯವಾಯಿತು.

### ಹೊಟ್ಟೆಕಿಚ್ಚು ತೊಂದರೆಗಳನ್ನುಂಟು ಮಾಡುತ್ತದೆ

**''ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನ ಮಾಡಿರಿ. ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ. ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ..''** (ಇಬ್ರಿಯರಿಗೆ 12:14, 15)

ಅಸೂಯೆ ಮತ್ತು ಕಹಿಭಾವನೆಗಳ ಮೂಲಗಳ ಬಗ್ಗೆ ಜಾಗರೂಕರಾಗಿರಬೇಕು. ಅವು ನಮಗೂ ಮತ್ತು ಸುತ್ತುವರೆದ ಅನೇಕರಿಗೂ, ಕೇಡನ್ನುಂಟುಮಾಡುತ್ತದೆ. ನಮ್ಮಲ್ಲಿ ಇದರ ಬಗ್ಗೆ ಗಮನಕ್ಕೆ ಬಂದಾಗ ತಕ್ಷಣ ಅವುಗಳೊಂದಿಗೆ ವ್ಯವಹರಿಸಬೇಕು.

**ಅಸೂಯೆ ಮತ್ತು ಜಗಳಗಳು ಗೊಂದಗಳಿಗೆ ಅವಕಾಶ ಮಾಡುತ್ತದೆ ಮತ್ತು ಎಲ್ಲಾ ಬಗೆಯ ಸೈತಾನನ ಕೆಲಸಗಳಿಗೂ ಎಡೆಮಾಡುತ್ತದೆ.**

ಸತ್ಯವೇದ ಹೇಳುವಂತೆ, ಹೊಟ್ಟೆಕಿಚ್ಚು ಇರುವ ಕಡೆ ಎರಡು ಬಗೆಯ ಮರಣಕರ ವಿಷಯಗಳಿರುತ್ತವೆ. ಅವು ಯಾವುವೆಂದರೆ ಗೊಂದಲಗಳು ಮತ್ತು ಪ್ರತಿಯೊಂದು ದುಷ್ಟ ಕಾರ್ಯಗಳು.

**ಆದರೆ ತೀಕ್ಷ್ಣವಾದ ಮತ್ಸರವೂ ಪಕ್ಷಭೇದವೂ ನಿಮ್ಮ ಹೃದಯದೊಳಗೆ ಇರುವಲ್ಲಿ ನೀವು ಸತ್ಯಕ್ಕೆ ವಿರೋಧವಾಗಿ ಸುಳ್ಳಾಡಿ ಹೊಗಳಿಕೊಳ್ಳಬೇಡಿರಿ. ಅದು ಮೇಲಣಿಂದ ಬಂದ ಜ್ಞಾನವಲ್ಲ; ಅದು ಭೂಸಂಬಂಧವಾದದ್ದು, ಪ್ರಾಕೃತ ಭಾವವಾದದ್ದು, ದೆವ್ವಗಳಿಗೆ ಸಂಬಂಧಪಟ್ಟದ್ದು. ಮತ್ಸರವೂ ಪಕ್ಷಭೇದವೂ ಇರುವ ಕಡೆ ಗಲಿಬಿಲಿಯೂ ಸಕಲವಿಧ ನೀಚಕೃತ್ಯಗಳೂ ಇರುವವು''** (ಯಾಕೋಬನು 3:14-16).

ಹೊಟ್ಟೆಕಿಚ್ಚು ಗೊಂದಲಗಳಿಗೂ, ಸಕಲವಿಧವಾದ ನೀಚಕೃತ್ಯಗಳಿಗೂ ಅವಕಾಶ ಮಾಡಿಕೊಡುತ್ತದೆ. ಕೆಲವು ವೇಳೆ, ಜನರು ದೆವ್ವಗಳ ಕೆಲಸಗಳಿಗೆ 'ಪ್ರವೇಶ' - ಕೊಡುವುದರ ನಿಮಿತ್ತ ಅವರ ಬಿಡುಗಡೆಗೆ, ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಂಥವುಗಳಿಗೆ ಪ್ರವೇಶ-ವನ್ನು ಕೊಡದೇ, ಮೂಲ ತೊಂದರೆಯೊಡನೆ, ವ್ಯವಹರಿಸಬೇಕು. ನಮ್ಮ ಹೃದಯಗಳಲ್ಲಿ ಅಸೂಹೆಯಿರುವವರೆಗೂ, ಗೊಂದಲಗಳಿಗೆ ಪ್ರವೇಶವಿರುತ್ತದೆ ಮತ್ತು ನಮ್ಮ ಜೀವಿತಗಳಲ್ಲಿ ಸೈತಾನನ ಸಕಲವಿಧವಾದ ಕೃತ್ಯಗಳಿಗೆ ದಾರಿ ಮಾಡಿಕೊಡುತ್ತದೆ.

ಆದುದರಿಂದ, ಅಸೂಹೆಯು ಒಂದು ಗಂಭೀರ ವಿಷಯವಾಗಿದೆ. ಇದು ನಮ್ಮ ಆರೋಗ್ಯ ಕೆಡಿಸುತ್ತದೆ. ನಮ್ಮ ದರ್ಶನಗಳ ಸತ್ಯವನ್ನು ಅಸ್ಪಷ್ಟಗೊಳಿಸುತ್ತದೆ, ಏಕಾಗ್ರತೆಯನ್ನು ಕೆಡಿಸುತ್ತದೆ. ಮತ್ತು ಸಕಲರೀತಿಯ ಸೈತಾನನ ನೀಚಕೃತ್ಯಗಳಿಗೆ 'ಪ್ರವೇಶ' ನೀಡುತ್ತದೆ.

## ಹೊಟ್ಟೆಕಿಚ್ಚನ್ನು ಕಳಚಿಹಾಕುವುದು

ಒಬ್ಬನು ಅಸೂಹೆಯೊಂದಿಗೆ ವ್ಯವಹರಿಸುವುದು ಮತ್ತು ಸ್ವತಂತ್ರದಲ್ಲಿರುವುದು ಹೇಗೆ? ಇಲ್ಲಿ ದೇವರ ವಾಕ್ಯದ ಬೋಧನೆಗಳಿವೆ.

### ಪ್ರೀತಿಯಲ್ಲಿ ನಡೆದುಕೊಳ್ಳಿರಿ

ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ (1 ಕೊರಿಂಥದವರಿಗೆ 13:4) ವಿಶ್ವಾಸಿಗಳಾಗಿ ನಾವು ಪ್ರತಿಯೊಬ್ಬರೂ ಪ್ರೀತಿಯಲ್ಲಿ ನಡೆದುಕೊಳ್ಳಬೇಕು. ಯಾಕೆಂದರೆ ರೋಮಾಪುರದವರಿಗೆ 5:5ರಲ್ಲಿ ''ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ'' ಎಂದು ಹೇಳುತ್ತದೆ ನೀನು ಪ್ರಾರ್ಥಿಸಿ ದೇವರ ಪ್ರೀತಿಯು ನಿನ್ನಲ್ಲಿ ಹರಿಯಲು ಅವಕಾಶಕೊಡು ಮತ್ತು ನೀನು ಹೊಟ್ಟೆಕಿಚ್ಚು ಪಡುವ ವ್ಯಕ್ತಿಯ ಮೇಲೂ ಪ್ರೀತಿ ತೋರಿಸು. ನಿನಗೆ ನೀನೇ, ''ನನ್ನ ಸ್ನೇಹಿತರೊಂದಿಗೆ ಪ್ರೀತಿಯಲ್ಲಿ ನಡೆಯಲು ಆರಿಸಿಕೊಳ್ಳುತ್ತೇನೆ'', ಎಂದು ಹೇಳಿಕೊಳ್ಳಬೇಕು. ದೈವಿಕ ಪ್ರೀತಿಯಲ್ಲಿ ನಡೆಯುವಾಗ ನಮ್ಮ ಹೃದಯ ಮತ್ತು ಮನಸ್ಸುಗಳನ್ನು ಅಸೂಯೆಯಿಂದ ದೂರವಿರುತ್ತವೆ.

### ಬೇರೆಯವರ ಆಶೀರ್ವಾದಗಳಲ್ಲಿ ಸಂತೋಷಿಸುವುದು

ಸಂತೋಷಪಡುವವರ ಸಂಗಡ ಸಂತೋಷಪಡಲು ನಾವು ಕರೆಯಲ್ಪಟ್ಟಿದ್ದೇವೆ. (ರೋಮಾಪುರದವರಿಗೆ 12:15). ಹೊಸ ಕಾರನ್ನು ಖರೀದಿಸಿದ ಸ್ನೇಹಿತನ ಸಂಗಡ ಸಂತೋಷಪಡಿರಿ. ಮಹತ್ಕಾರ್ಯ ಅಥವಾ ವಿಶೇಷ ಸಾಮಾಗ್ರಿಗಳನ್ನು ಪಡೆದುಕೊಂಡ ವ್ಯಕ್ತಿಯ ಸಂಗಡ ಸಂತೋಷಪಡಿರಿ. ಆಗಾಗ್ಗೆ ನಾವು ಹಾಡುತ್ತೇವೆ ''ನೀನು ಎಷ್ಟು ಶ್ರೇಷ್ಠನಾಗಿದ್ದೀ ! ಮತ್ತು ನಕ್ಷತ್ರಗಳನ್ನು ಗುಡುಗುಗಳ ಸುರಳಿ, ಮುಂತಾದವುಗಳನ್ನು ದೇವರೇ ಸೃಷ್ಟಿ ಮಾಡಿದ್ದೆಂದು ಘೋಷಿಸುತ್ತವೆ.'' ಹೀಗಿದ್ದರೂ, ಹೊಸ ಕಾರನ್ನು ಖರೀದಿಸಿದ ಆಶೀರ್ವಾದ ಹೊಂದಿದ ಅಥವಾ ಅದ್ಭುತಗಳನ್ನು ಹೊಂದಿಕೊಂಡ ವ್ಯಕ್ತಿಗಳನ್ನು ನೋಡಿ ''ನಿನ್ನ ಶ್ರೇಷ್ಠತೆ ಎಷ್ಟೋ ದೊಡ್ಡದು!'' ಎಂಬುದಾಗಿ ಹಾಡುವುದನ್ನು ಕಲಿತುಕೊಳ್ಳಬೇಕು. ಕರ್ತನು ಒಂದೇ ಬಗೆಯಲ್ಲಿ ಕಾರ್ಯ ನಿರತನಾಗಿದ್ದಾನೆ! ನಾವು ಬೇರೆಯುವರ ಆಶೀರ್ವಾದಗಳಲ್ಲೂ ಸಂತೋಷಪಡುವವರಾಗಿರಬೇಕು!

**''ಅಹಂಕಾರಿಗಳೂ ಒಬ್ಬರನ್ನೊಬ್ಬರು ಕೆಣಕುವವರೂ ಒಬ್ಬರ ಮೇಲೊಬ್ಬರು ಮತ್ಸರವುಳ್ಳವರೂ ಆಗದೆ ಇರೋಣ''** (ಗಲಾತ್ಯದವರಿಗೆ 5:26);

| |
|---|
| ನಮ್ಮ ಹೃದಯಗಳಲ್ಲಿ ಅಸೂಹೆ ಎಲ್ಲಿಯವರೆಗಿರುತ್ತದೋ ಅಲ್ಲಿಯವರೆಗೂ, ನಮ್ಮ ಜೀವಿತಗಳಲ್ಲಿ ಗೊಂದಲಗಳು ಮತ್ತು ಸೈತಾನನ ಸಕಲವಿಧವಾದ ಕೃತ್ಯಗಳು ಸ್ವತಂತ್ರವಾಗಿ ಪ್ರವೇಶಿಸುತ್ತವೆ. |

## ಪ್ರತಿಯೊಬ್ಬರು ವಿಭಿನ್ನರೆಂದು ಅರ್ಥಮಾಡಿಕೊಳ್ಳಬೇಕು

ದೇವರಿಂದ ಪ್ರತಿಯೊಬ್ಬರು ಬೇರೆ, ಬೇರೆ ರೀತಿಯ ವರಗಳನ್ನು ಪಡೆದುಕೊಂಡಿದ್ದೇವೆಂದು ಅರ್ಥಮಾಡಿಕೊಳ್ಳುವುದರ ಮೂಲಕ ಇತರರ ಮೇಲೆ ನಮಗಿರುವ ಅಸೂಯೆಯನ್ನು ತಡೆಗಟ್ಟಬಹುದು. ಪ್ರತಿಯೊಬ್ಬನು ಅದ್ವಿತೀಯ ಉದ್ದೇಶಗಳಿಗಾಗಿ ರಚಿಸಲ್ಪಟ್ಟಿದ್ದಾನೆ. (ರೋಮಾಪುರದವರಿಗೆ12:4-6). ದೇವರ ವಾಕ್ಯವು ಪ್ರತಿಯೊಬ್ಬರೂ ಬೇರೆ ಬೇರೆ ವರಗಳನ್ನು ಮತ್ತು ಸಭಾಸೇವೆಗಳನ್ನು ಹೊಂದಿದ್ದಾರೆ ಮತ್ತು ಆತನು ನಮ್ಮಲ್ಲಿ ವಿವಿಧ ಬಗೆಯಲ್ಲಿ ಕಾರ್ಯನಿರ್ವಹಿಸುತ್ತಾನೆಂದು ಹೇಳುತ್ತದೆ (1 ಕೊರಿಂಥ ದವರಿಗೆ12:5-7). ಉದಾಹರಣೆಗೆ, ಒಬ್ಬನು ಪ್ರಸಂಗಿಸುವದರಲ್ಲೂ, ಮತ್ತೊಬ್ಬನು ಮಹತ್ಕಾರ್ಯ ಮಾಡುವುದರಲ್ಲೂ, ಇನ್ನೊಬ್ಬನು ವಾದ್ಯಗಳನ್ನು ನುಡಿಸುವುದರಲ್ಲೂ ವರ ಹೊಂದಿದ್ದರೆ, ನಮ್ಮನ್ನು ದೇವರು ಉಂಟುಮಾಡಿದ ರೀತಿಯನ್ನ ನೆನೆಸಿ ಸಂತೋಷಪಡಬೇಕು. ವರಗಳು, ಮತ್ತು ಅಭಿಷೇಕ ಮುಂತಾದವುಗಳನ್ನ ಯಾವಾಗಲೂ ಹೋಲಿಸಿಕೊಳ್ಳದಿರುವುದನ್ನು ಕಲಿತುಕೊಳ್ಳಬೇಕು. ನಮಗೆ ಕೊಡಲ್ಪಟ್ಟ ವರಗಳಿಗಾಗಿ ಮಾತ್ರ ನಾವು ನ್ಯಾಯದಂಡನೆಗೆ ಒಳಪಡುವುದಿಲ್ಲ, ಬದಲಾಗಿ ಅವುಗಳನ್ನು ಆತನ ಮಹಿಮೆಗಾಗಿ ಮತ್ತು ಆತನ ಉದ್ದೇಶಗಳಿಗಾಗಿ ನಂಬಿಗಸ್ತರಾಗಿ ಉಪಯೋಗಿಸುತ್ತಿದ್ದೆವೋ ಎಂಬುದರ ಮೇಲೆ ಅಡಕವಾಗಿರುತ್ತದೆ. ನಾವು ಹೊಂದಿಕೊಂಡ ವರಗಳಿಗೆ ಪ್ರಧಾನ್ಯತೆ ಕೊಡುವವರಾಗಿರಬೇಕು. ಬೇರೆಯವರೊಂದಿಗೆ ಹೋಲಿಸಿಕೊಳ್ಳುವುದನ್ನು ನಿಲ್ಲಿಸಿರಿ ಮತ್ತು ಇತರರ ಮೇಲೆ ಹೊಟ್ಟೆಕಿಚ್ಚು ಪಡುವುದನ್ನು ವಿಸರ್ಜಿಸಿರಿ.

## ದೈವಿಕ ದೃಷ್ಟಿಕೋನದಲ್ಲಿ ವಿಷಯಗಳನ್ನು ನೋಡುವುದು

ಎಲ್ಲಾ ವಿಷಯಗಳನ್ನು ದೇವರ ದೃಷ್ಠಿಕೋನದಲ್ಲಿ ನೋಡುವುದನ್ನು ಕಲಿಯಬೇಕು. ಭೂಮಿಯ ಮೇಲೆ ಮಾಡಿದ ಎಲ್ಲಾ ಕಾರ್ಯಗಳಿಂದ ಯೆಹೋವನಿಗೆ ಮಹಿಮೆ ಉಂಟಾಗುತ್ತದೆ. ಮತ್ತು ಆತನೊಬ್ಬನೆ ಆರಾಧಿಸಲ್ಪಡುತ್ತಾನೆ ಈ ದೃಷ್ಟಿಕೋನದಿಂದ

ಕಾರ್ಯಗಳನ್ನು ನೋಡುವಾಗ ಅಲ್ಲಿ ಅಸೂಯೆಗೆ ಜಾಗವಿಲ್ಲದಂತಾಗುತ್ತದೆ. ಹೊಟ್ಟೆಕಿಚ್ಚಿನಿಂದ ಕಾಣುವ ಪ್ರತಿ ಪ್ರಾಮುಖ್ಯ ಸಂಗತಿಯೂ ಎಂದಿಗೂ ಕಾಣಬರುವುದಿಲ್ಲ.

ನಮ್ಮ ಜೀವಿತಗಳಲ್ಲಿರುವ ಮತ್ಸರವನ್ನು ಒಪ್ಪಿಕೊಂಡು ಬಿಟ್ಟುಬಿಡುವುದರಲ್ಲಿ ನಾವು ಪ್ರಾಮಾಣಿಕರಾಗಿರಬೇಕು. ನಾವು ಯಾವಾಗಲೂ ನಮ್ಮ ಹೃದಯಗಳಲ್ಲಿ ಅಸೂಯೆ ಉಂಟಾಗದಂತೆ ಜಾಗೃತಾ ಪ್ರಯತ್ನವನ್ನು ಮಾಡಬೇಕು. ನಮ್ಮ ಹೃದಯಗಳಲ್ಲಿ ಅಸೂಯೆಯಿದ್ದರೆ ದೇವರು ನಮ್ಮ ಮೂಲಕ ಕಾರ್ಯ ಮಾಡುವುದಿಲ್ಲ. ನಾವು ಅರಿಕೆ ಮಾಡಿ, ಪಶ್ಚಾತ್ತಾಪ ಪಟ್ಟು ಮತ್ತು ಆತ್ಮನ ಶುದ್ಧೀಕರಣವನ್ನು ಸ್ವೀಕರಿಸೋಣ!

ಪ್ರತಿಯೊಂದು ಅಸೂಯೆಯ ಮೂಲದಿಂದ ನಮ್ಮ ಹೃದಯಗಳನ್ನು ಕಾಯ್ದುಕೊಳ್ಳಬೇಕು. ಕೆಲವು ಬಾರಿ ಅನೇಕ ವಿಷಯಗಳು ಪಕ್ಷಪಾತದಿಂದ ಅಳೆಯಲ್ಪಟ್ಟಿರಬಹುದು, ನಾವು ಪಕ್ಷಪಾತದಿಂದ ನಡಿಸಲ್ಪಟ್ಟಿರಬಹುದು. ಮತ್ತು ನಾವು ಪಡೆದುಕೊಳ್ಳಬೇಕಾದದ್ದನ್ನು ಬೇರೆಯವರು ಪಡೆದಿರಬಹುದು. ಹೇಗಾದರೂ ಅಸೂಯೆ ಹೊಂದಲು ಇದು ಕಾರಣವಲ್ಲ. ಹೊಟ್ಟೆಕಿಚ್ಚನ್ನು ತೊರೆದು ದೇವರಿಗೆ ''ದೇವರೇ ಯಾವ ವ್ಯಕ್ತಿಯ ಮೇಲೂ ನಾನು ಹೊಟ್ಟೆಕಿಚ್ಚು ಪಡುವುದಿಲ್ಲ'' ಎಂಬುದಾಗಿ ಹೇಳಬೇಕು.

ನಾವೇನಾದರೂ ಪ್ರಸಂಗಿಗಳು ಅಥವಾ ದೇವರ ಸೇವಕರಾಗಿದ್ದರೆ ನಮಗಿಂತಲೂ ಅಭಿಷೇಕಹೊಂದಿದವರು, ಅಧಿಕವಾಗಿ ಫಲಹೊಂದುತ್ತಿರುವುದು, ಸೇವೆಯು ಅಧಿಕವಾಗಿ ಬೆಳೆಯುತ್ತಿರುವುದು ಮುಂತಾದ ವಿಷಯಗಳನ್ನು ನೋಡಿ ನಮ್ಮ ಹೃದಯಗಳಲ್ಲಿ ಹೊಟ್ಟೆ ಕಿಚ್ಚು ಪಡಬಾರದು. ನಮ್ಮ ಜೊತೆ ದೇವರ ಸೇವಕರುಗಳೆಂದು ಅವರೊಂದಿಗೆ ಸಂತೋಷಪಡುವವರಾಗಿರಬೇಕು. ನಮ್ಮ ಹೃದಯಗಳಲ್ಲಿ ಅಸೂಯೆ ಉಂಟಾಗದಂತೆ ಕಾಪಾಡಿಕೊಳ್ಳಬೇಕು. ಇಲ್ಲವಾದರೆ ಸಕಲವಿಧವಾದ ನೀಚ ಕೃತ್ಯಗಳಿಗೆ ಪ್ರವೇಶ ಮಾಡಿಕೊಟ್ಟು ಅಪಾಯಕ್ಕೆ ಗುರಿಯಾಗಬಹುದು.

ನಾವೇನಾದರೂ ಹೊಟ್ಟೆಕಿಚ್ಚಿಗೆ ಬಲಿಪಶುಗಳಾಗಿದ್ದರೆ ಅದರಲ್ಲಿ ತಲ್ಲೀನರಾದವರನ್ನು ಕ್ಷಮಿಸಬೇಕು ಮತ್ತು ಪರಿಸ್ಥಿತಿಗಳ ಬಗ್ಗೆ ದೇವರೇ ಕಾಳಜಿ ವಹಿಸುವಂತೆ ಅವಕಾಶ ನೀಡಬೇಕು.

- ನಮ್ಮ ಜೀವಿತಗಳಲ್ಲಿ ಹೊಟ್ಟೆಕಿಚ್ಚು ಇದೆಯೋ?
- ದೇವರ ಮನೆಯಲ್ಲಿ, ಹೊಟ್ಟೆಕಿಚ್ಚು ಇದೆಯೋ?
- ನಮ್ಮ ಹೆಂಡತಿಯರ ಮೇಲೆ ಹೊಟ್ಟೆಕಿಚ್ಚು ಹೊಂದಿದ್ದೇವೋ?
- ಅಧಿಕ ತಲಾಂತುಗಳನ್ನು ಅಥವಾ ವರಗಳನ್ನು ಹೊಂದಿಕೊಂಡು ಯಶಸ್ವಿಯಾದ ನಮ್ಮ ರಕ್ತ ಸಂಬಂಧಿಗಳ ಮೇಲೆ ಹೊಟ್ಟೆಕಿಚ್ಚುಪಟ್ಟುಕೊಳ್ಳುತ್ತೇವೋ?
- ನಮಗಿಂತಲೂ ಮುಂದುವರೆದ ಜೊತೆ ಕೆಲಸಗಾರನನ್ನು ನೋಡಿ ಹೊಟ್ಟೆಕಿಚ್ಚು ಪಡುತ್ತೇವೋ?

| |
|---|
| ನಮ್ಮ ಜೀವಿತಗಳಲ್ಲಿ ಹೊಟ್ಟೆಕಿಚ್ಚಿನ ಮೂಲದ ಬೇರಿಗೆ, ಆತ್ಮನು ತಾನೇ ಕೊಡಲಿ ಹಾಕಲು ಅವಕಾಶ ಮಾಡಿಕೊಡೋಣ |

## ಪ್ರಾರ್ಥನೆ

*ದೇವರೆ, ನನ್ನ ಜೀವಿತದಲ್ಲಿ ಹೊಟ್ಟೆಕಿಚ್ಚು ಇದೆ. ಹೊಟ್ಟೆಕಿಚ್ಚಿನಿಂದ ಸ್ವತಂತ್ರಗೊಂಡ ಜೀವಿತವನ್ನು ನಾನು ಜೀವಿಸಬೇಕು. ಕರ್ತನೇ ನನ್ನ ಹೃದಯದಲ್ಲಿರುವ ಹೊಟ್ಟೆಕಿಚ್ಚಿನ ಬೇರಿಗೆ ಕೊಡಲಿ ಹಾಕುವಂತೆ ನಾನು ಪ್ರಾರ್ಥಿಸುತ್ತೇನೆ. ತಂದೆಯೇ, ನನ್ನ ಜೀವಿತಗಳಲ್ಲಿ ನಿನ್ನ ಮಾರ್ಗಗಳಿರಲಿ, ಕರ್ತನೇ, ಇತರರ ಆಶೀರ್ವಾದಗಳಿಗೆ ನಾನು ಸಂತೋಷಪಡುವಂತೆ ಶಕ್ತಗೊಳಿಸು. ಪ್ರತಿಯೊಬ್ಬರು ಬೇರೆ ಬೇರೆ ರೀತಿಯಲ್ಲಿ ಮಾಡಲ್ಪಟ್ಟಿದ್ದಾರೆಂದು ತಿಳಿಯಲು ಸಮರ್ಥಗೊಳಿಸು. ನಾನು ಅದ್ವಿತೀಯನು ಎಂಬುದನ್ನು ಸ್ಪಷ್ಟವಾಗಿ ಗ್ರಹಿಸುವಂತೆ ಮಾಡು. ಕರ್ತನೇ ನಾನು ಪ್ರೀತಿಯಲ್ಲಿ ನಡೆಯುವಂತೆ ರೂಪಿಸು. ನನಗೆ ನಿನ್ನಿಂದ ಕೊಡಲ್ಪಟ್ಟ ಜವಬ್ದಾರಿಗಳನ್ನು ನಂಬಿಗಸ್ತಿಕೆಯಿಂದ ಬೇರೆಯವರೊಡನೆ ಹೋಲಿಸಿಕೊಳ್ಳದೇ, ಹೊಟ್ಟೆಕಿಚ್ಚು ಪಟ್ಟುಕೊಳ್ಳದೇ ನಿರ್ವಹಿಸಲು ಸಹಾಯ ಮಾಡು. ಹೊಟ್ಟೆಕಿಚ್ಚಿನ ವಿರುದ್ಧವಾಗಿ ನನ್ನ ಹೃದಯಗಳನ್ನು ಕಾಯಲು ಶಕ್ತಗೊಳಿಸು ಮತ್ತು ಎಲ್ಲಾ ಬಗೆಯ ನೀಚ ಕೃತ್ಯಗಳಿಗೆ ನನ್ನ ಹೃದಯದಲ್ಲಿ ಪ್ರವೇಶ ಕೊಡದೇ ನನ್ನ ಹೃದಯವನ್ನು ಕಾಪಾಡಿಕೊಳ್ಳಲು ಸಹಾಯಿಸು. ನನ್ನ ಜೀವಿತದ ಎಲ್ಲಾ ಕ್ಷೇತ್ರಗಳನ್ನೂ ದೈವಿಕ ದೃಷ್ಟಿಕೋನದಿಂದ ನೋಡುವಂತೆ ಶಕ್ತಗೊಳಿಸು. ಕರ್ತನೇ: ಅಂತಿಮವಾಗಿ ನೀನೊಬ್ಬನೆ ಮಹಿಮೆ ಹೊಂದಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಕರ್ತನೆ, ನನಗೆ ನೋವು ಉಂಟುಮಾಡಿದ ವ್ಯಕ್ತಿಯನ್ನು ಕ್ಷಮಿಸುತ್ತೇನೆ. ಕಹಿಭಾವನೆಗಳು ನನ್ನಲ್ಲಿ ಇರದಂತೆ ನೋಡಿಕೊಳ್ಳುತ್ತೇನೆ.*

*ಹೊಟ್ಟೆಕಿಚ್ಚಿನಿಂದ ಪ್ರೇರಿಸಲ್ಪಟ್ಟು, ಯಾರೂ ಸಹ ಯಾವ ಕಾರ್ಯ ಮಾಡದಿರಲಿ. ತಂದೆಯೇ ದೇವರ ಮನೆಯಲ್ಲಿ ಹೊಟ್ಟೆಕಿಚ್ಚು ಇಲ್ಲದಿರಲಿ.*

*ತಂದೆಯೇ ನೀನು ನನ್ನ ಹೃದಯದಲ್ಲಿ ಕಾರ್ಯ ನಿರತನಾಗಿರುವುದಕ್ಕೆ ನಿನ್ನನ್ನು ವಂದಿಸುತ್ತೇನೆ. ಯೇಸುವಿನ ನಾಮದಲ್ಲಿ ಪ್ರಾರ್ಥಿಸುತ್ತೇನೆ. ಆಮೇನ್!*

# ಬೇರುಗಳಿಗೆ ಕೊಡಲಿ ಹಾಕುವುದು



## ಸ್ವ • ಹೊಟ್ಟೆಕಿಚ್ಚು • ಅಹಂಕಾರ • ದುರಿಚ್ಛೆ

# 3

# ಅಹಂಕಾರದ ಬೇರಿಗೆ ಕೊಡಲಿ ಹಾಕುವುದು

ಅಹಂಕಾರವು ಸಾಮಾನ್ಯವಾಗಿ ದುರಭಿಮಾನ, ಉದ್ಧಟತನ, ಸ್ವ-ಹೊಗಳಿಕೆ, ಸ್ವ-ಪ್ರಾಮುಖ್ಯತೆ, ಜಂಭಕೊಚ್ಚಿಕೊಳ್ಳುವುದು. ಸ್ವಂತ ಹೊಗಳಿಕೆಯಲ್ಲಿ ಮಹಿಮೆಯಲ್ಲಿ ತೃಪ್ತಿಪಡುವುದು, ಬೇರೆಯವನಿಗಿಂತ ನಾನು ಶ್ರೇಷ್ಟವಾದವನೆಂದು ಆಲೋಚನೆ ಮಾಡಿಕೊಳ್ಳುವುದೆಂದು ಸ್ಪಷ್ಟಪಡಿಸುತ್ತದೆ. ಪರಲೋಕದ ತಂದೆಯಿಂದ ಬಾರದೇ, ಆದರೆ ಪ್ರಾಪಂಚಿಕ ವ್ಯವಸ್ಥೆಯಲ್ಲಿ ಪ್ರಚಲಿತದಲ್ಲಿರುವ ''ಅಹಂಕಾರ ಜೀವನದ ಮದ'' ಇದೆ. ಇದು ಪ್ರಾಪಂಚಿಕ ಜನರಲ್ಲಿ ಸಾಮಾನ್ಯವಾಗಿ ಕಾಣಿಸುತ್ತದೆ. ಜನರು ತಮ್ಮನ್ನು ತಾವೇ ಶ್ರೇಷ್ಟರೆಂದು ಯೋಚಿಸುವುದು ಮತ್ತು ಕೆಲವು ವಿಷಯ ಸಂಗತಿಗಳನ್ನು ಉನ್ನತವಾದವುಗಳೆಂದು ಆಲೋಚಿಸುವುದು ಸಾಮಾನ್ಯವೆಂದು ಲೋಕವು ತಿಳಿಯುತ್ತದೆ. ನಾವೇನಾದರೂ ಜಾಗರೂಕರಾಗಿಲ್ಲದಿದ್ದರೆ ಇಂತಹ ಯೋಚನೆಗಳಿಗೆ ಸಿಲುಕಿಕೊಂಡು ವಿಷಯಗಳನ್ನು ಗ್ರಹಿಸುತ್ತೇವೆ.

**''ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ''** (1 ಯೋಹಾನನು 2:16).

ಒಬ್ಬನು ಲೋಕದಲ್ಲಿ ಗುರ್ತಿಸುವುದೇನು? ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನಡಂಬ, ಪ್ರಾಪಂಚಿಕ ವ್ಯವಸ್ಥೆಯ ಭಾಗವಾದ 'ಗರ್ವದ ಜೀವನ' ನೋಡುತ್ತೇವೆ. ಗರ್ವವು ನಾವು ಸ್ವಂತವಾಗಿ ಅನೇಕ ಕಾರ್ಯಗಳನ್ನು ಸಾಧಿಸಬಹುದೆಂಬ ಭಾವವನ್ನುಂಟು ಮಾಡುತ್ತದೆ. ವಿಶ್ವಾಸಿಗಳಾಗಿ ಜಾಗರೂಕರಾಗಿರದಿದ್ದರೆ ಈ ಕ್ಷೇತ್ರಗಳಲ್ಲಿ ನಾವಿರುವಾಗ ಗರ್ವವು ನಮ್ಮೊಳಗೆ ಪ್ರವೇಶಿಸುತ್ತದೆ. ನಾವು ಪ್ರಾಯಶಃ ಶರೀರಾದಾಶೆಯಲ್ಲಿ ಮುಂಜಾಗ್ರತೆಯುಳ್ಳವರಾಗಿರಬಹುದು. ಉದಾಹರಣೆಗೆ, ವ್ಯಭಿಚಾರ - ಮತ್ತು ಕಣ್ಣಿನಾಶೆ ಮುಂತಾದವುಗಳನ್ನು ಕೆಟ್ಟದ್ದೆಂದು ನೋಡಿ ಅವುಗಳಿಂದ ದೂರವಾಗಿರುವುದು. ನಾವು ಜೀವಿಸುತ್ತಿರುವ, ಕೆಲಸ ಮಾಡುತ್ತಿರುವ ಪ್ರಪಂಚ ವ್ಯವಸ್ಥೆಯಿಂದ ತಿಳಿಯಲು ಗೂಢವಾದ ಗರ್ವವು ಸುಲಭವಾಗಿ ನಮ್ಮ ಜೀವಿತಗಳಲ್ಲಿ ಜಿನುಗುವಂತದ್ದು.

**''ಯೆಹೋವನು ಹಗೆ ಮಾಡುವ ವಸ್ತುಗಳು ಆರು ಇವೆ. ಹೌದು ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವುವೆಂದರೆ, ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡುಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳುಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ''** (ಜ್ಞಾನೋಕ್ತಿ 6:16-19).

ಇಲ್ಲಿ ''ಹೆಮ್ಮೆಯ ನೋಟ'', ಜಂಬವು ದೇವರಿಗೆ ಅಸಹ್ಯವಾದುದು ಮತ್ತು ದೇವರು ಇದನ್ನು ಸಹ ಹಗೆ ಮಾಡುತ್ತಾನೆ. ''ಆತನು ನಮ್ಮ ಮೇಲೆ ಅತಿಶಯವಾದ ಕೃಪೆಯನ್ನು ಇಡುತ್ತಾನೆ ಆದುದರಿಂದ ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೂ ಕೃಪೆಯನ್ನು ಅನುಗ್ರಹಿಸುತ್ತಾನೆ''. (ಯಾಕೋಬನು 4:6).

ನಮ್ಮ ಹೃದಯಗಳಲ್ಲಿ ಗರ್ವವಿದ್ದರೆ ಪ್ರಾರ್ಥನೆಯೊಂದಿಗೆ ದೇವರನ್ನು ಸಮೀಪಿಸಲಾಗುವುದಿಲ್ಲ. ದೇವರು ಗರ್ವವನ್ನ ವಿರೋಧಿಸುತ್ತಾನೆ. ಆದರೆ ನೀವು ಚರ್ಚೆಯಿಂದ ''ದೇವರು ನನ್ನನ್ನು ಪ್ರೀತಿಸುತ್ತಾನೆ ಆದುದರಿಂದ ಆತನು ಹೇಗೆ ನನ್ನನ್ನು ವಿರೋಧಿಸುತ್ತಾನೆ ?'' ಎನ್ನಬಹುದು. ಆತನು ನಿಮ್ಮನ್ನು ಪ್ರೀತಿಸುತ್ತಾನೆ ಆದರೆ ನಿಮ್ಮೊಳಗಿರುವ ಜಂಬವು ಆತನಿಗೆ ಅಸಹ್ಯವಾಗಿದೆ. ಆದುದರಿಂದ ದೇವರು ಗರ್ವವನ್ನು ನಿಯಂತ್ರಿಸುತ್ತಾನೆ ಮತ್ತು ಅಂಥವರಿಂದ ದೂರವಿರುತ್ತಾನೆ.

ಅಹಂಭಾವವು ದೇವರು ನಮ್ಮ ಸಮೀಪಕ್ಕೆ ಬರುವುದಕ್ಕೆ ತಡೆಯಾಗುತ್ತದೆ. ಇದು ದೇವರು ಸಮೀಪಕ್ಕೂ ಬಾರದೇ ಇರುವ ಅಪಾಯಕಾರಿ ಸ್ಥಿತಿ. ಆದುದರಿಂದ ನಮ್ಮ ಹೃದಯಗಳಲ್ಲಿ ಗರ್ವವಿದ್ದರೆ ನಾವು, ಮಾಡುವಂತಹ ಆತ್ಮಿಕ ಕಾರ್ಯಗಳಾದ, ಆರಾಧನೆ, ಪ್ರಾರ್ಥನೆ, ವಾಕ್ಯವನ್ನು ಓದುವುದು. ವಾಕ್ಯದ ಅರಿಕೆ, ಉಪವಾಸ ಮತ್ತು ಕೊಡುವಿಕೆ - ಇವೆಲ್ಲವು ಅಲ್ಪ ಪ್ರಯೋಜನೀಯವಾಗುತ್ತದೆ. ಆತ್ಮಿಕ ಕಾರ್ಯಚಟುವಟಿಕೆಗಳು ನಾವು ದೇವರ ಸಮೀಪಕ್ಕೂ, ಮತ್ತು ಆತನು ನಮ್ಮ ಸಮೀಪಕ್ಕೂ ಬರುವಂತೆ ಮಾಡುತ್ತವೆ. ಆದರೆ ನಾವು ಗರ್ವವನ್ನು ತ್ಯಜಿಸಲು ಮನಸ್ಸು ಮಾಡದಿದ್ದರೆ, ದೇವರು ನಮ್ಮ ಸಮೀಪಕ್ಕೆ ಬರುವುದಿಲ್ಲ, ದೇವರಿಲ್ಲದೇ ನಾವು ಶೂನ್ಯವಾದವರೆ.

ದೇವರು ಯಾರಿಗೆ ಕೃಪೆ ತೋರಿಸುತ್ತಾನೆ? ದೇವರ ವಾಕ್ಯ ಹೇಳುತ್ತದೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ (ಯಾಕೋಬ 4:6ಬಿ) ದೀನತೆಯು ದೈವಿಕ ಕೃಪೆಯನ್ನು ನಮ್ಮ ಜೀವಿತಗಳಲ್ಲಿ ಪಡೆಯಲು ಪೂರ್ವಾಗತ್ಯ ವಸ್ತುವಾಗಿರುತ್ತದೆ.

ನಮ್ಮಲ್ಲಿರುವಂಥವು ಮತ್ತು ನಾವೇನಾಗಬೇಕೆಂಬುದು, ದೇವರ ಕೃಪೆಯಿಂದ ಬರುವಂಥದ್ದು. ಎಲ್ಲದರಲ್ಲೂ ನಾವೇನಾದರೂ ಆಗುವುದು ಮತ್ತು ನಾವು ಉನ್ನತವಾಗಿ ಏನಾದರೂ ಸಾಧಿಸುವುದು ಅದು ಆತನ ಕೃಪೆಯಿಂದಲೇ ನಾವು ಹಮ್ಮಿನಲ್ಲಿ ನಡೆದರೆ, ನಮ್ಮ ಜೀವಿತಕ್ಕೆ ಒದಗಿ ಬರುವ ದೈವಿಕ ಕೃಪೆಯನ್ನು ಕಡಿತಗೊಳಿಸುತ್ತದೆ. ಮತ್ತು ನಾವೇನಾದರೂ ಆಗುವುದಿಲ್ಲ ಇಲ್ಲವೇ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಮೊದಲು ದೀನತೆಯಲ್ಲಿ ನಡೆಯಬೇಕು, ಆವಾಗ ಮಾತ್ರ ದೇವರ ಕೃಪೆ ನಮ್ಮ ಜೀವಿತಗಳಿಗೆ ಒದಗಿಬರುತ್ತದೆ. ದೀನತೆಯಿಲ್ಲದೆ, ನಾವೇನಾದರೂ ಆಗಲು ಸಾಧ್ಯವಿಲ್ಲ ಅಥವಾ ದೇವರ ಮಹನ್ನೋತ ಕಾರ್ಯ ಸಾಧಿಸಲು ಮತ್ತು ಉತ್ತಮವಾದುದನ್ನು ನಮ್ಮ ಜೀವಿತಗಳಲ್ಲಿ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಪರಿಶುದ್ಧತೆಯು ದೈವಿಕ ಕೃಪೆಯ ಫಲ. ನಾವೆಲ್ಲರೂ ಪರಿಶುದ್ಧರಾಗಿರಬೇಕು, ಆದರೆ ದೇವರ ಕೃಪೆಯೇ ನಮ್ಮನ್ನು ಪರಿಶುದ್ಧರಾಗಿ ಮಾಡಲು ಸಾಧ್ಯ. ಹೀಗಿದ್ದರೂ ನಾವು ಜಂಭದಲ್ಲಿ ನಡೆದರೆ ಅದು ದೇವರ ಕೃಪೆಯ ಪೂರೈಕೆಯನ್ನು ನಿಲ್ಲಿಸುತ್ತದೆ. ಆತನ ಕೃಪೆಯಿಲ್ಲದೇ ನಾವು ಪರಿಶುದ್ಧರಾಗಲು ಸಾಧ್ಯವಿಲ್ಲ. ಆದುದರಿಂದ ಒಬ್ಬನು ಪರಿಶುದ್ಧನಾಗಬೇಕಾದರೆ ದೀನತೆಯುಳ್ಳವನಾಗಿರಬೇಕು. ತಗ್ಗಿಸಿಕೊಳ್ಳುವಿಕೆಯು, ನಮ್ಮ ಜೀವಿತಗಳಲ್ಲಿ ದೈವಿಕ ಕೃಪೆಯ ಸತತ ಪೂರೈಕೆಯನ್ನು ಸುರಕ್ಷಿತಗೊಳಿಸುತ್ತದೆ. ತಗ್ಗಿಸಿಕೊಳ್ಳುವವನಿಗೆ ದೇವರು ಕೃಪೆ ತೋರಿಸುತ್ತಾನೆ ಆದರೆ ಗರ್ವಿಯು ಆತನಿಗೆ ಅಸಹ್ಯ.

ದೊಡ್ಡ ನಾಯಕರು, ಹೆಚ್ಚು ದೀನತೆಯುಳ್ಳ ಜನರು. ಆದಾಗ್ಯೂ ಇಂತಹ ನಾಯಕರು ಬಲದಿಂದ ಅಧಿಕಾರ ಮಾಡುವವರು ಮತ್ತು ಪ್ರಭಾವ ಬೀರುವವರು ಎಂದು ಊಹಿಸುತ್ತೇವೆ. ಆದರೆ ಸತ್ಯವೇದವು ಬೇರೆ ರೀತಿಯಾಗಿ ಹೇಳುತ್ತದೆ. ಮೋಶೆಯು ಸಹ ಹಳೆಒಡಂಬಡಿಕೆಯ ಶ್ರೇಷ್ಟ ನಾಯಕರಲ್ಲಿ ಒಬ್ಬನು. ಅವನು ಸುಮಾರು 6 ಮಿಲಿಯರಲ್ಲಿ ಮತ್ತು ಅದಕ್ಕಿಂತಲೂ ಅಧಿಕ ಜನರನ್ನು ಅವರ ಜೀವಿತಗಳಿಗಿದ್ದ ದೇವರ ಉದ್ದೇಶದೆಡೆಗೆ ನಡೆಸಿದನು. ಆದರೆ ಅರಣ್ಯಕಾಂಡ 12:3 ಹೇಳುತ್ತದೆ. ಆ ಮೋಶೆ ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹುಸಾತ್ವಿಕನು''. ದೇವರ ಕರೆಯುುವಿಕೆಯಲ್ಲಿ ಮೋಶೆಗೆ ಗರ್ವಪಡಲು ಅವಕಾಶವಿದ್ದರೂ, ಅವನು ಜಂಭಪಡದಿದ್ದ ನಿಮಿತ್ತವಾಗಿ ಅವನು ಭೂಮಿಯ ಮೇಲಿರುವ ಎಲ್ಲರಿಗಿಂತಲೂ ಬಹು ಸಾತ್ವಿಕನಾಗಿದ್ದನು. ಮೋಶೆಯು ಸಾಧುಸ್ವಭಾವದ ಆತ್ಮ ಹೊಂದಿದ್ದನು ಮತ್ತು ಅದರಿಂದಾಗಿ ದೇವರು ಅವನನ್ನು ಉಪಯೋಗಿಸಿದನು.

ಗರ್ವವು ಒಂದು ನಿಗೂಢ ವಿಷಯ. ಶರೀರದ ಪಾಪ, ಕಣ್ಣಿನ ಪಾಪವನ್ನು ಗುರ್ತಿಸುವುದು ಬಹಳ ಸುಲಭ ಆದರೆ ಗರ್ವವನ್ನು ಕಂಡು ಹಿಡಿಯುವುದು ಬಹಳ ಕಷ್ಟ. **ನಾವು ಗರ್ವದಿಂದ ಸ್ವತಂತ್ರವಾಗಿದ್ದೆವೆಂದು ಯೋಚಿಸುತ್ತೇವೆ. ಆದರೆ ಯಾವಾಗ ನಿಜವಾಗಿ ನಾವು ಆಲೋಚಿಸುತ್ತೇವೋ ನಾವು ಹೇಳುವಂತಹ ವಿಷಯಗಳು ನಮ್ಮ ವಿಚಾರಗಳು ಮತ್ತು ನಡವಳಿಕೆಗಳು ಹೆಚ್ಚಾಗಿ ಗರ್ವದೊಡನೆ ಕಲೆತಿರುತ್ತವೆ ಎಂದು ತಿಳಿಯುತ್ತೇವೆ.**

> ನಾವು ಹಮ್ಮಿನಿಂದ ನಡೆದರೆ, ನಮ್ಮ ಜೀವಿತಗಳಿಗೆ ಒದಗುವ ದೈವಿಕ ಕೃಪೆಯ ಪೂರೈಕೆಯನ್ನು ನಾವು ಕಡಿತಗೊಳಿಸುತ್ತೇವೆ ಮತ್ತು ಏನಾದರೂ ಆಗಲು ಇಲ್ಲವೇ ಯಾವುದನ್ನಾದರೂ ಸಾಧಿಸಲು ಆಗುವುದಿಲ್ಲ. ಆದಕಾರಣ ನಾವು ಮೊದಲು ದೀನತೆಯುಳ್ಳವರಾಗಿ ನಡೆಯಬೇಕು, ಆವಾಗ ಮಾತ್ರ ದೇವರ ಕೃಪೆಯು ನಮ್ಮ ಜೀವಿತಗಳೊಳಗೆ ಕೊಡಲ್ಪಡುತ್ತದೆ.

## ಗರ್ವದ ತೋರ್ಪಡಿಸುವಿಕೆ

ನಾವು ಅನಾರೋಗ್ಯಗೊಂಡರೆ ವೈದ್ಯರನ್ನು ಸಂಧಿಸುತ್ತೇವೆ. ಮತ್ತು ಅವರು ನಮ್ಮ ರೋಗದ ಲಕ್ಷಣಗಳನ್ನು ನೋಡಿ ರೋಗವೇನೆಂದು ತಿಳಿಯುತ್ತಾರೆ. ನಾವು ಗರ್ವದಿಂದ ಬಳಲುತ್ತಿದ್ದೇವೆ. ಎಂದು ಪರೀಕ್ಷಿಸಿಕೊಳ್ಳುವ ಅಥವಾ ಗರ್ವವೆಂಬ ರೋಗದ ಗುರುತುಗಳನ್ನು ಹೊಂದಿದ್ದೇವೆ ಎಂಬುದನ್ನು ಪರೀಕ್ಷಿಸಿಕೊಳ್ಳೋಣ

### ಹಟಮಾರಿತನ ಅಥವಾ ಮೊಂಡತನ

ಒಳ್ಳೆಯ ಬಗೆಯ ಮೊಂಡತನವನ್ನು ನೋಡುತ್ತೇವೆ. ದೇವರ ಉದ್ದೇಶಗಳಿಗೂ ಆತನ ವಿಷಯಗಳಿಗೂ, ಕರೆಯ ಬಗ್ಗೆ, ದೃಢನಿಶ್ಚಯ, ಸ್ಥಿರವಾಗಿರುವುದು. ಇಂತಹವುಗಳಲ್ಲಿ ಮೊಂಡತನವಿರಬೇಕು. ಸರಿಯಾದ ವಿಷಯಗಳಿಗೆ ನಾವು 'ಮೊಂಡ'ರಾಗಿರಬೇಕು. ಉದಾಹರಣೆಗೆ ಪರಿಶುದ್ಧತೆಯಲ್ಲಿ ಮೊಂಡತನವಿರಬೇಕು. ಅದರೊಂದಿಗೆ ಸಂಧಾನಮಾಡಿಕೊಳ್ಳಬಾರದು. ಪವಿತ್ರತೆಯ ವಿಷಯ ಬರುವಾಗ ಬೇರೆಯವರು, ಮತ್ತೊಂದು ರೀತಿಯಲ್ಲಿ ಮನದಟ್ಟು ಮಾಡಿಕೊಳ್ಳಬಾರದು. ಅಲ್ಲದೇ ನಾವು ನಮ್ಮ ಜೀವಿತಗಳಲ್ಲಿನ ದೇವರ ಕರೆಗೆ ಮೊಂಡರಾಗಿರಬೇಕು ಮತ್ತು ಧೀರತನವಿರಬೇಕು.

ಆದಾಗ್ಯೂ ಗರ್ವದಿಂದ ಜನಿಸಿದ ಹಟಮಾರಿತನ ಮತ್ತು ಅದೃಢಚಿತ್ತಗಳಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು.

**''ಆಗ ದಾನಿಯೇಲನು ಸನ್ನಿಧಿಯಲ್ಲಿ - ನಿನ್ನ ದಾನಗಳು ನಿನಗೇ ಇರಲಿ, ನಿನ್ನ ಬಹುಮಾನಗಳು ಮತ್ತೊಬ್ಬನಿಗಾಗಲಿ, ಆದರೆ ನಾನು ಈ ಬರಹವನ್ನು ಓದಿ ಇದರ ಅರ್ಥವನ್ನು ರಾಜನಿಗೆ ತಿಳಿಸುವೆನು ಅರಸೇ, ಪರಾತ್ಪರನಾದ ದೇವರು ನಿನ್ನ ತಂದೆಯಾದ ನೆಬೂಕದ್ನೆಚ್ಚರನಿಗೆ ರಾಜ್ಯಮಹತ್ವ ಮಾನ ಸನ್ಮಾನಗಳನ್ನು ದಯಪಾಲಿಸಿದನು. ಈ ಮಹತ್ವ ವರದ ನಿಮಿತ್ತ ಸಕಲ ಜನಾಂಗ ಕುಲಭಾಷೆಗಳವರು ಅವನ ಮುಂದೆ ಬೆಚ್ಚಿ ಬೆದರಿದರು. ಬೇಕುಬೇಕಾದವರನ್ನು ಕೊಲ್ಲಿಸಿದನು, ಬೇಕು ಬೇಕಾದವರನ್ನು ಉಳಿಸಿದನು, ಮನಸ್ಸು ಬಂದವರನ್ನು ಏರಿಸಿದನು, ಮನಸ್ಸು ಬಂದವರನ್ನು ಇಳಿಸಿದನು. ಹೀಗೆ ಅವನ ಹೃದಯವು ಉಬ್ಬಿ ಅವನ ಸ್ವಭಾವವು ಜಡವಾಗಿ ಅವನಿಗೆ ಸೊಕ್ಕೇರಲು ಅವನನ್ನು ರಾಜಾಸನದಿಂದ ತಳ್ಳಿ ಮಾನವನ್ನು ತೆಗೆದುಬಿಟ್ಟನು ಅವನು ನರಜಾತಿಯವರೊಳಗಿಂದ ನೂಕಲ್ಪಟ್ಟನು, ಅವನ ಬುದ್ಧಿಯು ಮೃಗಬುದ್ಧಿಯಂತಾಯಿತು, ಕಾಡುಕತ್ತೆಗಳೊಂದಿಗೆ ವಾಸಿಸಿದನು ಪರಾತ್ಪರನಾದ ದೇವರು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದರ ಮೇಲೆ ತನಗೆ ಬೇಕಾದವರನ್ನು ನೇಮಿಸುತ್ತಾನೆ ಎಂಬದು ಅವನಿಗೆ ತಿಳಿದುಬರುವತನಕ ದನಗಳಂತೆ ಹುಲ್ಲು ಮೇಯುವದೇ ಅವನ ಗತಿಯಾಯಿತು. ಆಕಾಶದ ಇಬ್ಬನಿಯು ಅವನ ಮೈಯನ್ನ ತೋಯಿಸುತ್ತಿತ್ತು''**. (ದಾನಿಯೇಲನು 5:17-21).

ದೇವರು ನೆಬೂಕದ್ನೆಚ್ಚರವನ್ನು ಸಿಂಹಾಸನದಿಂದ ತಳ್ಳಿದ್ದನ್ನು ದಾನಿಯೇಲನು ತಿಳಿಸುತ್ತಾನೆ. ಅವನು ಗರ್ವಿಷ್ಟನು, ಮೊಂಡನು ಮತ್ತು ಕ್ರೂರಿಯಾಗಿದ್ದನು. ಜಂಭದಿಂದ ಜನಿಸಿದ ಮೊಂಡತನ ಮತ್ತು ಕ್ರೌರ್ಯ ಜೊತೆ ಜೊತೆಯಲ್ಲಿ ನಡೆಯುತ್ತವೆ. ''ಬಹಳವಾಗಿ ಗದರಿಸಿದರೂ ತಗ್ಗದವನು ಏಳದ ಹಾಗೆ ಫಕ್ಕನೆ ಮುರಿದು ಬೀಳುವನು'' (ಜ್ಞಾನೋಕ್ತಿ 29:1). ಯಾರಾದರೂ ನಮ್ಮನ್ನು ಪದೇಪದೇ ಸರಿಪಡಿಸುತ್ತಿದ್ದರೆ, ಅದನ್ನು ನಾವು ಕಡೆಗಣಿಸುತ್ತೇವೆ. ಇದರಿಂದ ನಾವು ನಾಶವಾಗುತ್ತೇವೆಂದು ಸತ್ಯವೇದವು ಎಚ್ಚರಿಸುತ್ತದೆ. ಉದಾಹರಣೆಗೆ ಗಂಡ - ಹೆಂಡತಿಯರ ಸಂಬಂಧದಲ್ಲಿ, ಹೆಂಡತಿಯು ಹಲವು ವಿಚಾರಗಳೊಂದಿಗೆ, ತನ್ನ ಗಂಡನನ್ನು ಅನೇಕ ವಿಷಯಗಳಲ್ಲಿ ಅನಿಸಿಕೆ ಕೇಳಲು ಬಂದಾಗ, ಅವನು ಮೊಂಡತನದಿಂದ ಎಲ್ಲಾ ವಿಚಾರಗಳನ್ನು ಬದಿಗೊತ್ತಿ ಹೆಂಡತಿಯ ವಿಚಾರಗಳನ್ನು ಗಣನೆಗೆ ತರದೇ ಅವುಗಳನ್ನು ನಿರಾಕರಿಸಬಹುದು. ಇದು ಆಗಾಗ್ಗೆ ಪುನಾರವರ್ತನೆಯಾಗಬಹುದು. ಆದಾಗ್ಯೂ ಈ ರೀತಿಯಾಗಿ ಆಕೆಯ ವಿಚಾರಗಳನ್ನು ಎಡೆಬಿಡದೆ ತಿರಸ್ಕರಿಸುವುದು ಗರ್ವದ ಮೂಲದಿಂದ ಬಂದುದಾಗಿದೆ.

ಮತ್ತೊಂದು ಉದಾಹರಣೆಯು ದೇವರ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳಿರಬಹುದು. ಜನರು ದೈವಿಕ ಸಲಹೆಗಳನ್ನು ನೀಡುವಾಗ ಮತ್ತು ನಮ್ಮ ಜೀವಿತಗಳನ್ನು ಸರಿಪಡಿಸುವಾಗ ನಾವು ಕೇಳಲು ಇಷ್ಟವಿಲ್ಲದಿರಬಹುದು, ಮತ್ತು ಸರಿಪಡಿಸುವಿಕೆಯನ್ನು ಉದಾಸೀನ ಮಾಡಬಹುದು. ಇಂತಹ ಮೊಂಡತನವು ಗರ್ವದಿಂದ ಉತ್ಪತ್ತಿಯಾದುದಾಗಿದೆ. ಒಳ್ಳೆಯ ವಿಷಯಗಳಿಗೆ ಹಟಮಾರಿಗಳಾಗಿರುವುದು ಉತ್ತಮವಾದುದು, ಆದರೆ ಅನೇಕ ವೇಳೆ ನಾವು ತಪ್ಪು ವಿಷಯಗಳಿಗೆ ಮೊಂಡರಾಗುತ್ತೇವೆ. ಇದಕ್ಕೆ ಗರ್ವವೇ ಮೂಲ ಕಾರಣ. ಸತ್ಯವೇದವು ಅಂತಹ ಕಾರ್ಯಗಳ ಫಲವು ಫಕ್ಕನೆ ನಾಶವಾಗುವುದಾಗಿದೆ ಎಂದು ಹೇಳುತ್ತದೆ.

### ಗಡಸುತನ / ಅತಿಯಾದ ದೃಢವಿಶ್ವಾಸ

ಗರ್ವದ ಮತ್ತೊಂದು ತೋರ್ಪಡಿಸುವಿಕೆಯೆಂದರೆ, ಸೊಕ್ಕು ಅಥವಾ ಮಿತಿಮೀರಿದ ಭರವಸೆ. ಜಂಭವು ದುಡುಕುತನವನ್ನು ಉತ್ಪತ್ತಿ ಮಾಡುತ್ತದೆ. ಉದಾಹರಣೆಗೆ ಜಾನಿಯು 17 ವರ್ಷ ಮುಗಿಸಿ ತಂದೆಗೆ ‘‘ಕಾರಿನ ಕೀಲಿಕೈ ಕೊಡು ನಾನು ರಸ್ತೆಯಲ್ಲಿ ವಾಹನ ಚಲಿಸಲು ಸಿದ್ಧನಿದ್ದೇನೆ’’. ಎಂದು ಹೇಳಿದರೆ, ತಂದೆಯು, ‘‘ಜಾನಿ, ನೀನು ಮೊದಲು ಚಾಲನಾ ಶಾಲೆಗೆ ಹೋಗಬೇಕು, ಆಮೇಲೆ, ನೀನು ಸ್ವತಹ ರಸ್ತೆಯ ಮೇಲೆ ಚಾಲನೆ ಮಾಡಲು ಕಲಿಕಾ ಲೈಸೆನ್ಸ್ ಪಡೆಯಬೇಕು’’ ಎಂಬುದಾಗಿ ಹೇಳಿದರೆ ಜಾನಿಯು ಅದನ್ನು ತಿರಸ್ಕರಿಸಿ ‘‘ಅಪ್ಪಾ ನಾನು 17 ವರ್ಷದವನು ನನಗೆ ಕಲಿಕಾ ಲೈಸನ್ಸ್ ಬೇಡ ನಾನು ರಸ್ತೆ ಚಾಲನೆಗೆ ಸಿದ್ಧನಿದ್ದೇನೆ’’ ಎಂದರೆ, ಅದು ಸೊಕ್ಕು ಮತ್ತು ಅತಿಭರವಸೆಯಾಗುತ್ತದೆ. ಅನೇಕ ಬಾರಿ ಇದರ ಮೂಲ ಗರ್ವವಾಗಿರುತ್ತದೆ.

ದುರಭಿಮಾನವು, ನನಗೆಲ್ಲವೂ ಗೊತ್ತಿದೆ ಎಂಬುದಾಗಿ ಆಲೋಚಿಸುವಂತೆ ಮಾಡುತ್ತದೆ. ಅದರಿಂದ ಬೇರೆಯವರ ಬುದ್ಧಿವಾದ ಮತ್ತು ಸಲಹೆಗಳನ್ನು ಕೇಳುವುದಿಲ್ಲ. ಅದಕ್ಕಾಗಿ ಯಾವುದೇ ರೀತಿಯ ಕ್ರಮವಾದ ತರಬೇತಿಯನ್ನು ದಾಟಿ ಹೋಗಲು ಬಯಸುವುದಿಲ್ಲ ಅಥವಾ ನಮಗೆ ಯಾವುದು ಅಗತ್ಯವಾದುದು ಅದನ್ನು ಮಾಡುತ್ತೇವೆ ಎಂಬುದಾಗಿ ಅವರು ಆಲೋಚಿಸುತ್ತಾರೆ. ‘‘ಮೋವಾಬ್ಯರಿಗೆ ಬಹು ಸೊಕ್ಕೇರಿದೆ ಎಂಬ ಅವರ ಹೆಮ್ಮೆಯ ಸುದ್ದಿಯೂ ಅವರ ಡಂಭ, ಅಹಂಕಾರ, ಸ್ವಾಭಿಮಾನ ಸ್ವಪ್ರತಿಷ್ಟೆ ಇವುಗಳ ಸಮಾಚಾರವೂ ನಮ್ಮ ಕಿವಿಗೆ ಬಿದ್ದಿವೆ’’- (ಯೆರೆಮೀಯ 48:29). ಆದುದರಿಂದ ಗರ್ವದಿಂದ ನಮಗೇನು ಸಿಕ್ಕುತ್ತದೆ ? ನಾವು ಇದರಿಂದ ಸೊಕ್ಕು ಮತ್ತು ಆಡಂಬರ ಕಾಣುತ್ತೇವೆ. ‘‘ನಾನು ಲೋಕದವರಿಗೆ ಅವರ

ಪಾಪದ ಫಲ ಸೊಕ್ಕಿದವರ ಸೊಕ್ಕನ್ನು ಅಡಗಿಸಿ ಭಯಂಕರರ ಹೆಮ್ಮೆಯನ್ನು ತಗ್ಗಿಸಿ'' (ಯೆಶಾಯ 13:11). ಆದುದರಿಂದ ಜಂಭವು ಗಡಸುತನವನ್ನು ಉತ್ಪತ್ತಿ ಮಾಡುತ್ತದೆ.

**''ಯೆಹೋವನ ಭಯವು ಪಾಪದ್ವೇಷವನ್ನು ಹುಟ್ಟಿಸುತ್ತದೆ, ಗರ್ವ ಅಹಂಭಾವ, ದುರ್ಮಾರ್ಗತನ, ಕುಟಿಲ ಭಾಷಣ ಇವುಗಳನ್ನು ಹಗೆ ಮಾಡುತ್ತೇನೆ** (ಜ್ಞಾನೋಕ್ತಿ 8:13).

ನಮ್ಮ ಕ್ರೈಸ್ತ ಪ್ರಪಂಚದಲ್ಲಿ ಹಲವರು ಆತ್ಮಿಕವಾಗಿ ಮುನ್ನುಗ್ಗುವಂತೆ ಕಲಿಸಲ್ಪಟ್ಟಿದ್ದಾರೆ. ''ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ'' (ಮತ್ತಾಯ 11:12). ಹೀಗಿದ್ದರೂ, ನಾವು ಆತ್ಮಿಕವಾಗಿ ಮುನ್ನುಗ್ಗುವವರಾಗಿರುವುದಕ್ಕಿಂತ, ಆತ್ಮಿಕವಾಗಿ ಆಕ್ರಮಣಶೀಲರಾಗಿರಬೇಕು. ಆತ್ಮನ ವಿಷಯಗಳಲ್ಲಿ ರಭಸವಾಗಿರುವುದು ಒಳ್ಳೆಯದೇ. ಆದರೆ, ನಾವು ಆತ್ಮಿಕ ದುರಭಿಮಾನವನ್ನು, ಆತ್ಮಿಕ ದಾಳಿತನದ ಬದಲು ಮಾಡಿದರೆ ಅಸ್ತವ್ಯಸ್ತೆತೆಯ ತೊಂದರೆ ಉಂಟಾಗುತ್ತದೆ. ನಾವು ಆತ್ಮಿಕವಾಗಿ ಗಡಸಾವಾಗುವುದನ್ನು ತೊರೆಯಬೇಕು. ಆತ್ಮಿಕ ಕೊಬ್ಬು ನಾವು ತುಂಬಾ ಉತ್ತಮರೆಂದು ಯೋಚಿಸುವಂತೆ ಮಾಡುತ್ತದೆ. ಉದಾಹರಣೆಗೆ, ನಾವು ಬಹಳ ಉತ್ತಮ ಸಭೆಯಲ್ಲಿ ಇದ್ದೇವೆ ಎಂಬುದಾಗಿ ಆಲೋಚಿಸಿ, ಇತರ ಸಭೆಗಳನ್ನು ಬಹಳ ಕೀಳಾಗಿ ನೋಡುತ್ತೇವೆ. ಆತ್ಮಿಕ ಸೊಕ್ಕು, ನಾವೇ ಸರಿಯಾಗಿ ಎಲ್ಲವನ್ನು ಹೊಂದಿರುವವರು ಮತ್ತು ಬೇರೆಯವರು ನಮ್ಮಷ್ಟು ಒಳ್ಳೆಯವರಲ್ಲಾ, ನಾವು ಕಾರ್ಯಮಾಡುವ ಮಾರ್ಗ ಬಹಳ ಉತ್ತಮ ಮಾರ್ಗ ಎಂಬುದಾಗಿ ಯೋಚಿಸುವಂತೆ ಮಾಡುತ್ತದೆ. ಇದು ನಮ್ಮ ಕ್ರೈಸ್ತತ್ವದ ವಿಧದ ಬಗ್ಗೆ ಆಲೋಚಿಸುವಂತೆ ಮಾಡುತ್ತದೆ. (ಅಂತಹ ವಿಷಯಗಳಿದ್ದರೆ) - ಇದು ಶ್ರೇಷ್ಟವಾದುದು ಮತ್ತು ಪರಿಪೂರ್ಣ ಮಾರ್ಗವೆನ್ನುತ್ತೇವೆ. ಇಂತಹ ವಿಷಯಗಳ ಬಗ್ಗೆ ನಾವೇ ನಮ್ಮನ್ನು ಕಾಪಾಡಿಕೊಳ್ಳಬೇಕು.

ನಾವು ದೇವರ ವಾಕ್ಯದ ಸತ್ಯದಲ್ಲಿ ನಿಲ್ಲಬೇಕು, ಆತ್ಮಿಕ ಹೆಮ್ಮೆಯು ನಾವು ವೈಯಕ್ತಿಕವಾಗಿ ಸತ್ಯದ ದೈವ ಪ್ರೇರಣೆಯಲ್ಲಿ ಶ್ರೇಷ್ಟರೆಂದು (ಮಹತ್ವವುಳ್ಳ) ಆಲೋಚಿಸುವಂತೆ ಮಾಡುತ್ತದೆ. ಮತ್ತು ಅದು ''ನಾವು ಅಂತ್ಯದ ಆಳವಾದ ಪರಿಶೋಧನೆಗಳನ್ನು ಹೊಂದಿದ್ದೇವೆ, ನಮ್ಮ ಮಾರ್ಗ ದೇವರ-ದೀಕ್ಷೆಯ ಮಾರ್ಗಗಳು ಮತ್ತು ಬೇರೆ ರೀತಿಯ ದಾರಿಯು ಕೆಳಮಟ್ಟದ್ದು'' ಎಂದು ತಿಳಿಯುವಂತೆ ಮಾಡುತ್ತದೆ. ಇದು 'ಅಹಂ'ನಲ್ಲಿ ದೃಢತೆ ಮೂಡಿಸುತ್ತದೆ. ಸ್ವ-ಪ್ರಾಮುಖ್ಯತೆ, ವೈಯಕ್ತಿಕ ಮನವರಿಕೆಗೆ

ಒತ್ತಾಸೆಕೊಡುವುದು, ಪದ್ಧತಿಗಳು, ಶೈಲಿಗಳು ಮತ್ತು ತತ್ವದೆಡೆಗೆ ಒಲವುಗಳನ್ನು ಪ್ರೋತ್ಸಾಹಿಸುತ್ತದೆ ಇವುಗಳಲ್ಲಿ ''ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ''. (1 ಕೊರಿಂಥದವರಿಗೆ 12:6) ಎಂಬ ಸಂಗತಿಯನ್ನು ಅಲಕ್ಷ್ಯ ಮಾಡುತ್ತೇವೆ. ಇವೆಲ್ಲವುಗಳ ಕುರಿತು ನಾವು ತೀವ್ರವಾಗಿ ಜಾಗ್ರತೆಯಿಂದಿರಬೇಕು. ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು. ನಮ್ಮ ಸಭೆಯಲ್ಲಿ ಕಾರ್ಯ ಮಾಡುವ ದೇವರು ಬೇರೆ ಸಭೆಯ ಮಧ್ಯದಲ್ಲೂ ಕಾರ್ಯಮಾಡಬಹುದು. ಆದುದರಿಂದ ನಮ್ಮ ಮಾರ್ಗಗಳೇ ಸರಿಯಾದ ಮಾರ್ಗಗಳೆಂದು ಹೇಳಲು ಸಾಧ್ಯವಿಲ್ಲ.

ನಾನು ದೇವರ ವಾಕ್ಯ ಪ್ರಸಂಗಿಸುವದರಲ್ಲಿ ಮತ್ತು ಬೋಧಿಸುವದರಲ್ಲಿ ಬಹಳ ಸಮಯ ಕಳೆದಿದ್ದೇನೆ, ಆದರೆ ಕೆಲವು ಸಂದರ್ಭಗಳಲ್ಲಿ ನಾನು ಟೇಪು ಕೇಳುತ್ತೇನೆ. ಪುಸ್ತಕ ಓದುತ್ತೇನೆ ಮತ್ತು ಬೇರೆ ಸಂದೇಶಕರು ಟಿ.ವಿ.ಯಲ್ಲಿ ಪ್ರಸಂಗಿಸುವಾಗ ಅದನ್ನು ನೋಡುತ್ತೇನೆ ಮತ್ತು ಕೇಳುತ್ತೇನೆ. ಈ ಸಮಯಗಳಲ್ಲಿ ನಾನು ವಿದ್ಯಾರ್ಥಿಯಂತೆ ಕುಳಿತಿರುತ್ತೇನೆ. ನಾನು ಅನೇಕ ಪ್ರಸಂಗಗಳನ್ನು ಮಾಡಿರಬಹುದು. ಆದರೆ ಯಾರಾದರೂ ನನಗಿಂತಲೂ 10 ವರ್ಷ ಚಿಕ್ಕಪ್ರಾಯದ ಅಥವಾ 50 ವರ್ಷ ವಯಸ್ಸಿನ ದೊಡ್ಡ ವಯಸ್ಸಿನವರು ಪ್ರಸಂಗಿಸುವಾಗ, ದೇವರು ಇವರನ್ನು ನನ್ನೊಂದಿಗೆ ಮಾತನಾಡಲು ಉಪಯೋಗಿಸುತ್ತಿದ್ದಾರೆಂದು ತಿಳಿದು ಪ್ರಸಂಗಗಳನ್ನು ಕೇಳುತ್ತೇನೆ. ಆದರೆ ಆತ್ಮಿಕ ಸೊಕ್ಕು ನಮಗಿಂತಲೂ ಕೆಲವು ವರ್ಷಗಳು ಚಿಕ್ಕವರಿರುವವರ ಪ್ರಸಂಗಗಳನ್ನು ಕೇಳದಂತೆ ದೂರಬಿಡುತ್ತದೆ. ದೇವರ ವಾಕ್ಯದಲ್ಲಿರುವ ಕರ್ತನು ಕತ್ತೆಯ ಮೂಲಕವಾಗಿ ಮಾತನಾಡಿದುದನ್ನು ನೆನಪಿಸಿಕೊಳ್ಳಬೇಕು.

## ಬಂಡಾಯ (ತಿರುಗಿ ಬೀಳುವುದು)

ಬಂಡಾಯವು ಸಹ ಗರ್ವದ ಮೂಲವನ್ನು ತೋರ್ಪಡಿಸುವುದಾಗಿದೆ. ಆತನ ವಚನ, ಆತನ ಆತ್ಮನು, ಆತನ ಜನರು ಈ ಮೂರು ಮಾರ್ಗಗಳಲ್ಲಿ ದೇವರ ನಿಯಮಿತ ಅಧಿಕಾರಕ್ಕೆ ನಮ್ಮನ್ನು ಒಪ್ಪಿಸಿಕೊಡಲು ಇಷ್ಟವಿಲ್ಲದಿರುವುದು. ಉದಾಹರಣೆ, ತಂದೆ ತಾಯಂದಿರು ನಮ್ಮ ಜೀವಿತಗಳ ಮೇಲೆ ನಿಯಮಿತ ಅಧಿಕಾರ ಹೊಂದಿದ್ದಾರೆ. ನಾವು ಇಷ್ಟಪಟ್ಟರೂ ಅಥವಾ ಇಷ್ಟವಿಲ್ಲದಿದ್ದರೂ ಅದನ್ನು ಅಂಗೀಕರಿಸಬೇಕು. ಜಂಭವು, ಒಬ್ಬ ವ್ಯಕ್ತಿ ದೈವ ನಿಯಮಿತ ಅಧಿಕಾರಕ್ಕೆ ವಿರುದ್ಧವಾಗಿ ಬಂಡಾಯದಲ್ಲಿ ನಡೆಯುವಂತೆ ಮಾಡುತ್ತದೆ. ಅಪೂರ್ಣ ವಿಧೇಯತೆಯು ತಿರುಗಿ ಬೀಳುವುದು ಅಥವಾ

ಬಂಡಾಯ ಎಂಬುದಾಗಿ ಪರಿಗಣಿಸಲ್ಪಡಬಹುದು. ಹಲವರು ದೇವರಿಗೆ ಸ್ವಲ್ಪಮಟ್ಟಿಗೆ ವಿಧೇಯರಾಗುತ್ತಾರೆ. ದೇವರು, ಸೌಲನೊಟ್ಟಿಗೆ ಮಾತಾನಾಡಿ ಅಮಾಲೇಕ್ಯರನ್ನು ನಾಶಪಡಿಸಲು ನಿಶ್ಚಿತ ಸೂಚನೆಗಳನ್ನು ನೀಡಿದ್ದನು. (1 ಸಮುವೇಲನು 15). ಆದರೆ ಸೌಲನು ಆಜ್ಞೆಗೆ ಭಾಗಶಃ ಮಾತ್ರ ವಿಧೇಯನಾದನು. ಕೆಲವು ಭಾಗಗಳನ್ನು ಮಾತ್ರ ನಾಶಪಡಿಸಿ, ಅರಸನು ಮತ್ತು ಅನೇಕ ಪ್ರಾಣಿಗಳು ಜೀವದಿಂದುಳಿಯುವಂತೆ ಮಾಡಿದನು. ಸಮುವೇಲನು, ಸೌಲನಿಗೆ, ಯಾಕೆ ಇಂತಹ ಕಾರ್ಯ ಮಾಡಿದೆ ಎಂದು ಕೇಳಿದಾಗ, ಸೌಲನು ಉಳಿದ ಎಲ್ಲವುಗಳನ್ನು ಕರ್ತನಿಗೆ ಯಜ್ಞವಾಗಿ ಸಮರ್ಪಿಸಬೇಕೆಂದಿದ್ದೇನೆ ಎಂದು ಉತ್ತರ ಕೊಟ್ಟನು. ಅದಕ್ಕೆ ಸಮುವೇಲನು ‘‘ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದ್ದಾಗಿರುವದು ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವುದು ನೀನು ಯೆಹೋವನ ಮಾತನ್ನು ತಳ್ಳಿಬಿಟ್ಟಿದ್ದರಿಂದ ಆತನು ನಿನ್ನನ್ನು ಅರಸುತನದಿಂದ ತಳ್ಳಿಬಿಟ್ಟಿದ್ದಾನೆ ಎಂದು ನುಡಿದನು’’ (1 ಸಮುವೇಲನು 15:23).

ಅಪೂರ್ಣ ವಿಧೇಯತೆಯು ಸೌಲನ ತಪ್ಪಾಗಿತ್ತು. ನಮ್ಮಲ್ಲಿ ಅನೇಕರು ದೇವರಿಗೆ ‘‘ನಾನು ಕಾಣಿಕೆಯನ್ನು ಕೊಡುತ್ತೇನೆ ಆದರೆ ನನ್ನ ದಶಮಭಾಗ ಮಾತ್ರ ಕೇಳಬೇಡ’’ ಎಂಬುದಾಗಿ ಹೇಳುತ್ತೇವೆ. ಭಾಗಶಃ ವಿಧೇಯತೆಯು ಸಹ ದಂಗೆಯಾಗಿರುತ್ತದೆ.

ಲೂಸಿಫರನು ಅತ್ಯಂತ ಗರ್ವದಿಂದಾಗಿ ಬೃಹತ್ ಬಂಡಾಯ ಮಾಡಿದನು. ಯೆಶಾಯ 14:12-15ರಲ್ಲಿ ಲೂಸಿಫರನ ಬೀಳುವಿಕೆಯ ಕುರಿತು ಓದುತ್ತೇವೆ. ‘‘ಆಹಾ ಉದಯ ನಕ್ಷತ್ರವೇ, ಬೆಳ್ಳಿಯೇ, ಅಕಾಶದಿಂದ ಹೇಗೆ ಬಿದ್ದೆ ! ಜನಾಂಗಗಳನ್ನೂ ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯೆಲ್ಲಾ! ನೀನು ನಿನ್ನ ಮನಸ್ಸಿನಲ್ಲಿ ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ - ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಅಸೀನನಾಗುವೆನು; ಉನ್ನತ ಮೇಘ ಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದುಕೊಂಡಿದ್ದೆಯಲ್ಲಾ! ಆದರೆ ನೀನು ಪಾತಾಳಕ್ಕೆ ಅಧೋಲೋಕದ ಅಗಾಧ ಸ್ಥಳಗಳಿಗೆ, ತಳ್ಳಲ್ಪಡುತ್ತಿದ್ದೀ’’ ಇದೊಂದು ಗರ್ವದಿಂದ ಜನಿಸಿ ಇತಿಹಾಸ ಪುಟಗಳಲ್ಲಿ ಸೇರ್ಪಡೆಯಾದ ಬೃಹತ್ ಬಂಡಾಯದ ಕೃತ್ಯವಾಗಿದೆ.

ಕೆಲವು ಸಮಯಗಳಲ್ಲಿ ಯೌವನಸ್ಥರು ಬೆಳೆಯುವಾಗ ತಾವು, ತಮ್ಮ ತಂದೆ ತಾಯಂದಿರಿಗಿಂತಲೂ ಹೆಚ್ಚಾಗಿ ತಿಳಿದುಕೊಂಡಿದ್ದೇವೆ ಎಂಬುದಾಗಿ ಭಾವಿಸುತ್ತಾರೆ.

ತಾವು ಮಾತ್ರವೇ ಪ್ರೌಢಿಮೆ ಹೊಂದಿದವರು, ಜಗತ್ತಿನ ಬಿಸಿಸುದ್ದಿ ಮತ್ತು ಗಣನೀಯತೆಯನ್ನು ಮುಟ್ಟುವವರು ಮತ್ತು ಪ್ರಸಕ್ತರು ಅಂದುಕೊಳ್ಳುತ್ತಾರೆ. ನಮ್ಮ ತಂದೆ ತಾಯಂದಿರುಗಳು ಸುಮಾರು ವರ್ಷ ಕಳೆದವರು ಮತ್ತು ಸಂಬಂಧ ತಪ್ಪಿದವರೆಂದುಕೊಳ್ಳುತ್ತೇವೆ. ಮತ್ತು ಅವರ ಬುದ್ಧಿವಾದ ಮತ್ತು ಸಲಹೆಗಳಿಗೆ ಯಾವಾಗಲೂ ದಂಗೆ ಏಳುವವರಾಗಿರುತ್ತೇವೆ. ಇದು ನಮ್ಮನ್ನು ಬಂಡಾಯವೆಂಬ ಅಪಾಯಕಾರಿ ಸ್ಥಳದಲ್ಲಿರಿಸುತ್ತದೆ. ಜೀವಿತದ ಆಶೀರ್ವಾದದ ರಹಸ್ಯಗಳು ಎಫೆಸ 6:1-3ರಲ್ಲಿವೆ, ''ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆತಾಯಿಗಳ ಮಾತನ್ನು ಕೇಳಬೇಕು, ಇದು ಧರ್ಮ. ವಾಗ್ದಾನ ಸಹಿತವಾದ ಮೊದನೆಯ ಆಜ್ಞೆಯನ್ನು ಕೇಳಿರಿ - ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು. ಸನ್ಮಾನಿಸಿದರೆ ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ''. ನಾವು ಪರೀಕ್ಷೆಗಳನ್ನು ಬರೆಯುವ ಸಮಯದಲ್ಲಿ, ಕಾಲೇಜು ದಾಖಲಾತಿ ಸಮಯ, ನಮ್ಮ ಉದ್ಯೋಗ ಪ್ರಯತ್ನ, ಒಳ್ಳೆಯ ಆರೋಗ್ಯ ಮತ್ತು ದೀರ್ಘಾಯುಷ್ಯದ ಆಶೀರ್ವಾದಗಳನ್ನು ಪಡೆಯುವಾಗ ಮಾತ್ರ ದೇವರು ಅವಶ್ಯಕವೆಂದು ಕಾಣಿಸುತ್ತದೆ. ನಮಗೆ ಮೇಲಾಗಬೇಕು ಇವೆಲ್ಲವೂ ಬೇಕು, ಮತ್ತು ನಮ್ಮೊಂದಿಗೆ ಮುಂದುವರೆಯಬೇಕು, ಎಂಬುದಾಗಿ ಬಯಸಿದರೆ, 'ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು, ಇವೆಲ್ಲವೂ ನಿನ್ನೊಂದಿಗೆ ಮುಂದುವರೆಯುತ್ತವೆಂದು ಕರ್ತನು ಹೇಳುತ್ತಾನೆ? ಇದು ವಾಗ್ದಾನ ಸಹಿತವಾದ ಮೊದಲನೆಯ ಆಜ್ಞೆಯಾಗಿದೆ. ನೀನು ಸನ್ಮಾನಿಸಿದರೆ ''ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ ''ಎಂಬುದಾಗಿ ದೇವರು ಹೇಳುತ್ತಾನೆ''. ನಮ್ಮ ತಂದೆ ತಾಯಿಗಳನ್ನು ಸನ್ಮಾನಿಸಬೇಕು. ಅವರಿಗೆ ಮೀಸಲಾದ ಘನತೆ ಗೌರವಗಳನ್ನು ಕೊಡಬೇಕು.

ಇದನ್ನು ಹೇಳಿದ ಮೇಲೂ ಸತ್ಯವೇದ ಹೇಳುತ್ತದೆ. ''ಕರ್ತನಲ್ಲಿ'' ನೀವು ನಿಮ್ಮ ತಂದೆತಾಯಂದಿರಿಗೆ ವಿಧೇಯರಾಗಿ ಎಂದು ಹೇಳುತ್ತದೆ ಆದುದರಿಂದ ತಂದೆತಾಯಿಗಳೇನಾದರೂ ಕೆಲವು ಸಂದಿಗ್ಧ ಪರಿಸ್ಥಿತಿಗಳಲ್ಲಿ ದೇವರ ವಾಕ್ಯಕ್ಕೆ ತದ್ವಿರುದ್ಧವಾಗಿ ಕಾರ್ಯಗಳನ್ನು ಮಾಡಿರಿ ಎಂದರೆ ನೀವು ಖಂಡಿಸುವ ಮತ್ತು ದೇವರ ವಾಕ್ಯದೊಡನೆ ನಿಲ್ಲುವ ಅಧಿಕಾರವಿದೆ.

ನಾನು ಯೌವನಸ್ಥನಾಗಿದ್ದಾಗ. ಮೆಥೋಡಿಸ್ಟ್ ಸಭೆಯ ರಜಾದಿನದ ಸತ್ಯವಾದ ಶಾಲೆ (ವಿ.ಬಿ.ಎಸ್)ಗೆ ಹಾಜರಾಗಿದ್ದೆ. ಅಲ್ಲಿ ನಾವು, ಮನೆಯಲ್ಲಿ ಕೆಲಸ ಮಾಡಿ,

ಹಣಗಳಿಸಿ ಅದನ್ನು ಕರ್ತನಿಗೆ ಕಾಣಿಕೆಯಾಗಿ ಕೊಡಬಹುದೆಂದು ಪ್ರೋತ್ಸಾಹಿಸಲ್ಪಟ್ಟೆವು. ಆದರಿಂದ ನನ್ನ ತಂದೆಯ ಶೂಸ್ ಪಾಲೀಷ್ ಮಾಡಿ ಹಣ ಸಂಪಾದಿಸುತ್ತೇನೆಂದು ತೀರ್ಮಾನಿಸಿದೆನು. ರಜಾ ಸತ್ಯವೇದ ಶಾಲೆ ಮುಗಿದ ಮೇಲೆ, ನಾನು ಇದು ನಿಶ್ಚಯವಾಗಿ ಹಣ ಸಂಪಾದಿಸಲು ಒಳ್ಳೆಯ ಮಾರ್ಗವೆಂದು ತಿಳಿದು ಪ್ರತಿದಿನ ನನ್ನ ತಂದೆಯ ಶೂಸ್ ಪಾಲೀಷ್ ಮಾಡುತ್ತಿದ್ದೆನು ಮತ್ತು ಲೆಕ್ಕವಿಟ್ಟುಕೊಂಡು, ಪ್ರತಿ ತಿಂಗಳ ಕೊನೆಯಲ್ಲಿ ಪಾವತಿಸಲ್ಪಡುತ್ತಿದ್ದೆನು. ಇದರ ಜೊತೆಗೆ ಪ್ರತಿದಿನ ಬೆಳಿಗ್ಗೆ ನನ್ನ ತಂದೆಯ ಬಟ್ಟೆಗಳನ್ನು ಇಸ್ತ್ರಿ ಮಾಡುತ್ತಿದ್ದೆನು. ಇದೊಂದು ಸನ್ಮಾನ ಮತ್ತು ಗೌರವದ ಕೆಲಸವಾಗಿತ್ತು. ಮತ್ತು ನನ್ನ ತಂದೆಯ ಜೀವಿತದ ಸಾಧನೆಯಲ್ಲಿ ನಾನು ಸಹ ಭಾಗಿಯಾದೆನು ಎಂದು ಅನ್ನಿಸಿತು. ಕೆಲವು ಬೆಳಿಗ್ಗೆ ದಿನ ಸಮಯದಲ್ಲಿ ಇವುಗಳನ್ನು ಮಾಡಲು ಮನಸ್ಸಾಗುತ್ತಿರಲಿಲ್ಲ. ಆದರೆ 'ನಿನ್ನ ತಂದೆಯತಾಯಿಗಳನ್ನು ಸನ್ಮಾನಿಸಿದರೆ ನಿನಗೆ ಮೇಲಾಗುವುದು' ಎಂಬ ದೇವರ ಆಜ್ಞೆಯನ್ನು ನನ್ನೊಳಗೆ ನೆನಸಿಕೊಳ್ಳುತ್ತಿದ್ದೆನು ನನಗೆ ಉತ್ತಮ ಜೀವಿತ ಬೇಕಾಗಿತ್ತು ಅದಕ್ಕೆ ದೇವರಿಗೆ ''ನಾನು ನಿನ್ನ ವಾಕ್ಯಕ್ಕೆ ವಿಧೇಯನಾಗುತ್ತಿದ್ದೇನೆ. ಈಗ ನನಗೆ ಮೇಲನ್ನುಂಟುಮಾಡು'' ಎಂದು ಕೇಳುತ್ತಿದ್ದೆನು. ನಾವು ಮನೆಯಲ್ಲಿನ ದೈವ ನಿಯಮಿತ ಅಧಿಕಾರಕ್ಕೆ ನಮ್ಮ ಕೆಲಸದ ಸ್ಥಳದಲ್ಲಿ, ಮತ್ತು ದೇವರ ಮನೆಯಲ್ಲಿ, ಸಾಮಾನ್ಯ ಕ್ರಿಯಾತ್ಮಕ ಮಾರ್ಗದಲ್ಲಿ ಸನ್ಮಾನಿಸಿದರೆ, ನಮ್ಮ ಜೀವಿತಗಳಲ್ಲಿ ಕರ್ತನಿಂದ ಆಶೀರ್ವಾದ ಹೊಂದುತ್ತೇವೆ.

## ನಿಂದನೆ ಅಥವಾ ತಿರಸ್ಕಾರ ಮಾಡುವುದು

ಗರ್ವದ ನಾಲ್ಕನೇ ತೋರ್ಪಡಿಸುವಿಕೆಯೆಂದರೆ ನಿಂದಾತ್ಮಕನಾಗಿರುವುದು. ನಿಂದಾತ್ಮಕನಾಗಿರುವುದು ಅಂದರೆ ಬೇರೆಯವರನ್ನು ಅಣಕಿಸುವ ಗೌರವಕೊಡದಿರುವ, ಹೀಯಾಳಿಸುವ ತಿರಸ್ಕಾರ ಮಾಡುವದು ಎಂದರ್ಥ. ಇದು ಒಬ್ಬನು, ಮತ್ತೊಬ್ಬನ ಮೇಲೆ ಟೀಕೆಗಳನ್ನು ಮಾಡುವುದರಲ್ಲೂ ಮತ್ತು ಬೇರೆ ಜನರ ಬಗ್ಗೆ ಇರುವ ಅಭಿಪ್ರಾಯಗಳನ್ನು ತೋರಿಸುವುದೂ ಆಗಿದೆ. ಇತರರ ಬಗ್ಗೆ ಒಳ್ಳೆಯದನ್ನು ಹೇಳುವವರು ಅಪರೂಪವಾಗಿ ಸಿಗುತ್ತಾರೆ. ಆದರೆ ಅವರು ಇತರರ ಹೆಸರು ಕೆಡಿಸುವವರು ಮತ್ತು ಯಾವಾಗಲೂ ಕೀಳಾಗಿ ಮಾತಾಡುವವರಾಗಿರುತ್ತಾರೆ. ಇದು ನಿಂದೆ ಮಾಡುವುದಾಗಿದ್ದು ಗರ್ವದಿಂದ ಜನಿಸುವುದಾಗಿರುತ್ತದೆ. ಸತ್ಯವೇದವು ನಿಂದನೆಗಾರರು, ಜನರನ್ನು ನಿಂದಿಸುವುದರಲ್ಲಿ ಹೇಗೆ ಸಂತೋಷಿಸುತ್ತಾರೆ ಎಂಬುದನ್ನು ತಿಳಿಸುತ್ತದೆ.

''ಧರ್ಮನಿಂದಕರು ನಿಂದಿಸುವದಕ್ಕೆ ಎಷ್ಟು ಕಾಲ ಇಷ್ಟಪಡುವರು'' (ಜ್ಞಾನೋಕ್ತಿ 1:22ಬಿ) ''ಯಾರು ಧರ್ಮವನ್ನು ತಿರಸ್ಕರಿಸುವರೋ ಅವರನ್ನು ಆತನು ತಿರಸ್ಕರಿಸುವನು ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುವನು'' (ಜ್ಞಾನೋಕ್ತಿ 1:34). ತಿರಸ್ಕರಿಸುವವರನ್ನು ದೇವರು ತಿರಸ್ಕರಿಸುವನು ಎಂಬುದು ಎಚ್ಚರಿಕೆಯಾಗಿದೆ ''ಸೊಕ್ಕೇರಿದವನು ಮತ್ತು ಅಹಂಕಾರಿಯು - ''ಅಪಹಾಸ್ಯಗಾರ''ನೆಂಬ ಹೆಸರು ಹೊಂದಿದ್ದಾನೆ. ಅವನು ಗರ್ವದಿಂದ ಪ್ರವರ್ತಿಸುವನು (ಜ್ಞಾನೋಕ್ತಿ 21:24) ನಿಂದೆ ಮಾಡುವವನಾಗಿದ್ದರೆ ಅದರಿಂದ ತೊಂದರೆಗಳನ್ನು ಉತ್ಪಾದಿಸುತ್ತವೆ ಎಂದು ನಾವು ಎಚ್ಚರಿಸಲ್ಪಟ್ಟಿದ್ದೇವೆ.

''ಧರ್ಮನಿಂದಕರು ಪಟ್ಟಣಕ್ಕೆ ಬೆಂಕಿಯನ್ನು ಹತ್ತಿಸುವರು ಜ್ಞಾನಿಗಳೋ ರೋಷಾಗ್ನಿಯನ್ನಾರಿಸುವರು (ಜ್ಞಾನೋಕ್ತಿ 29:8).

**ಸ್ವ-ನೀತಿ / ಕಪಟತನ**

ಫರಿಸಾಯನ ಮತ್ತು ಸುಂಕದವನ ಪ್ರಾರ್ಥನೆಯಲ್ಲಿನ ಹೋಲಿಕೆಗಳನ್ನು ಗಮನಿಸೋಣ.

**''ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸೆಯಿಟ್ಟುಕೊಂಡು ಉಳಿದವರನ್ನು ಉದಾಸೀನ ಮಾಡುವಂಥ ಕೆಲವರಿಗೆ ಯೇಸು ಒಂದು ಸಾಮ್ಯವನ್ನು ಹೇಳಿದನು. ಅದೇನೆಂದರೆ - ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ - ದೇವರೆ, ಸುಲುಕೊಳ್ಳುವವರೂ, ಅನ್ಯಾಯಗಾರರೂ, ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಅದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ. ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರರಲ್ಲೊಂದು ಪಾಲು ಕೊಡುತ್ತೇನೆ. ಅಂದುಕೊಂಡನು. ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು. ತಗ್ಗಿಸಲ್ಪಡುವನು ತನ್ನನ್ನು ತಗ್ಗಿಸಿಕೊಳ್ಳವವನು ಹೆಚ್ಚಿಸಲ್ಪಡುವನು ಅಂದನು'' (ಲೂಕ 18:9-14).**

ಅನೇಕ ವೇಳೆ, ನಾವು ನೀತಿವಂತರೆಂದು ನಂಬುತ್ತೇವೆ ಮತ್ತು ಇತರರನ್ನು ಅಲ್ಲೆಗಳೆಯುತ್ತೇವೆ. ಜಂಭವು ಸ್ವ-ನೀತಿಯನ್ನು ಸೃಷ್ಟಿಸುತ್ತದೆ ಅದು ಕಪಟತನದೆಡೆಗೆ ನಡೆಸುತ್ತದೆ. ಸ್ವ-ನೀತಿಯು ನಮ್ಮೊಳಗಿರುವ ಲೋಪದೋಷಗಳನ್ನು

ಗುರ್ತಿಸಿಕೊಳ್ಳದೇ, ನಾವು ಇತರರಿಗಿಂತ ಉತ್ತಮರು ಎಂದು ತಿಳಿಯುವಂತೆ ಮತ್ತು ಬೇರೆಯವರ ಬಗ್ಗೆ ನಾವು ನ್ಯಾಯ ತೀರ್ಪು ಮಾಡುವಂತೆ ಪ್ರೇರೇಪಿಸುತ್ತದೆ. ಕಪಟಿಯು ಇತರರ ಪಾಪಗಳನ್ನು ಖಂಡಿಸಿ, ತಾನು ಮಾಡಿದ ಪಾಪಗಳಿಗೆ ನೆಪ ಹೇಳುತ್ತಾನೆ ಉದಾಹರಣೆಗೆ ನಾವು ಯಾರಾದರೂ ಒಬ್ಬನಿಗೆ ಅಥವಾ ಒಬ್ಬಳಿಗೆ, ಈ ದಿನ ಸತ್ಯವೇದ ಓದಿದ್ದೀರಾ, ಎಂಬುದಾಗಿ ಅವರಲ್ಲಿ ತಪ್ಪು ಭಾವವುಂಟಾಗುವ ಪ್ರಶ್ನೆ ಕೇಳಬಹುದು. ಆ ಕಾರಣದಿಂದ ನಿನ್ನೊಳಗೆ ನೀನೇ ಆ ಪ್ರಶ್ನೆ ಕೇಳಿಕೊಂಡರೆ, ನೀನು ಈ ದಿನದಲ್ಲಿ ಸತ್ಯವೇದ ಓದದೇ ಇರುವುದಕ್ಕೆ ತುಂಬಾ ಒಳ್ಳೆಯ ಕಾರಣಕೊಟ್ಟು ನಿನ್ನೊಳಗೆ ನೀನೇ ನೆಪಹೇಳಿಕೊಳ್ಳುವವನಾಗಿರುತ್ತೀ.

**''ತೀರ್ಪು ಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವುದು ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವದೇಕೆ? ನೀನು ನಿನ್ನ ಸಹೋದರನಿಗೆ ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವುದು ಹೇಗೆ ನಿನ್ನ ಕಣ್ಣಿನಲ್ಲಿ ತೊಲೆಯದೆಯಲ್ಲಾ, ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ; ಆಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವದಕ್ಕೆ ಚೆನ್ನಾಗಿ ಕಾಣಿಸುವುದು.,''** (ಮತ್ತಾಯ 7:1-5).

ಇತರರನ್ನು ತೀರ್ಪು ಮಾಡುವ ಪಾಪವನ್ನು ನಾವು ತೊಲಗಿಸಬೇಕು ಯಾಕೆಂದರೆ ಅದು ನಮ್ಮಲ್ಲಿರುವ ವಿಷವನ್ನು ನಾವು ತಿಳಿಯದಂತೆ ಮಾಡುತ್ತದೆ. ನಮ್ಮಲ್ಲಿ ಕೆಲವರು, ಇತರರಲ್ಲಿ ತಪ್ಪು ಹುಡುಕುವುದರಲ್ಲಿ ಪ್ರವೀಣರಾಗಿದ್ದಾರೆ. ನಮ್ಮ ಜೀವಿತಗಳಲ್ಲಿರುವ ''ತೊಲೆ''ಯನ್ನು ಗುರ್ತಿಸುವುದರಲ್ಲಿ ಮಂದಗತಿಯಲ್ಲಿದ್ದರೆ ಬೇರೆಯವರನ್ನು ತೀಪು ಮಾಡುವುದರಿಂದ ನಾವು ಪರಿಶುದ್ಧರಾಗುವುದಿಲ್ಲ. ಇಲ್ಲವೇ ಇತರರಲ್ಲಿ ತಪ್ಪುಗಳನ್ನು ಹುಡುಕುವುದರಿಂದ ನಾವು ದೇವರ ಸಮೀಪಕ್ಕೆ ಬರುವವರಾಗಿರುವುದಿಲ್ಲ. ಈ ರೀತಿಯ ''ತಪ್ಪು - ಹುಡುಕುವ ಸೇವೆ'' ನಮ್ಮನ್ನು ದೇವರ ಹತ್ತಿರಕ್ಕೆ ಕರೆದೊಯ್ಯಲಾರದು. ವಿಮರ್ಶೆ ಒಳ್ಳೇಯದು ಆದರೆ ಕರ್ತನ ಮನೆಯಲ್ಲಿ ಜೊತೆ ಸಹೋದರ ಮತ್ತು ಸಹೋದರಿಯ ಮೇಲೆ ತೀರ್ಪು ಮಾಡುವ ಮೊದಲು ನಾವು ಜಾಗರೂಕರಾಗಿರಬೇಕು. ಕ್ರಿಸ್ತನು ಸ್ವರ್ಗಾರೋಹಣನಾಗಿ ಸಿಂಹಾಸನರೂಢನಾಗುವ ಮೊದಲು ಪಾಪಿಗಳಿಗೋಸ್ಕರ ಪ್ರಾಣಕೊಟ್ಟನು ಆತನು ಒಂದು ದಿನದಲ್ಲಿ ನಮಗೆ ನ್ಯಾಯಾಧಿಪತಿಯಾಗಿ ಬರುತ್ತಾನೆ. ದೇವರ ರಾಜ್ಯದಲ್ಲಿ ನಾವೂ ಮೊದಲು ಜೀವಿತಗಳನ್ನು ಜನರಿಗೆ ಒಪ್ಪಿಸಿಕೊಡದೇ ಹೋದರೆ, ನಾವು ಅವರ ನಾಯಕರು ಅಥವಾ ನ್ಯಾಯಾಧಿಪತಿಗಳಾಗುವ ಅಧಿಕಾರ

ನಮಗಿರುವುದಿಲ್ಲ. ಆದುದರಿಂದ ಜನರನ್ನು ತೀರ್ಪು ಮಾಡುವ ಮೊದಲು ನಾವು ಅವರಿಗಾಗಿ ಸಾಯಲೂ ಸಿದ್ದರಾಗಿದ್ದೇವೋ, ಅವರಿರುವಂತಹ ಸ್ಥಿತಿಯಿಂದ ಸಂಪೂರ್ಣತೆಯ ಸ್ಥಳಕ್ಕೆ ಕರೆತರಲು ಸಿದ್ದರಿದ್ದೇವೋ ಎಂಬುದಾಗಿ ಪರೀಕ್ಷಿಸಿಕೊಳ್ಳಬೇಕು. ನಾವು ಯಾವಾಗಲೂ ಪಾಪ, ಅನ್ಯಾಯ ಮತ್ತು ಅನೀತಿಗೆ ವಿರುದ್ಧವಾಗಿ ಮಾತಾನಾಡಲು, ನಾವು ಸಂಪೂರ್ಣತೆ, ಪೂರ್ವಸ್ಥಿತಿಗೆ ತರುವ ಸಂಬಂಧ ಮತ್ತು ದೇವರ ಪ್ರೀತಿಯಿಂದ ಪ್ರೇರಿಸಲ್ಪಟ್ಟಿರಬೇಕು. ಅದು ನಮ್ಮ ಪ್ರೇರಣೆ ಅಥವಾ ಗುರಿಯಾಗಿಲ್ಲದಿದ್ದರೆ ಸುಮ್ಮನೆ ಇರುವುದನ್ನು ಕಲಿತುಕೊಳ್ಳಬೇಕು !

**ಜಗಳಗಂಟತನ / ಕಲಹ ಪ್ರಿಯರಾಗಿರುವುದು.**

ಕೆಲವು ಬಾರಿ ನಾವು ಬಹುಗ್ರವಾದಸ್ತರು ಮತ್ತು ಜಗಳಗಂಟಿಗಳಾಗಿರುತ್ತೇವೆ. ಇದು ಗರ್ವದ ಮೂಲದಿಂದ ಬಂದಿರುತ್ತದೆ. ''ಹೆಮ್ಮೆಯ ಫಲವು ಕಲಹವೇ ಬುದ್ದಿವಾದಕ್ಕೆ ಕಿವಿಗೊಡುವವರಲ್ಲಿ ಜ್ಞಾನ.'' (ಜ್ಞಾನೋಕ್ತಿ 13 : 10). ''ಆಸೆಬಡುಕನು ಜಗಳವನ್ನೆಬ್ಬಿಸುವನು; ಯೆಹೋವನಲ್ಲಿ ಭರವಸೆಯಿಡುವವನು ಪುಷ್ಟನಾಗುವನು'' ಜ್ಞಾನೋಕ್ತಿಗಳು 28:25) ಹೀಗೆ, ಗರ್ವವು ಜಗಳವನ್ನು ಉತ್ಪತ್ತಿ ಮಾಡುತ್ತದೆ.

**ಪಕ್ಷಪಾತ**

ಗರ್ವವು, ಪಕ್ಷಪಾತಕ್ಕೂ ಜನನ ನೀಡುತ್ತದೆ. ಪಕ್ಷಪಾತವನ್ನು ತಾರತಮ್ಯ, ವಕ್ರಗತಿ, ಅಸಹನೆ ಮತ್ತು ಕೆಲವು ವರ್ಗಗಳ ಜನರುಗಳ ಮೇಲೆ ಇಷ್ಟವಿಲ್ಲದ ಮನೋಭಾವ ಉಂಟುಮಾಡುವುದು ಎಂಬುದಾಗಿ ಗುರ್ತಿಸಬಹುದು. ನಾವೆಲ್ಲರೂ, ಜೀವಿತದ ಕೆಲ ಭಾಗಗಳಲ್ಲಿ ಜನರ ಕಡೆಗೆ ಇಡುವ ಪಕ್ಷಪಾತದಲ್ಲಿ ನರಳುತ್ತಿದ್ದೇವೆ.ಇದು ಬಡವ - ಶ್ರೀಮಂತ ವಿಭಾಗದಲ್ಲಿರಬಹುದು. ನೀನು ಬಡವನಿಗಿಂತ ಶ್ರೀಮಂತನೊಡನೆ ಸ್ನೇಹ ಬಯಸಬಹುದು. ಅಥವಾ ನಾವು ಜನರ ವಿದ್ಯಾಭ್ಯಾಸದ ಮೇಲೂ ಪಕ್ಷಪಾತವುಳ್ಳವರಾಗಿರಬಹುದು. ಅವರು ಯಾವ ದೇಶಕ್ಕೆ ಸಂಬಂಧಿಸಿದ ಜನರು, ಅವರ ಚರ್ಮ ಬಣ್ಣ, ಲಿಂಗಗಳು, ಅಲ್ಲದೆ ಯಾವ ಸಭೆಯ ವರ್ಗಕ್ಕೆ ಸೇರಿದವರೆಂಬ ಸರ್ವಸಾಮಾನ್ಯ ಮಾತುಗಳ ಮೇಲೆ ಅವಲಂಬಿಸಿರುತ್ತವೆ.

ಈ ಬಗೆಯ ಪಕ್ಷಪಾತಕ್ಕೆ ವಿರುದ್ದವಾಗಿ ನಾವು ಎಚ್ಚರಿಸಲ್ಪಟ್ಟಿದ್ದೇವೆ. ''ನೀವೆಲ್ಲರೂ ಕ್ರಿಸ್ತಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಬೇಧವಿಲ್ಲ'' (ಗಲಾತ್ಯದ

3:28). ನಾವೆಲ್ಲರೂ ದೇವರ ಮಕ್ಕಳು ಮತ್ತು ಪ್ರತಿಯೊಬ್ಬರನ್ನು ಸಮಾನವಾಗಿ ಸತ್ಕರಿಸಬೇಕೆಂದು ಕಲಿತುಕೊಳ್ಳಬೇಕು. ನಮ್ಮಲ್ಲಿ ಗರ್ವದಿಂದ ಜನಿಸಿರುವ ಪಕ್ಷಪಾತವನ್ನು ಹೊಗಲಾಡಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

**ಅಹಂಭಾವದ ಮನಸ್ಸು ತಾಳುವುದು / ಪ್ರತ್ಯೇಕತೆ**

ಹಲವು ಬಾರಿ ನಮ್ಮ ಕಾಲು ನೆಲದ ಮೇಲಿದ್ದರೂ ಸಹ, ನಮ್ಮ ತಲೆಗಳು ಆಕಾಶದಲ್ಲೆಲ್ಲೋ ಇರುವಂತೆ ಕಾಣುತ್ತದೆ. ಇಂತಹ ಬೇನೆಯಿಂದ ನಮ್ಮಲ್ಲಿ ಅನೇಕರು ಬಳಲುತ್ತಿದ್ದೇವೆ. ಅಪೊಸ್ತಲನಾದ ಪೌಲನು, ''ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರಿ, ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಿಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ದಿವಂತರೆಂದು ಎಣಿಸಿಕೊಳ್ಳಬೇಡಿರಿ''. (ರೋಮಾಪುರದವರಿಗೆ 12:16)ಎಂದು ಹೇಳಿದ್ದಾನೆ. ನಾವು ಅಹಂಭಾವದ ಮನಸ್ಸುಳ್ಳವರಾಗಿರುವುದರಿಂದ ಜನರೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ನಾವು ''ಬಾಹ್ಯಾಕಾಶ ಯುಗದ ವಿದ್ಯಾಭ್ಯಾಸ'' ಹೊಂದಿರಬಹುದು. ಆದರೆ ನಮ್ಮ ಮನೆಯ ನೆಲ ಗುಡಿಸುವವನ ಸಂಗಡ ಒಂದು ಸಣ್ಣ ಸಂಭಾಷಣೆ ಮಾಡಲು ಬಯಸುವುದಿಲ್ಲ. ನಮ್ಮ ಐಶ್ವರ್ಯ ಸಂಪತ್ತು ಕೂಡ ಅಹಂಭಾವದ ಮನಸ್ಸು ಉಂಟಾಗುವಂತೆ ಮಾಡುತ್ತದೆ. ಮತ್ತು ನಾವು ಉನ್ನತ ದರ್ಜೆಯ ಜನರೆಂಬ ನಂಬಿಕೆ ಬರುವಂತೆ ಮಾಡುತ್ತದೆ. ನಮ್ಮ ತಲಾಂತುಗಳು ಮತ್ತು ಯೋಗ್ಯತೆಗಳು, ವೈಯಕ್ತಿಕ ವಿದ್ಯಾಭ್ಯಾಸದ ಸಾಧನೆಗಳು ನಾವು ಒಂದು ನಿರ್ಧಿಷ್ಟ ದರ್ಜೆಯ ಜನರೆಂದು ತೀರ್ಮಾನಿಸಿಕೊಳ್ಳುವಂತೆ ಮಾಡುತ್ತವೆ. ''ಇಹಲೋಕದ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂತಲೂ'' (1 ತಿಮೊಥೆಯನಿಗೆ 6:17). ಉಚ್ಛ ಸಂಗತಿಗಳ ಮೇಲೆ ಮನಸ್ಸುಗಳನ್ನಿಡುವುದು ಬೇಡ. ಆದರೆ ತಗ್ಗಿದವರ ಸಂಗಡ ಬೆರೆಯುವುದನ್ನು ಕಲಿಯಿರಿ. ಯಾರೊಂದಿಗಾದರೂ ಸಂಪರ್ಕ ಬೆಳೆಸಿಕೊಳ್ಳುವ ಜನರು ನಾವಾಗಬೇಕು ಮತ್ತು ನಮ್ಮನ್ನು ನಾವೇ ಬುದ್ದಿವಂತರೆಂದು ಏಣಿಸಿಕೊಳ್ಳುವುದು ಬೇಡ.

**ಗರ್ವದ ತೋರ್ಪಡಿಸುವಿಕೆ**

- ಹಟಮಾರಿತನ ಅಥವಾ ಮೊಂಡತನ
- ಗಡಸುತನ / ಅತಿ ದೃಢ ವಿಶ್ವಾಸ
- ಬಂಡಾಯ (ಉಲ್ಲಂಘನೆ)
- ನಿಂದನೆಗಾರನು
- ಕಪಟತನ
- ಸ್ವ - ನೀತಿ / ಕಪಟ
- ಜಗಳಗಂಟತನ / ಕಲಹ ಪ್ರಿಯತೆ
- ಪಕ್ಷಪಾತ
- ಅಹಂಭಾವದ ಮನಸ್ಸುಳ್ಳವನು / ಪ್ರತ್ಯೇಕತೆ

## ಹೆಮ್ಮೆಯ ಹೃದಯದ ಪರಿಣಾಮಗಳು

### ಅಪಮಾನ ತರುತ್ತದೆ

ನಾಚಿಕೆಯು ಗರ್ವದೊಡನೆ ವಿಲೀನಗೊಳ್ಳುತ್ತದೆ. ''ಎಲ್ಲಿ ಹೆಮ್ಮೆಯೋ ಅಲ್ಲಿ ನಾಚಿಕೆ: ದೀನರಲ್ಲಿ ಜ್ಞಾನ'' (ಜ್ಞಾನೋಕ್ತಿ 11:2)

### ಫಲಿತಾಂಶ ಬೀಳುವಿಕೆ ಮತ್ತು ನಾಶನ

''**ಗರ್ವದಿಂದ ಭಂಗ ಉಬ್ಬಿನಿಂದ ದೊಬ್ಬು** (ಜ್ಞಾನೋಕ್ತಿ 16:18)

**ಆ ಮೇಲೆ ಯೇಸು ಜನರ ಗುಂಪನ್ನು ತಿರಿಗಿ ಹತ್ತಿರಕ್ಕೆ ಕರೆದು ಅವರಿಗೆ ಎಲ್ಲರೂ ಕಿವಿಗೊಟ್ಟು, ನನ್ನ ಮಾತನ್ನು ಕೇಳಿರಿ, ತಿಳುಕೊಳ್ಳಿರಿ, ಹೊರಗಿನಿಂದ ಮನುಷ್ಯನೊಳಗೆ ಹೋಗಿ ಅವನನ್ನು ಹೊಲೆ ಮಾಡತಕ್ಕದ್ದು ಒಂದೂ ಇಲ್ಲ: ಆದರೆ ಮನುಷ್ಯನೊಳಗಿಂದ ಹೊರಡುವವುಗಳೇ ಮನುಷ್ಯನನ್ನು ಹೊಲೆ ಮಾಡುವಂಥವುಗಳಾಗಿವೆ, ಎಂದು ಹೇಳಿದನು. ತರುವಾಯ ಆತನು ಜನರನ್ನು ಬಿಟ್ಟು ಮನೆಯೊಳಕ್ಕೆ ಹೋದಾಗ ಆತನ ಶಿಷ್ಯರು ಆ ಸಾಮ್ಯದ ಅರ್ಥವೇನೆಂದು ಆತನನ್ನು ಕೇಳಲು ಆತನು ಅವರಿಗೆ - ನಿಮಗೂ ಅಷ್ಟು ಬುದ್ಧಿ ಇಲ್ಲವೆ? ಹೊರಗಿನಿಂದ ಮನುಷ್ಯನೊಳಗೆ ಹೋಗುವಂಥದ್ದು ಅವನ ಹೃದಯದೊಳಕ್ಕೆ ಸೇರದೆ ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುವುದರಿಂದ ಅವನನ್ನು ಹೊಲೆ ಮಾಡಲಾರದೆಂದು ನಿಮಗೆ ತಿಳಿಯಲಿಲ್ಲವೋ ಎಂದು ಹೇಳಿದನು. ಹೀಗೆ ಹೇಳಿದ್ದರಿಂದ ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು ಸೂಚಿಸಿದನು ಆತನು ಇನ್ನೂ ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ ಮಾಡುವುದು: ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ,**

**ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ ಬಂಡತನ ಬೈಗಳು ಸೊಕ್ಕು ಬುದ್ಧಿಗೇಡಿತನ - ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಟು ಮನುಷ್ಯನನ್ನು ಹೊಲೆ ಮಾಡುತ್ತವೆ ಅಂದನು''** (ಮಾರ್ಕ 7:14-23).

ಗರ್ವವು ಮನುಷ್ಯನ ಒಳಗಿನಿಂದ ಹೊರಟು, ಅವನನ್ನು ಹೊಲೆ ಮಾಡುತ್ತದೆಂದು ಯೇಸು ಪಟ್ಟಿಯನ್ನುಮಾಡಿ ವಿವರಿಸಿದ್ದಾನೆ ಇದು ನಾಶಕರವಾದುದು ಮತ್ತು ಒಬ್ಬನು ಬೀಳುವಂತೆ ಮಾಡುತ್ತದೆ.

## ಆತ್ಮ ವಂಚನೆಯನ್ನು ಉತ್ಪತ್ತಿ ಮಾಡುತ್ತದೆ

ಗರ್ವವು ನಮ್ಮನ್ನು ವಂಚಿಸುತ್ತದೆ. ''ಉನ್ನತ ಸ್ಥಾನದಲ್ಲಿ ಬಂಡೆಯ ಬಿರುಕುಗಳೊಳಗೆ ವಾಸಿಸುತ್ತಾ - ನನ್ನನ್ನು ನೆಲಕ್ಕೆ ಇಳಿಸಬಲ್ಲವರು ಯಾರು ಅಂದುಕೊಳ್ಳುವ ಜನವೇ, ನಿನ್ನೆದೆಯ ಹೆಮ್ಮೆಯು ನಿನ್ನನ್ನು ಮೋಸಗೊಳಿಸಿದೆ: (ಓಬದ್ಯ 1:3). ''ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ. (ಯಾಕೋಬನು 1:21).

ನಮ್ರತೆಯ ಹೃದಯವು ದೇವರವಾಕ್ಯ ಬೇರೂರಲು ಪೂರ್ವಾಗತ್ಯ ವಸ್ತು ಇದು ನಮ್ಮ ಜೀವಿತಗಳಲ್ಲಿ ಅನುಭವಕ್ಕೆ ಸಂಬಂಧಿಸಿದ ನೈಜತೆಯನ್ನು ಅಸ್ತಿತ್ವಗೊಳಿಸುತ್ತದೆ. ಮತ್ತು ನಮ್ಮಲ್ಲಿ ಬೇರೂರುತ್ತದೆ. ಆದರೆ ಗರ್ವವು ದೇವರ ವಾಕ್ಯವನ್ನು ಸ್ವೀಕರಿಸದಂತೆ ತಡೆಯೊಡ್ಡುತ್ತದೆ ಮತ್ತು ನಮ್ಮನ್ನು ವಂಚನೆಗೆ ನಡೆಸುತ್ತದೆ. ವಂಚನೆಗೆ ವಾಕ್ಯದ ಜ್ಞಾನದಿಂದ ತುಂಬಿಸಲ್ಪಟ್ಟಿರುತ್ತದೆ. ಆದರೆ ವಾಕ್ಯವು ನಮ್ಮ ಜೀವಿತಗಳನ್ನು ರೂಪಾಂತರಗೊಳಿಸಲು ಅವಕಾಶಕೊಡುವುದಿಲ್ಲ. ಪ್ರಕಟಣೆಯು, ಒಬ್ಬನನ್ನು ರೂಪಾಂತರದೆಡೆಗೆ ನಡೆಸುವ ಬದಲಾಗಿ ವಂಚನೆಗೆ ನಡೆಸುತ್ತದೆ, ಯಾಕೆಂದರೆ ನಾವು 'ಧಣಿ' ಅಥವಾ 'ಹೊಂದಿರುವವರಾದೆವು ಎಂಬುದಾಗಿ ಆಲೋಚಿಸುತ್ತೇವೆ. ನಿಜವಾಗಿ ನಾವು ''ತಿಳಿದವರು'' ಮಾತ್ರವೇ. ಮತ್ತು ತಿಳಿದಿರುವುದು ಮತ್ತು ಹೊಂದಿಕೊಂಡಿರುವುದು ಪೂರ್ಣವಾಗಿ ಎರಡು ಬಗೆಯ ವಿಧದ ವಿಷಯಗಳೇ. ಆತ್ಮಿಕ ತಲೆಯ ಜ್ಞಾನ ಹೊಂದಿರುವುದಕ್ಕೂ, ಮತ್ತು ವಾಕ್ಯವೆಂಬುವನು ನರಾವತಾರವೆತ್ತಿದ್ದ, ಆ ವಾಕ್ಯವು ನಮ್ಮ ಜೀವಿತಗಳಲ್ಲಿ ನೈಜತೆಯ ಅನುಭವ ಅಸ್ತಿತ್ವಕೊಡುವುದಕ್ಕೂ ವಿಭಿನ್ನತೆಯಿದೆ. ಅತೀ ಆಳವಾದ ಆತ್ಮಿಕ ಜ್ಞಾನವನ್ನು ಹೊಂದಿದ್ದು ಅದಕ್ಕೆ ನೈಜತೆಯ ಅನುಭವದ ಅಸ್ತಿತ್ವಕೊಡದಿದ್ದರೆ, ಅದು ಅವನನ್ನು ಗರ್ವಿಯನ್ನಾಗಿಸುತ್ತದೆ.

ಸತ್ಯವೇದ ಹೇಳುತ್ತದೆ. ''ವಿಗ್ರಹಕ್ಕೆ, ನೈವೇದ್ಯ ಮಾಡಿದ ಪದಾರ್ಥಗಳ ವಿಷಯದಲ್ಲಿ ಈಗ ನೋಡೋಣ. ನಮ್ಮೆಲ್ಲರಿಗೆ ಜ್ಞಾನವುಂಟೆಂದು ಬಲ್ಲೆವು. ಜ್ಞಾನವು ಉಬ್ಬಿಸುತ್ತದೆ, ಪ್ರೀತಿಯು ಭಕ್ತಿವೃದ್ಧಿಯನ್ನುಂಟು ಮಾಡುತ್ತದೆ'' (1 ಕೊರಿಂಥ 8:1). ಆದರೆ, ನಾನೇನಾದರೂ ನಮ್ರತಾ ಹೃದಯದಲ್ಲಿದ್ದರೆ ಬರೀ ಜ್ಞಾನದ ಬದಲಾಗಿ ವಾಕ್ಯವು ನಮ್ಮಲ್ಲಿ ಅಸ್ತಿತ್ವಕ್ಕೆ ಬರುತ್ತದೆ. ಸೈತಾನನ ಸುಳ್ಳು ಅಬ್ಬರದಿಂದ ಬಾರದೇ ಶಾಂತ ಪಿಸುಮಾತಿನಿಂದ ನಮ್ಮ ಮನಸ್ಸುಗಳನ್ನು ಪ್ರವೇಶಿಸುತ್ತದೆ. ಅವನು ಬೆಳಕಿನಲ್ಲಿ ನಡೆಯದೆ ಕತ್ತಲೆಯಲ್ಲಿ ನಡೆಯುತ್ತಾನೆ. ಆದಾಗ್ಯೂ ಬೆಳಕಿನ ದೇವದೂತನಂತೆ ಅವನು ವೇಷಹಾಕಿ ಸುಳ್ಳಾಗಿ ನಟಿಸುತ್ತಾನೆ. ಅವನು ಮಾಳಿಗೆ ಮೇಲೆ ನಿಂತು ''ಇಲ್ಲ, ನಾನು, ನಿಮ್ಮ ಜೀವಿತಗಳಿಗೆ ವಂಚನೆಗಳನ್ನು ತರುತ್ತಿದ್ದೇನೆ'' ಎಂದು ಆರ್ಭಟಿಸುವುದಿಲ್ಲ ಆದರೆ ಬದಲಾಗಿ ಶಾಂತ ಕಿವಿಮಾತುಗಳಲ್ಲಿ ತಂತ್ರಗಳನ್ನು ತರುತ್ತಾನೆ. ನಿಧಾನವಾಗಿ ನಮ್ಮ ಮನಸ್ಸುಗಳಲ್ಲಿ ತೂರಿಸುತ್ತಾನೆ, ನಮ್ಮನ್ನು ಮೋಸಗೊಳಿಸುತ್ತಾನೆ ಮತ್ತು ಸತ್ಯವನ್ನು ಮುಚ್ಚಿಡುತ್ತಾನೆ.

### ನಿಂದೆ (ಖಂಡನೆ) ತರುತ್ತದೆ

ಗರ್ವವು ನಮ್ಮ ಜೀವಿತಗಳಲ್ಲಿ ಖಂಡನೆಯನ್ನು ಮತ್ತು ದೇವರ ನ್ಯಾಯ ತೀರ್ಪನ್ನು ಅತೀ ತೀವ್ರವಾಗಿ ಜಂಭದ ಕಾರ್ಯಫಲವಾಗಿ ಬರಮಾಡುತ್ತದೆ. ಪೌಲನು, ತಿಮೊಥೆಯ ನನ್ನು ಎಚ್ಚರಿಸುವುದೇನೆಂದರೆ ದೇವರ ಸಭೆಯಲ್ಲಿ ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ''ಅವನು ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು; ಅಂಥವನಾದರೆ ಉಬ್ಬಿಕೊಂಡು ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಗೆ ಒಳಗಾದಾನು''. (1 ತಿಮೊಥೆಯನಿಗೆ 3:6).

> ಸೈತಾನನು ದೇವರಿಗೆ ವಿರುದ್ಧವಾಗಿ ದಂಗೆ ಎದ್ದು, ಖಂಡಿಸಲ್ಪಟ್ಟು ದೇವ ಪ್ರಸನ್ನತೆಯಿಂದ ಹೊರಗೆ ದೊಬ್ಬಲ್ಪಟ್ಟನು, ಇದೇ ರೀತಿಯ ನ್ಯಾಯ ತೀರ್ಪು ಮತ್ತು ದಂಡನೆಯನ್ನ ಗರ್ವವು ತರುವುದಾಗಿದೆ

ಯೌವನಸ್ಥರಾಗಲಿ ಅಥವಾ ವಯಸ್ಸಾಗಿರುವರಾಗಲಿ, ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳಬೇಕು. ಗರ್ವದ ಮೂಲದೊಂದಿಗೆ ವ್ಯವಹರಿಸಿ ಅದನ್ನು ತೊಡೆದು ಹಾಕಿರಿ. ನಮ್ಮ ಪ್ರಾರ್ಥನೆಯು, ''ಕರ್ತನಾದ ಯೇಸುವೇ, ನನ್ನ ಜೀವಿತದ ಗರ್ವದ ಮೂಲದ ಬೇರಿಗೆ ಕೊಡಲಿ ಹಾಕು'' ಎಂಬುದಾಗಿರಲಿ.

## ನಮ್ರ ಮತ್ತು ದೀನ ಆತ್ಮವನ್ನು ಕಾಪಾಡಿಕೊಳ್ಳುವುದು

### ನಾವು ಸೌಮ್ಯತೆಗೆ ಕರೆಯಲ್ಪಟ್ಟಿದ್ದೇವೆ

ನಮ್ರತೆ ಮತ್ತು ತಗ್ಗಿಸುವಿಕೆ ಮತ್ತು ದೀನಭಾವಗಳು ಕ್ರೈಸ್ತತ್ವದ ಸದ್ಗುಣಗಳು. ನಾವು ನಮ್ರತೆ ಮತ್ತು ದೀನಭಾವದಿಂದ ಕರೆಯಲ್ಪಟ್ಟ ಕೆಲಸವನ್ನು ಪೂರ್ತಿಗೊಳಿಸಬೇಕು. ದೇವರ ವಾಕ್ಯವು ಸಭಾಧ್ಯಕ್ಷರು ನಮ್ರತಾ ಆತ್ಮನಿಂದ ಸೇವೆಮಾಡಬೇಕೆಂದು ಸೂಚಿಸುತ್ತದೆ.

**''ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ''.** (ಎಫೆಸದವರಿಗೆ 4:2)

**''ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನ ಧರಿಸಿಕೊಳ್ಳಿರಿ''** (ಕೊಲೊಸ್ಸೆಯವರಿಗೆ 3:12)

**''ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು. ಒಂದು ವೇಳೆ ದೇವರು ಆ ಎದುರಿಸುವವರ ಮನಸ್ಸನ್ನು ತನ್ನ ಕಡೆಗೆ ತಿರುಗಿಸಿ ಸತ್ಯದ ಜ್ಞಾನವನ್ನು ಅವರಿಗೆ ಕೊಟ್ಟಾನು''.** (2 ತಿಮೊಥೆಯನಿಗೆ 2:25)

### ನಮ್ರತೆಯು ನಿಜವಾದ ಬಲವೆಂದು ಅರ್ಥಮಾಡಿಕೊಳ್ಳುವುದು

ಸಾಧುತನವು, ಬಲಹೀನತೆಯಲ್ಲ - ದೇವರ ವಾಕ್ಯದಲ್ಲಿ ಕೆಳಗಿನಂತೆ ಹೇಳಲಾಗಿದೆ.

**''ಆದರೆ ನ್ಯಾಯ ವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ ತೂರ್ ಸೀದೋನ್ ಪಟ್ಟಣಗಳ ಗತಿಯು ಮೇಲಾಗಿರುವದು ಎಂದು ನಿಮಗೆ ಹೇಳುತ್ತೇನೆ. ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವಿಯಾ ಪಾತಾಳಕ್ಕೇ ಇಳಿಯುವಿ. ನಿನ್ನಲ್ಲಿ ನಡೆದ ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು. ಆದರೆ ನ್ಯಾಯ ವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೋಮ ಸೀಮೆಯ ಗತಿಯು ಮೇಲಾಗಿರುವದು ಎಂದು ನಿಮಗೆ ಹೇಳುತ್ತೇನೆ ಅಂದನು. ಆ ಸಮಯದಲ್ಲಿ ಯೇಸು ಹೇಳಿದ್ದೇನೆಂದರೆ - ತಂದೆಯೇ ಪರಲೋಕ ಭೂಲೋಕಗಳ ಒಡೆಯನೇ ನೀನು ಜ್ಞಾನಿಗಳಿಗೂ ಬುದ್ದಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟ ಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ನನ್ನ ತಂದೆಯು ನನಗೆ ಎಲ್ಲವನ್ನೂ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ, ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ. ಎಲೈ ಕಷ್ಟಪಡುವವರೇ ಹೊರೆಹೊತ್ತವರೇ. ನೀವೆಲ್ಲರೂ**

**ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ,''** (ಮತ್ತಾಯ 11:22-29).

ಯೇಸುವು! 'ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ' ಎಂದು ಉಲ್ಲೇಖಿಸಿಕೊಂಡಿದ್ದಾನೆ. ಹೃದಯದಲ್ಲಿ 'ಸಾತ್ವಿಕ ಮತ್ತು ದೀನ'ನಾಗಿರುವುದರ ಕುರಿತು ತಾತ್ಸಾರ ಮಾಡಿ ಮಾತಾನಾಡುವವರ ಬಗ್ಗೆ ಎಚ್ಚರಿಕೆಯಂದಿರಬೇಕು. ಇದು ಕ್ರಿಸ್ತನ ಸ್ವಭಾವ ಮತ್ತು ಗುಣಗಳಿಗೆ ತದ್ವಿರುದ್ಧವಾಗಿರುತ್ತದೆ. ಸಾತ್ವಿಕತೆಯು ಪುನರುತ್ಥಾನವಾದ ಕ್ರಿಸ್ತನ ಗುಣವಾಗಿದೆ ಮತ್ತು ಆತನ ಆತ್ಮನಿಂದ ಇದು ನಮ್ಮಲ್ಲಿ ಉತ್ಪಾದನೆಯಾಗುತ್ತದೆ.

**''ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ - ಪ್ರೀತಿ, ಸಂತೋಷ ಸಮಾಧಾನ ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ ಸಾಧುತ್ವ, ಶಮೆದಮೆ ಇಂಥವುಗಳೇ''** (ಗಲಾತ್ಯದವರಿಗೆ 5:22).

''ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು'' (ಮತ್ತಾಯ 5:5) ಎಂದು ಯೇಸು ಹೇಳಿದ್ದಾರೆ. ಆದುದರಿಂದ ಸೌಮ್ಯತೆಯು ಬಲಹೀನತೆಯಲ್ಲ ಆದರೆ ಬಲ. ಮಹತ್ವದ ವಿಜಯಕ್ಕೆ ಸಂಕೇತ ಸಾತ್ವಿಕ ಗುಣ. ಯಾಕೆಂದರೆ ಶಾಂತರು ಭೂಮಿಗೆ ಬಾಧ್ಯರಾಗುವರು. ನಾವು ದೇವರ ರಾಜ್ಯಕ್ಕೆ ಶ್ರೇಷ್ಟ ವಿಜಯ ತರುವವರಾಗಬೇಕಾದರೆ, ನಮಗೆ ನಮ್ರತೆಯ ಆತ್ಮವಿರಬೇಕು.

## ಯಾವಾಗಲು ಸೇವಕನ ಹೃದಯವುಳ್ಳವನಾಗಿರು

ನೀವು ಯಾವುದನ್ನು ಮಾಡಿದರೂ, ಯಾವಾಗಲು ನಿಮ್ಮ ಹೃದಯವನ್ನು ಪರೀಕ್ಷಿಸಿ ''ಕರ್ತನೆ, ನಾನು ಸೇವಕನ ಹೃದಯ ಹೊಂದಲು ಬಯಸುತ್ತೇನೆ'' ಎಂಬುದಾಗಿ ಹೇಳಿರಿ.

**''ಮತ್ತು ಗುರುಗಳು ಅನ್ನಿಸಿಕೊಳ್ಳಬೇಡಿರಿ, ಕ್ರಿಸ್ತನೊಬ್ಬನೆ ನಿಮಗೆ ಗುರುವು. ನಿಮ್ಮಲ್ಲಿ ಹೆಚ್ಚಿನವರು ನಿಮ್ಮ ಸೇವಕನಾಗಿರಬೇಕು. ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು''** (ಮತ್ತಾಯ 23:10-12)

## ತನ್ನನ್ನು ತಗ್ಗಿಸಿಕೊಳ್ಳುವುದಕ್ಕೆ ಒತ್ತು

**''ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ, ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು**

**ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನ ಸಲ್ಲಿಸುವರು (ಫಿಲಿಪ್ಪಿಯವರಿಗೆ 2:5-11)**

## ಯಾವಾಗಲೂ ನಿಮ್ಮ ಕಡೆಗೆ ನ್ಯಾಯವಾದ ಅಭಿಪ್ರಾಯ ಹೊಂದಿದವರಾಗಿರಿ!

**''ದೇವರು ನನಗೆ ಕೃಪೆ ಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವದೇನೆಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು''** (ರೋಮಾಪುರದವರಿಗೆ 12:3).

**''ಸಹೋದರರೇ ನಿಮ್ಮಲ್ಲಿ ಯಾರಾದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು''** (ಗಲಾತ್ಯದವರಿಗೆ 6:1).

## ದೀನತೆಯು ಎಲ್ಲಾ ಸಮಯದಲ್ಲೂ ಕರ್ತನ ಮೇಲೆ ಸಂಪೂರ್ಣವಾಗಿ ಅವಲಂಬಿಸಿಕೊಂಡು ನಡೆಯುವುದಾಗಿದೆ

**''ಆತನು ನಮ್ಮ ಮೇಲೆ ಅತಿಶಯವಾದ ಕೃಪೆಯನ್ನು ಇಡುತ್ತಾನೆ. ಆದುದರಿಂದ - ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರು ಕೃಪೆಯನ್ನು ಅನುಗ್ರಹಿಸುತ್ತಾನೆ ಎಂದು ಶಾಸ್ತ್ರವು ಹೇಳುತ್ತದೆ. ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. ದೇವರ ಸಮೀಪಕ್ಕೆ ಬನ್ನಿರಿ, ಆತನು ನಿಮ್ಮ ಸಮೀಪಕ್ಕೆ ಬರುವನು ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ, ಎರಡು ಮನಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ. ದುಃಖಿಸಿರಿ, ಗೋಳಾಡಿರಿ, ಕಣ್ಣೀರಿಡಿರಿ, ನಗುವುದನ್ನು ಬಿಟ್ಟು ಗೋಳಾಡಿರಿ, ಸಂತೋಷವನ್ನು ಬಿಟ್ಟು ಮನಗುಂದಿದವರಾಗಿರಿ ಕರ್ತನಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ, ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು''** (ಯಾಕೋಬನು 4:6-10).

ನಮ್ಮ ಅಗತ್ಯತೆಗಳ ಕರಾರು ಮತ್ತು ನಮ್ಮ ಬಲಹೀನತೆಗಳ ಪ್ರಜ್ಞೆಗಿಂತಲೂ, ನೈಜದೀನತೆಯು ಮಿಗಿಲಾದುದಾಗಿದೆ. ನಮ್ಮೊಂದಿಗೆ ಎಲ್ಲವು ಉತ್ತಮವಾಗಿ ಹೋಗುತ್ತಿದ್ದರೆ, ನಾವು ಸಮೃದ್ಧಿಗೊಳ್ಳುತ್ತಿದ್ದರೆ, ದೇವರಿಂದ ಪ್ರಬಲವಾಗಿ ಉಪಯೋಗಿಸಲ್ಪಡುತ್ತಿದ್ದರೆ ನಾವು ದೇವರಿಗೆ ''ದೇವರೆ, ಇವೆಲ್ಲವೂ ನಿನ್ನ ನಿಮಿತ್ತವೇ'' ಎಂದು ಹೇಳಬೇಕು. ಆದಾಗ್ಯೂ ಶ್ರೇಷ್ಟ ಆಶೀರ್ವಾದಗಳ ಸಮಯದಲ್ಲೂ, ಬಲ

ಮತ್ತು ಜಯದಲ್ಲೂ, ಕರ್ತನ ಮೇಲೆ ನಾವು ಇಟ್ಟ ಸಂಪೂರ್ಣ ಅವಲಂಬನೆಯಿಂದ ನಮ್ಮಲ್ಲಿರುವ ಎಲ್ಲಾ ಒಳ್ಳೆಯ ಕಾರ್ಯಗಳು ಆತನಿಂದಲೇ ಬಂದವುಗಳೆಂದು ನೆನಪಿಸಿಕೊಳ್ಳಬೇಕು. ಇದು ನೈಜ ದೀನತೆಯಾಗಿದೆ.

‘‘**ನಮ್ಮಿಂದಲೇ ಏನಾದರೂ ಉಂಟಾಯಿತೆಂದು ತೀರ್ಮಾನಿಸಿಕೊಳ್ಳುವದಕ್ಕೆ ನಮ್ಮಷ್ಟಕ್ಕೆ ನಾವೇ ಸಮರ್ಥರಂತಲ್ಲ ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು**’’ (2 ಕೊರಿಂಥದವರಿಗೆ 3:5).

## ಸಮರ್ಪಣೆ ಮತ್ತು ಪಶ್ಚಾತ್ತಾಪಗಳು ಪ್ರಧಾನ

ನಮ್ಮ ಹೃದಯದೊಳಗೆ ಇರುವ ಗರ್ವದ ಸಾಧ್ಯತೆಗಳನ್ನು ಪರೀಕ್ಷಿಸಿಕೊಂಡು ಒಪ್ಪಿಕೊಂಡು ಅವುಗಳನ್ನು ಬಿಡಬೇಕು. ಮತ್ತು ನಮ್ಮ ಹೃದಯ, ಆಲೋಚನೆ, ವಿಚಾರ ಮತ್ತು ಕಾರ್ಯವೈಖರಿಗಳನ್ನು ಸತತವಾಗಿ ಪರೀಕ್ಷಿಸಿಕೊಳ್ಳುತ್ತಿರಬೇಕು. ನಾವು ಸಂಪೂರ್ಣ ಗರ್ವದಿಂದ ಸ್ವತಂತ್ರವಾಗಿದ್ದೇವೆ ಎಂಬ ಊಹೆಯನ್ನು ನಾವು ಕಳಚಿಹಾಕಬೇಕು.

‘‘**ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ, ನಗುವುದನ್ನು ಬಿಟ್ಟು ಗೋಳಾಡಿರಿ, ಸಂತೋಷವನ್ನು ಬಿಟ್ಟು ಮನಗುಂದಿದವರಾಗಿರಿ, ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ, ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು**. (ಯಾಕೋಬನು 4:7-10).

ನಾವು ಕರ್ತನ ಪ್ರಸನ್ನತೆಯಲ್ಲಿ ಸತತವಾಗಿ ನಮ್ಮನ್ನು ವಿಮರ್ಶಿಸಿಕೊಳ್ಳಬೇಕು ಆತನಿಗೆ ನಮ್ಮನ್ನು ಸಮರ್ಪಿಸಬೇಕು, ನಮ್ಮ ಕೈಗಳನ್ನು ಶುಚಿಮಾಡಿಕೊಳ್ಳಬೇಕು ಮತ್ತು ಹೃದಯಗಳನ್ನು ಪವಿತ್ರ ಮಾಡಿಕೊಳ್ಳಬೇಕು.

‘‘**ಗರ್ವವು ಮನುಷ್ಯನನ್ನು ದೀನಸ್ಥಿತಿಗೆ ತರುವುದು, ದೀನ ಮನಸ್ಸುಳ್ಳವನು ಮಾನವನ್ನ ಪಡೆಯುವನು.**’’ (ಜ್ಞಾನೋಕ್ತಿ 29:23)

- ಮಹತ್ವದ ವಿಜಯಕ್ಕೆ ನಮ್ರತೆಯುಳ್ಳ ಆತ್ಮವು ಸಂಕೇತವಾಗಿದೆ ಯಾಕಂದರೆ ಸೌಮ್ಯರು ಭೂಮಿಗೆ ಬಾಧ್ಯರಾಗುವರು. ದೇವರ ರಾಜ್ಯದ ಮಹಾ ವಿಜೇತರಾಗಬೇಕಾದರೆ, ನಾವುಗಳು ನಮ್ರತೆಯ ಆತ್ಮವುಳ್ಳವರಾಗಿರಬೇಕು.

- ಏನಾದರೂ ಮಾಡಬೇಕಾದರೆ, ಯಾವಾಗಲೂ ನಿಮ್ಮ ಹೃದಯವನ್ನು ಪರೀಕ್ಷಿಸಿ ''ಕರ್ತನೇ ನಾನು ಸೇವಕನ ಹೃದಯ ಹೊಂದಬೇಕು'' ಎಂದು ಹೇಳುವವರಾಗಿರಿ.

- ಶ್ರೇಷ್ಠ ಆಶೀರ್ವಾದದ ಸಮಯಗಳಲ್ಲಿ, ಬಲ ಮತ್ತು ವಿಜಯದಲ್ಲೂ, ನಾವು ನಮ್ಮಲ್ಲಿರುವ ಎಲ್ಲಾ ಒಳ್ಳೇಯ ಕಾರ್ಯಗಳು ಆತನಿಂದಲೇ ಬಂದವುಗಳೆಂದು ತಿಳಿದು ಕರ್ತನ ಮೇಲೆ ನಮ್ಮ ಸ್ಪಷ್ಟ ಅವಲಂಬನೆಯಲ್ಲಿರುವ ಉಲ್ಲಾಸವನ್ನು ನಾವು ಗುತಿರ್ಸಬೇಕು. ಇದು ನೈಜ ದೀನತೆ.!

**ಪ್ರಾರ್ಥನೆ**

*ತಂದೆಯೇ, ನಾನು ನಿನ್ನ ಮುಂದೆ ಬರುತ್ತೇನೆ ಮತ್ತು ದೀನ ಮನಸ್ಸನ್ನು ಕಾಪಾಡಿಕೊಳ್ಳಲು ನನಗೆ ಸಹಾಯಮಾಡು. ತಂದೆಯಾದ ದೇವರೇ, ನನ್ನ ಪ್ರತಿ ಭಾಗದಲ್ಲಿರುವ ಜಂಭವನ್ನು ತೊರೆಯಲು ಸಹಾಯಮಾಡು. ಮತ್ತು ಎಲ್ಲಾ ಸಮಯದಲ್ಲೂ ನಮ್ರತೆಯ ಆತ್ಮ ಮತ್ತು ದೀನತೆಯಿಂದ ನಿನ್ನ ಮುಂದೆ ತಗ್ಗಿಸಿಕೊಂಡು ನಡೆಯಲು ಸಹಾಯ ಮಾಡು. ತಂದೆಯೇ, ನೀನು ನನ್ನಲ್ಲಿ ಯಾವ ಕಾರ್ಯಗಳನ್ನು ಮಾಡುತ್ತಿಯೋ, ಮತ್ತು ನನ್ನ ಮೂಲಕ ಯಾವುದನ್ನು ಮಾಡಬೇಕೆಂದಿದ್ದಿಯೋ ಅವೆಲ್ಲವುಗಳಿಗಾಗಿ, ನಾನು ನಿನ್ನ ಮುಂದೆ ತಗ್ಗಿಸಿಕೊಳ್ಳುತ್ತೇನೆ. ಇದು ನನ್ನ ಇಷ್ಟವಾಗಿದೆ. ಕರ್ತನಾದ ಯೇಸುವೇ, ನನ್ನಲ್ಲಿರುವ ಗರ್ವದ ಮೂಲದ ಬೇರಿಗೆ ಕೊಡಲಿ ಹಾಕು.*

# ಬೇರುಗಳಿಗೆ ಕೊಡಲಿ ಹಾಕುವುದು



## ಸ್ವ • ಹೊಟ್ಟೆಕಿಚ್ಚು • ಅಹಂಕಾರ • ದುರಿಚ್ಛೆ

# 4

# ದುರಿಚ್ಛೆಯ ಬೇರಿಗೆ ಕೊಡಲಿ ಹಾಕುವುದು

ಸ್ವ, ಹೊಟ್ಟೆಕಿಚ್ಚು ಮತ್ತು ಗರ್ವದ ಮೂಲದ ಬೇರಿಗೆ ಕೊಡಲಿ ಹಾಕುವುದನ್ನು ಕಂಡುಹಿಡಿದ ಮೇಲೆ, ಈಗ ನಮ್ಮ ಜೀವಿತಗಳಲ್ಲಿರುವ ದುರಿಚ್ಛೆ ಮೂಲದ ಜೊತೆ ವ್ಯವಹರಿಸುತ್ತೇವೆ. ದುರಿಚ್ಛೆ ಅಂದರೇನು? ದುರಿಚ್ಛೆಯು, ನಿಯಂತ್ರಿಸಲಾಗದ, ಅನುಚಿತವಾದ, ವಿಪರೀತವಾದ, ಹಿಡಿತವಿಲ್ಲದ ಆಸೆಗಳು,-ಅನುರಾಗ, ಹೆಬ್ಬಯಕೆ, ಆಕಾಂಕ್ಷೆ, ಯಾವುದಕ್ಕಾದರೂ ಹಂಬಲಿಸುವುದು. ದುರಿಚ್ಛೆಯು (ದುರಾಶೆ) ''ಲೋಭ ಅಥವಾ ಮಿತಿಮೀರಿದ ಮೋಹ ಎಂಬುದಾಗಿ ಸತ್ಯವೇದವು ನಿಶ್ಚಿತಪಡಿಸುತ್ತದೆ. ದುರಿಚ್ಛೆ (ದುರಾಶೆ)ಯು ಪ್ರಾಪಂಚಿಕ ಮಾರ್ಗವಾಗಿದೆ, ಪ್ರಪಂಚವು ಸಹಕರಿಸುವ ಅಥವಾ ಅದರಲ್ಲಿ ನಡೆಯುವ ಮಾರ್ಗವಾಗಿದೆ.

**''ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ, ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ, ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಸೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.''** (ಎಫೆಸದವರಿಗೆ 2:1-3).

ಪ್ರಾಪಂಚಿಕ ಮಾರ್ಗವೆಂದರೆ, ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸಿಕೊಳ್ಳುವುದಾಗಿದೆ.- ಇದು ಒಳ್ಳೆಯದು ಅನಿಸಿದರೆ ಅಥವಾ ನಿನ್ನನ್ನು ಸಂತೋಷಪಡಿಸಿದರೆ - ಅದನ್ನು ಮಾಡು! ದುರಿಚ್ಛೆ ಯಿಂದ ಆವೃತವಾಗಿದ್ದ ಪ್ರಪಂಚ ವ್ಯವಸ್ಥೆಯ ಭಾಗಗಳು ನಾವಾಗಿದ್ದೆವು ಮತ್ತು ಅದರ ಪ್ರಕಾರವಾಗಿ ನಡೆದಿದ್ದೆವು, ಶರೀರದ ಮತ್ತು ಮನಸ್ಸಿನ ಇಚ್ಛೆಗಳನ್ನು ಪೂರೈಸಿಕೊಂಡಿದ್ದೆವು. ಆದರೆ ಯೇಸುವಿನ ನಿಮಿತ್ತದಿಂದಾಗಿ ಇಂತಹ ದುರಿಚ್ಛೆಯೆ ಪ್ರಭಾವ ತೋರುವ ಪ್ರಪಂಚದೊಡನೆ ನಾವು ಇರಬೇಕಾಗಿಲ್ಲ.

**''ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ**

**ಅಮೂಲ್ಯವಾಗಿಯೂ, ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ''.** (2 ಪೇತ್ರ 1:4).

ದುರಿಚ್ಛೆಯ ನಿಮಿತ್ತ ಲೋಕದಲ್ಲಿ ಭ್ರಷ್ಟಾಚಾರ (ದುರ್ವರ್ತನೆ) ಅಥವಾ ನೈತಿಕ ಕ್ಷೀಣತೆಯನ್ನು ಕಾಣುತ್ತೇವೆ. ಆದರೆ ಇಂತಹ ಲೋಕದ ದುರ್ವರ್ತನೆಯಿಂದ ತಪ್ಪಿಸಿಕೊಳ್ಳಲು, ಅತ್ಯಂತ ಮಹತ್ವವುಳ್ಳ ಮತ್ತು ಅಮೂಲ್ಯವಾದ ಆತನ ವಾಕ್ಯದ ವಾಗ್ದಾನಗಳನ್ನು ದೇವರು ನಮಗೆ ಕೊಟ್ಟಿರುವುದರಿಂದ ನಮಗೆ ಇದು ಶುಭಸಂದೇಶವಾಗಿದೆ ಮತ್ತು ತಪ್ಪಿಸಿಕೊಳ್ಳಲು ಮಾರ್ಗವಾಗಿದೆ. ಅಂತಹ ಭ್ರಷ್ಟಾಚಾರದಲ್ಲಿ ನಾವು ಸಿಲುಕಿಹಾಕಿಕೊಂಡಿರುವುದಲ್ಲ. ನಾವು ಇದರಿಂದ ತಪ್ಪಿಸಿಕೊಳ್ಳಬಹುದು. ಆಮೇನ್ ! ಇಚ್ಛೆಯು, ಅದರಷ್ಟಕ್ಕೆ ತಪ್ಪಾಗಿರುವುದಿಲ್ಲ. ನಾವು ಒಳ್ಳೆಯದಾಗಿರುವ ಮತ್ತು ಆರೋಗ್ಯಕವಾಗಿರುವ ಇಚ್ಛೆಗಳನ್ನು ಹೊಂದಿರಬೇಕು. ನಮಗೆ ಇಚ್ಛೆಗಳಿಲ್ಲದಿದ್ದರೆ, ನಾವು ಪ್ರಚೋದಿಸಲ್ಪಡುತ್ತಿರಲಿಲ್ಲ ಮತ್ತು ಜೀವಿತಗಳಲ್ಲಿ ಗೊತ್ತು ಗುರಿಯಿಲ್ಲದೆ ಹೋಗುತ್ತಿತ್ತು. ಸತ್ಯವೇದ ಹೇಳುತ್ತದೆ. ದೇವರಿಗಾಗಿ, ಆತನ ಪ್ರಸನ್ನತೆಗಾಗಿ, ಆತನ ಬಲಕ್ಕಾಗಿ ಮತ್ತು ಆತನ ಮಾತುಗಳಿಗಾಗಿ, ನಾವು ಇಚ್ಛೆವುಳ್ಳವರಾಗಿರಬೇಕು.

**''ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು''** (ಕೀರ್ತನೆ 37:4).

**''ದುಷ್ಟನಿಗೆ ಶಂಕಿಸಿದ್ದೇ ಸಂಭವಿಸುವದು; ಶಿಷ್ಟನಿಗೆ ಇಷ್ಟವು ಲಭಿಸುವದು''** (ಜ್ಞಾನೋಕ್ತಿ 10:24)

**''ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವುದೆಂದು ನಿಮಗೆ ಹೇಳುತ್ತೇನೆ''** (ಮಾರ್ಕ 11:24)

ನಾವು ಪ್ರಾರ್ಥಿಸುವ ಮೊದಲು, ಒಳ್ಳೆಯ ಮತ್ತು ಯೋಗ್ಯ ವಸ್ತುಗಳನ್ನು ಹೊಂದುವ ಇಷ್ಟವುಳ್ಳವರಾಗಿರಬೇಕು. ಯಾವಾಗ ತಪ್ಪು ವಿಷಯಗಳಿಗೆ ಇಚ್ಛೆಯುಂಟಾಗುತ್ತದೋ, ಆಗ ತೊಂದರೆ ಉದ್ಭವವಾಗುತ್ತದೆ. ಅವು ನಿಯಂತ್ರಿಸಲಾಗದೆ ಮತ್ತು ವಿಪರೀತವಾದವುಗಳಾಗಿರುತ್ತವೆ.

**''ಯಾವನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವುದಿಲ್ಲ. ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು**

**ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹೇರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ. ನನ್ನ ಪ್ರಿಯ ಸಹೋದರರೇ, ಮೋಸಹೋಗಬೇಡಿರಿ''** (ಯಾಕೋಬನು 1:13-16).

ಪಾಪದ ಪ್ರೇರಣೆಗಳು, ನಮ್ಮ ಸ್ವಂತ ದುರಿಚ್ಛೆಗಳ, ಮತ್ತು ನಮ್ಮ ಸ್ವ ಇಚ್ಛೆಗಳಿಂದ ಸೆಳೆಯುವಿಕೆಗಳಾಗಿರುತ್ತವೆ. ಇದು ದೆವ್ವಗಳ ಇಚ್ಛೆಯಲ್ಲ ಅಥವಾ ನಮ್ಮ ನೆರೆಹೊರೆಯವರ ಇಚ್ಛೆಯಲ್ಲ ಆದರೆ ಇದು ಕಾರ್ಯನಿರತವಾಗಿ ನಮ್ಮನ್ನು ಸೆಳೆಯಲು ಪ್ರಯತ್ನಿಸುತ್ತದೆ ಮತ್ತು ನಮ್ಮನ್ನು ಆಕರ್ಷಿಸುತ್ತದೆ. ಆದ್ದರಿಂದ ಇದನ್ನು ನಿವಾರಿಸುವ ಬದಲು ನಮ್ಮನ್ನು ಮೋಸಗೊಳಿಸಿ ಕಂಗೆಡಿಸುತ್ತದೆ. ಯಾವುದಾದರೂ ತಪ್ಪು ವಿಷಯಗಳಿಗೆ ಇಚ್ಛೆಯು ನಮ್ಮೊಳಗೆ ಉತ್ತೇಜಿಸಲ್ಪಡುತ್ತದೋ ಮತ್ತು ಆ ಇಚ್ಛೆಯನ್ನು ತ್ಯಜಿಸಲು ನಮ್ಮ ಚಿತ್ತಗಳನ್ನು ಶಿಥಿಲಗೊಳಿಸುತ್ತದೋ ಆಗ ಪ್ರೇರಣೆಯು ಕಾಣಿಸಿಕೊಳ್ಳುತ್ತದೆ. ಇಂತಹ ತಪ್ಪುಗ್ರಹಿಕೆಯ ಇಚ್ಛೆಗಳು, ನಮ್ಮ ಆಲೋಚನೆಗಳನ್ನು, ವಿವೇಚನಾ ಶಕ್ತಿ ಕಲ್ಪನೆಗಳನ್ನು ಮತ್ತು ನಾವು ಪಡೆಯುವ ವಿಷಯ ಮಾಹಿತಿಗಳನ್ನು ಕಾಪಾಡಿಕೊಳ್ಳದಿರುವುದರಿಂದ ಉತ್ತೇಜಿಸಲ್ಪಡುತ್ತವೆ. ಇದು ಇತರ ಜನರ ಪ್ರಭಾವಗಳಿಂದಲೂ ಜರುಗಬಹುದು. ಅಥವಾ ನಮ್ಮ ಮನಸ್ಸುಗಳಿಗೆ ಸೈತಾನನು ಪರಿಚಯಿಸುವ ಸೂಚ್ಯ ಆಲೋಚನೆಗಳು, ವಿಚಾರಗಳು ಮತ್ತು ಕಲ್ಪನೆಗಳಿಂದಲೂ ಉಂಟಾಗಬಹುದು. ಇಂತಹ ನಮ್ಮ ಇಚ್ಛೆಗಳೇ ನಮ್ಮನ್ನು ದೂರಕ್ಕೆ ಸೆಳೆಯುತ್ತವೆ. ಇಂತಹ ಎಲ್ಲಾ ಆಶೆಗಳನ್ನು ಅಧೀನಕ್ಕೆ ತರುವುದನ್ನು ಮತ್ತು ಅವುಗಳ ಮೇಲೆ ನಿಯಂತ್ರಣ ತರುವುದನ್ನು ಕಲಿತುಕೊಳ್ಳಬೇಕು. ಸೈತಾನನು, ನಾವು ಪಾಪಮಾಡುವಂತೆ ಮಾಡಲು ಸಾಧ್ಯವಾಗುವುದಿಲ್ಲ. ಅವನು ಸೂಚಕ ಆಲೋಚನೆಗಳನ್ನು ಪರಿಚಯಿಸುತ್ತಾನೆ, ಅಂದರೆ ನಮ್ಮ ಇಚ್ಛೆಗಳನ್ನು ಉತ್ತೇಜಿಸುವ ಯೋಜನೆ ಮಾಡುತ್ತಾನೆ. ಇಂತಹ ಇಚ್ಛೆಗಳೇನಾದರೂ ನಿಯಂತ್ರಣವಾಗದಿದ್ದರೆ, ಅವು ನಾವು ಪ್ರೇರಣೆಗಳನ್ನು ತಡೆಗಟ್ಟದಂತೆ ನಮ್ಮ ಚಿತ್ತಗಳನ್ನು ಕುಂದಿಸುತ್ತವೆ.

**''ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತದೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು''** (1 ಯೋಹಾನ 2:16-17).

ಮೇಲಿನ ದೇವರ ವಾಕ್ಯಗಳಲ್ಲಿ, ಮೂರು ಸಂಗತಿಗಳು ಇವೆ. ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನಡಂಬ, ಲೋಕವು ಶರೀರದಾಶೆ ಮತ್ತು ಕಣ್ಣಿನಾಶೆಗಳಿಂದ

ಭದ್ರವಾಗಿ ಹಿಡಿಯಲ್ಪಟ್ಟಿದೆ. 'ಶರೀರದಾಶೆ'-ಅಂದರೆ ದೇಹದ ಪಾಪಯುತ ಇಚ್ಛೆಗಳನ್ನು ತೃಪ್ತಿಪಡಿಸಿಕೊಳ್ಳುವ ವಿಷಯ ಎಂದು ನಾವು ಅರ್ಥಮಾಡಿಕೊಳ್ಳಬಹುದು. ಕಣ್ಣಿನಾಶೆಯು ನೋಡುವುದರಲ್ಲಿ ತೃಪ್ತಿಗೊಳ್ಳುವುದು ಮತ್ತು ಆ ವಸ್ತುವು ನಮಗೆ ದೊರೆಯದಿದ್ದರೂ ಆ ''ವಸ್ತು''ವನ್ನು ಕಣ್ಣಿನ ಮೂಲಕ ಅನುಭವಿಸುವುದಾಗಿದೆ.

- ಶೋಧನೆಯು ನಮ್ಮ ಸ್ವಂತ ದುರಿಚ್ಛೆಯ ಕಾರಣದಿಂದ, ನಮ್ಮ ಸ್ವ ಇಚ್ಛೆಗಳಿಂದ ನಮ್ಮನ್ನು ಸೆಳೆಯುವುದಾಗಿದೆ.
- ತಪ್ಪು ಇಚ್ಛೆಗಳು ನಮ್ಮೊಳಗೆ ಉತ್ತೇಜಿಸಲ್ಪಟ್ಟು ಆ ಇಚ್ಛೆಗಳನ್ನು ತಿರಸ್ಕರಿಸಲು ನಮ್ಮ ಚಿತ್ತವನ್ನು ಕುಂದಿಸಿಕೊಳ್ಳಲು ಆಗದೆ ಹೋದಾಗ ಶೋಧನೆಯು ಗೋಚರಿಸುತ್ತದೆ.
- ಅಂತಹ ಇಚ್ಛೆಗಳನ್ನು ಅಧೀನಕ್ಕೆ ತರುವುದನ್ನು ಮತ್ತು ಅವುಗಳನ್ನು ಹತೋಟಿಯಲ್ಲಿಡುವುದನ್ನು ನಾವು ಕಲಿತುಕೊಳ್ಳಬೇಕು.

ದುರಿಚ್ಛೆಯ ಮೂಲದ ತೋರ್ಪಡಿಸುವಿಕೆಯನ್ನು ಹೇಗೆ ನಾವು ಗುರ್ತಿಸಬಹುದು?

## ಶರೀರದಾಶೆ

**ಮಾದಕ ದ್ರವ್ಯಗಳ ಮೇಲೆ ಹತೋಟಿಯಲ್ಲಿಡಲಾಗದ ಇಚ್ಛೆಗಳು, ಒಳ್ಳೆಯ ಆಹಾರವು ಸಹ ಸೇರಿರುತ್ತದೆ.**

ಪ್ರತಿ ಸಮಯದಲ್ಲೂ ಮದ್ಯಪಾನ ಮಾಡುವವನು, ಧೂಮಪಾನ ಮಾಡುವವನು, ಡ್ರಗ್ಸ್‌ಗೆ ಬಲಿಯಾದವನು. (ಮಾದಕ ದ್ರವ್ಯಗಳ ಚಟಕ್ಕೆ ಬಲಿಯಾದವನು). ಇವರನ್ನು ನೋಡಿ ಆರೋಪಿಗಳೆಂದು ಕೈಮಾಡಿ ತೋರಿಸುತ್ತೇವೆ. ಆದರೆ, ಒಳ್ಳೆಯ ಆಹಾರದ ಮೇಲೆ ಇಚ್ಛೆಯುಳ್ಳ ವ್ಯಕ್ತಿಯನ್ನು ಮರೆತುಬಿಡುತ್ತೇವೆ. ಇದು ಅದೇ ಅರ್ಥಕ್ಕೆ ಸಮನಾಗುತ್ತದೆ !.

**''ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ನನಗೆ ಸ್ವಾತಂತ್ರ್ಯವೇನೋ ಉಂಟು, ಆದರೆ ಎಲ್ಲವೂ ವಿಹಿತವಾಗಿರುವುದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ನನಗೆ ಸ್ವಾತಂತ್ರ್ಯವುಂಟು, ಆದರೆ ನಾನು ಯಾವದಕ್ಕೂ ಒಳಗಾಗುವುದಿಲ್ಲ. ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಹೊಟ್ಟೆಯು ಭೋಜನ**

**ಪದಾರ್ಥಗಳಿಗಾಗಿಯೂ ಅವೆ; ದೇವರು ಇದನ್ನೂ ಅವುಗಳನ್ನೂ ಕೂಡ ತೆಗೆದು ಹಾಕುವನು. ಆದರೂ ದೇಹವು ಹಾದರಕ್ಕೋಸ್ಕರ ಇರುವಂಥದಲ್ಲ, ಕರ್ತನಿಗೋಸ್ಕರವಾಗಿದೆ, ಕರ್ತನು ದೇಹಕ್ಕೋಸ್ಕರ ಇದ್ದಾನೆ''** (1 ಕೊರಿಂಥದವರಿಗೆ 6:12-13).

ಎಲ್ಲಾ ವಿಷಯಗಳು ನನಗೆ ನ್ಯಾಯಯುತವಾದದ್ದು. ಆದರೆ ಅವುಗಳನ್ನು ಯಾವದೇ ಬಲದ ಕೆಳಗೆ ನಾನು ತರುವುದಿಲ್ಲ. ಕೆಲವು ಬಾರಿ ಅಚ್ಚುಮೆಚ್ಚಿನ ಭೋಜನವನ್ನು ತೆಗೆದುಕೊಂಡರೆ ತೃಪ್ತಿಗೊಳ್ಳುತ್ತೇನೆ ಎಂಬುದನ್ನು ಅಂಗೀಕರಿಸಬಹುದು. ಆದರೆ ನೀವು ಆ ಭೋಜನದ ಹತೋಟಿಯಲ್ಲಿದ್ದರೆ, ಅದು ತಪ್ಪು. ''ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ'' (1 ಕೊರಿಂಥದವರಿಗೆ 6:13ಎ).

ಹೊಟ್ಟೆಯೇ ಅವರ ದೇವರಾಗಿರುವವರ ಕುರಿತು ಪೌಲನು ಬರೆಯುತ್ತಾನೆ. ''ನಾಶನವೇ ಅವರ ಅಂತ್ಯಾವಸ್ಥೆ, ಹೊಟ್ಟೆಯೇ ಅವರ ದೇವರು ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು, ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವವರು'' (ಫಿಲಿಪ್ಪಿಯವರಿಗೆ 3:19). ಅವರ ಹಸಿವು ಪ್ರಭಾವ ತೋರುತ್ತದೆ ಮತ್ತು ಅವರನ್ನು ಹತೋಟಿಯಲ್ಲಿಡುತ್ತದೆ. ಇದು ಒಳ್ಳೆಯ ಭೋಜನದ ಮತ್ತು ಹತೋಟಿಯಲ್ಲಿಡಲಾಗದ ಪದಾರ್ಥಗಳ ಮೇಲಿನ ಇಚ್ಛೆ ಮತ್ತು ಶರೀರದಾಶೆಯಾಗಿದೆ. ಐಗುಪ್ತ ದೇಶದಲ್ಲಿ ದಾಸತ್ವದಿಂದ ಬಿಡುಗಡೆಯಾಗಿ ಹೊರಗೆ ಬಂದ ದೇವಜನರ ಬಗ್ಗೆ ಓದುತ್ತೇವೆ. ಅವರು ಕೆಂಪು ಸಮುದ್ರ ದಾಟಿದರು. ಹಾಲು ಜೇನೂ ಹರಿಯುವ ಸಮೃದ್ಧಿಕರವಾದ ದೇಶದ ವಾಗ್ದಾನವನ್ನು ಹೊಂದುವ ಮಾರ್ಗದಲ್ಲಿದ್ದರು. ಮತ್ತು ತಕ್ಷಣವೇ ಅವರು ತಾಳಿಕೊಳ್ಳಲಾಗದೇ ಮಾಂಸವನ್ನು ತಿನ್ನಬೇಕೆಂದು ಬಯಸಿದರು. ಈ ಇಚ್ಛೆಯು ಬಹಳ ಆತುರಪಡುವಂತದ್ದಾಗಿತ್ತು. ಇದು ಮಾಂಸದ ದುರಿಚ್ಛೆಯಾಗಿ ಕಂಡುಬಂದಿತ್ತು.

**''ಅವರ ಮಧ್ಯದಲ್ಲಿದ್ದ ಇತರ ಜನರು ಮಾಂಸವನ್ನು ಆಶಿಸಿದರು. ಇಸ್ರಾಯೇಲ್ಯರು ಕೂಡ ತಿರುಗಿ ಅತ್ತುಕೊಂಡು - ಮಾಂಸವು ನಮಗೆ ಹೇಗೆ ಲಭಿಸೀತು, ಐಗುಪ್ತ ದೇಶದಲ್ಲಿ ನಾವು ಬಿಟ್ಟಿಯಾಗಿ ತಿನ್ನುತ್ತಿದ್ದ ಮೀನು, ಸವತೆಕಾಯಿ, ಕರ್ಬೂಜು, ಉಳ್ಳಿಗಡ್ಡೆ, ನೀರುಳ್ಳಿ, ಬೆಳ್ಳುಳ್ಳಿ ಇವು ನೆನಪಿಗೆ ಬರುತ್ತವಲ್ಲಾ, ಇಲ್ಲಿಯಾದರೋ ನಮ್ಮ ಜೀವ ಬತ್ತಿ ಹೋಯಿತು. ಈ ಮನ್ನವೇ ಹೊರತು ನಮಗೆ ಇನ್ನೇನೂ ಸಿಕ್ಕಲಿಕ್ಕಿಲ್ಲ ಅಂದುಕೊಳ್ಳುತ್ತಿದ್ದರು''**. (ಅರಣ್ಯಕಾಂಡ 11:4-6).

ದೈವಿಕ ಉದ್ದೇಶ ಮತ್ತು ಮಹಿಮಾ ಯೋಜನೆಗಳನ್ನು ಕೇಂದ್ರಿಕರಿಸಿ ನೆರವೇರಿಸಿಕೊಳ್ಳದೇ, ಇಸ್ರಾಯೇಲ್ ಜನರು ಒಳ್ಳೆಯ ಆಹಾರ ಪದಾರ್ಥದ ದುರಿಚ್ಛೆಗೆ ಒಳಗಾದರು. ದೇವರ ಉದ್ದೇಶ ಮತ್ತು ಯೋಜನೆಗಳನ್ನು ನೆರವೇರಿಸುವುದಕ್ಕೆ ಪ್ರಾಮುಖ್ಯತೆ ಕೊಡದೇ, ಅವರ ಶಾರೀರಿಕ ಹಸಿವೆಗಳಿಗಾಗಿ ಆದ್ಯತೆಕೊಟ್ಟು ಇಚ್ಛೆಪಡುವವರಾಗಿದ್ದರು. ಮತ್ತು ತೃಪ್ತಿಗೊಳ್ಳುವವರಾಗಿದ್ದರು. ನಾವು ಏಷ್ಟೋ ಬಾರಿ ಉಪವಾಸ ಮತ್ತು ಪ್ರಾರ್ಥನೆಯಲ್ಲಿ ಸಮಯ ಕಳೆಯದೇ, ತಿನ್ನಬೇಕಾದ ಭೋಜನ ಪದಾರ್ಥಕ್ಕಾಗಿ ಅಗ್ರಸ್ಥಾನ ಕೊಟ್ಟಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

ಇಸ್ರಾಯೇಲ್ಯರು ದೇವರನ್ನು ಪರೀಕ್ಷಿಸುವುದಕ್ಕೆ ಪ್ರಾರಂಭಿಸಿದರು. ಸತ್ಯವೇದವು ಎಂದು ಹೇಳುತ್ತದೆ. ''ನಿಮ್ಮ ಕರ್ತನಾದ ದೇವರನ್ನು ಪರೀಕ್ಷಿಸಬೇಡಿರಿ''.

''ಹಗಲು ಮೋಡದಿಂದಲೂ ಇರುಳು ಬೆಂಕಿಯ ಬೆಳಕಿನಿಂದಲೂ ಅವರನ್ನು ಕರೆದೊಯ್ದನು. ಆತನು ಅರಣ್ಯದಲ್ಲಿ ಬಂಡೆಗಳನ್ನು ಸೀಳಿ ಅವರಿಗೆ ಸಾಗರದಿಂದಲೋ ಎಂಬಂತೆ ಧಾರಾಳವಾಗಿ ನೀರು ಕುಡಿಸಿದನು. ಗಿರಿಶಿಲೆಯಿಂದ ಜಲ ಪ್ರವಾಹಗಳನ್ನು ಹೊರಡಿಸಿ ನದಿಗಳಾಗಿ ಹರಿಯ ಮಾಡಿದನು ಆದರೂ ಅವರು ನಿರ್ಜಲ ಪ್ರದೇಶದಲ್ಲಿ ಪರಾತ್ಪರನಿಗೆ ಪದೇ ಪದೇ ಅವಿಧೇಯರಾಗಿ ಇನ್ನೂ ಹೆಚ್ಚು ಪಾಪ ಮಾಡುತ್ತಾ ಬಂದರು. ಅವರು ಇಷ್ಟಭೋಜನವನ್ನು ಕೇಳಿಕೊಳ್ಳುವಲ್ಲಿ ಸಂಶಯಾತ್ಮರಾಗಿ ದೇವರನ್ನು ಪರೀಕ್ಷಿಸಿದರು. ಅವರು ಆತನಿಗೆ ವಿರೋಧವಾಗಿ ಅಂದದ್ದೇನೆಂದರೆ ದೇವರು ಅರಣ್ಯದಲ್ಲಿ ಊಟಕ್ಕೆ ಬಡಿಸಬಲ್ಲನೋ ? ಬಂಡೆಯನ್ನು ಹೊಡೆದು ನೀರು ಚಿಮ್ಮಿ ಹೊರಗೆ ಬರುವಂತೆಯೂ ಪ್ರವಾಹವು ದಡಮೀರಿ ಹರಿಯುವಂತೆಯೂ ಮಾಡಿದನಲ್ಲವೋ ? ಆತನು ರೊಟ್ಟಿಯನ್ನು ಕೊಡಶಕ್ತನೋ? ತನ್ನ ಜನರಿಗೆ ಮಾಂಸವನ್ನೂ ಒದಗಿಸುವನೋ ಎಂಬದೇ ಯೆಹೋವನು ಕೇಳಿ ರೋಷಗೊಂಡನು. ಅವರು ದೇವರಲ್ಲಿ ಭರವಸೆವಿಡದೆಯೂ ಆತನ ರಕ್ಷಣೆಯನ್ನು ನಂಬದೆಯೂ ಹೋದದರಿಂದ ಆತನಿಗೆ ಇಸ್ರಾಯೇಲ್ಯರ ಮೇಲೆ ಕೋಪವುಂಟಾಯಿತು. ಯಾಕೋಬ್ ವಂಶದವರಲ್ಲಿ ಬೆಂಕಿ ಹತ್ತಿತು. ಆತನು ಮೇಘಗಳಿಗೆ ಅಪ್ಪಣೆಕೊಟ್ಟು ಆಕಾಶದ್ವಾರಗಳನ್ನು ತೆರೆದು ಸ್ವರ್ಗಧಾನ್ಯವಾದ ಮನ್ನವನ್ನು ಅವರಿಗೋಸ್ಕರ ಸುರಿಸಿ ಉಣ್ಣಲಿಕ್ಕೆ ಕೊಟ್ಟನು. ಅವರಲ್ಲಿ ಪ್ರತಿಯೊಬ್ಬನು ದೇವದೂತರ ಆಹಾರವನ್ನು ಭುಜಿಸಿದನು. ಆತನು ಅವರಿಗೆ ತೃಪ್ತಿ ಭೋಜನವನ್ನು ಕೊಟ್ಟನು ಆತನು ಗಗನ ಮಂಡಲದಲ್ಲಿ ಮೂಡಣ ಗಾಳಿಯನ್ನುಂಟು ಮಾಡಿ ಪ್ರತಾಪದಿಂದ ತೆಂಕಣ ಗಾಳಿಯನ್ನೂ ಹೊಡೆದುಕೊಂಡು ಬಂದು ದೂಳಿನಷ್ಟು ಮಾಂಸ ವೃಷ್ಟಿಯನ್ನು ಸುರಿಸಿದನು. ಸಮುದ್ರದ ಮರಳಿನಷ್ಟು ಪಕ್ಷಿಗಳು ಅವರಿದ್ದಲ್ಲಿ ಬೀಳುವಂತೆ ಮಾಡಿದನು. ಅವು ಪಾಳೆಯದ ಮಧ್ಯದಲ್ಲಿಯೇ ಅವರ ಬಿಡಾರಗಳ ಸುತ್ತಲೂ ಬಿದ್ದವು. ಅವರು ತಿಂದು ಸಂತೃಪ್ತರಾದರು. ಆತನು ಅವರಿಗೆ ಬಯಸಿದ್ದನ್ನು ಕೊಟ್ಟನು. ಅವರ ಇಷ್ಟ ಭೋಜನವು ಅವರಿಗೆ ಅಸಹ್ಯವಾಗುವುದಕ್ಕಿಂತ ಮೊದಲು, ಅವರು ಅದನ್ನು ಇನ್ನೂ ಭುಜಿಸುತ್ತಿರುವಾಗಲೇ ದೇವರ ಕೋಪವು ಅವರಿಗೆ ವಿರೋಧವಾಗಿ ಎದ್ದು ಅವರಲ್ಲಿ ಕೊಬ್ಬಿದವರನ್ನು ವಧಿಸಿ ಇಸ್ರಾಯೇಲ್ಯ ಪ್ರಾಯಸ್ಥರನ್ನು

**ನೆಲಕ್ಕುರುಳಿಸಿತು. ಇಷ್ಟಾದರೂ ಪುನಃ ಪುನಃ ಪಾಪ ಮಾಡುತ್ತಾ ಬಂದರು ಅವರು ಆತನ ಅದ್ಭುತ ಕೃತ್ಯಗಳನ್ನು ನಂಬದೆ ಹೋದರು''** (ಕೀತನೆಗಳು 78:14-32).

ಮತ್ತೊಂದು ಸಮಾನಾಂತರವಾದ ವಚನ ಭಾಗವು :

**''ಆತನು ಗದರಿಸಲು ಕೆಂಪು ಸಮುದ್ರವು ಒಣಗಿ ಹೋಯಿತು. ಅಡವಿಯೆನೋ ಎಂಬಂತೆ ಸಾಗರವನ್ನು ದಾಟಿಸಿದನು. ಹಗೆಗಳ ಕೈಯಿಂದ ಅವರನ್ನು ತಪ್ಪಿಸಿದನು. ವೈರಿ ಹಸ್ತದಿಂದ ಬಿಡಿಸಿದನು. ಜಲರಾಶಿಯು ಅವರ ವಿರೋಧಿಗಳನ್ನು ಮುಚ್ಚಿಬಿಟ್ಟಿತು, ಒಬ್ಬನೂ ಉಳಿಯಲಿಲ್ಲ. ಆಗ ಅವರು ಆತನ ಮಾತು ನಂಬಿ ಆತನನ್ನು ಕೀರ್ತಿಸಿದರು. ಆದರೆ ಅವರು ಬೇಗನೆ ಆತನ ಕೆಲಸಗಳನ್ನು ಮರೆತು ಆತನ ಸಂಕಲ್ಪವನ್ನು ಕಾದಿರದೆ ಅರಣ್ಯದಲ್ಲಿ ಆಶಾತುರರಾಗಿ ಅಡವಿಯಲ್ಲಿ ದೇವರನ್ನು ಪರೀಕ್ಷಿಸಿದರು. ಆತನು ಅವರ ಆಶೆಯನ್ನು ಪೂರೈಸಿದರೂ ಅವರ ಪ್ರಾಣಕ್ಕೆ ಕ್ಷಯವನ್ನು ಬರಮಾಡಿದನು''**. (ಕೀರ್ತನೆ 106:9-15).

ಸಿಗರೇಟ್ (ಧೂಮಪಾನ) ಆಲ್ಕೋಹಾಲ್ (ಮದ್ಯಪಾನ ಅಥವಾ ಮಾದಕ ದ್ರವ್ಯ ಡ್ರಗ್ಸ್) ಮುಂತಾದ ಪದಾರ್ಥಗಳ ಮೇಲೆ ಹತೋಟಿಯಲ್ಲಿಡಲಾಗದ ಬಯಕೆಗಳನ್ನು ನಾವು ''ಚಟ'' ಎಂಬುದಾಗಿ ಕರೆದಿದ್ದೇವೆ. ಬೋಜನಗಳ ಪದಾರ್ಥಗಳ ಮೇಲೆ ಅಂಕೆ ಮೀರಿದ ಇಚ್ಛೆಗಳನ್ನು ನಾವು ''ಹೊಟ್ಟೆಬಾಕತನ'' ಎಂಬುದಾಗಿ ಕರೆದಿದ್ದೇವೆ. ಈ ಎರಡು ಸಹ ಶರೀರದ ದುರಿಚ್ಛೆಗಳಾಗಿವೆ. ಇಂತಹ ಬೇರಿನ ಮೂಲವನ್ನು ತೆಗೆಯಲು ಯೇಸುಕ್ರಿಸ್ತನು ಬಂದದ್ದು.

ಅನಾಮಿಕ ಅಮಲಕಾರರು (ನಾರ್ಕಾಟಿಕ್ಸ್ ಅನಾನಿಮಸ್) ಅವರ ಗ್ರಂಥದಲ್ಲಿ 'ಚಟ'ದ ಬಗ್ಗೆ ಬರೆದಿದ್ದಾರೆ. ''ಯಾರು ಚಟಕ್ಕೆ ಬಲಿಯಾಗಿದ್ದಾರೆ?'' ಎಂಬ ಒಂದು ಅಧ್ಯಾಯದಲ್ಲಿ ಅವರು ಹೇಳುವುದೇನೆಂದರೆ ''*ನಮ್ಮಲ್ಲಿ ಹೆಚ್ಚಿನವರು ಈ ಪ್ರಶ್ನೆಗೆ ಎರಡಾವರ್ತಿ ಯೋಚಿಸುವ ಅಗತ್ಯವಿಲ್ಲವೆಂದು ನಮಗೆ ಗೊತ್ತು! ನಮ್ಮ ಸಂಪೂರ್ಣ ಜೀವಿತ ಯೋಚನೆಗಳು ಮದ್ದು ಅಥವಾ ಡ್ರಗ್ಸ್ ಮೇಲೆ ಕೇಂದ್ರಿಕೃತವಾಗಿರುತ್ತದೆ. ಇದು ಒಂದು ಅಥವಾ ಮತ್ತೊಂದು ರೀತಿಯಲ್ಲಿರುತ್ತದೆ. ಪಡೆದು ಉಪಯೋಗಿಸುವುದು ಮತ್ತು ಮಾರ್ಗಗಳನ್ನು ಹುಡುಕುವುದು ಮತ್ತು ಅಧಿಕವಾಗಿ ಹೊಂದಿಕೊಳ್ಳಬೇಕೆಂದು ಉಪಾಯಗಳನ್ನು ಮಾಡುತ್ತೇವೆ. ನಾವು ಬದುಕಲು ಇದನ್ನು ಬಳಸುತ್ತೇವೆ ಮತ್ತು ಬಳಸಲು ಬದುಕುತ್ತೇವೆ. ಈ ಚಟವು - ಮದ್ದು (ಡ್ರಗ್ಸ್)ನಿಂದ ನಿಯಂತ್ರಿಸಲ್ಪಟ್ಟ ಮನುಷ್ಯರ ಜೀವಿತಗಳಾಗಿರುತ್ತದೆ. ನಾವು 'ರೋಗ'ಗಳಲ್ಲಿ ಮುಂದುವರೆಯಲು ಮತ್ತು ಯಾವಾಗಲೂ ಪ್ರಗತಿಹೊಂದಲು ನುಲಿಯಲ್ಪಟ್ಟಿದ್ದೇವೆ. ನಮ್ಮೆಲ್ಲರ ಜೀವಿತಗಳು*

*ಯಾವಾಗಲು ಸೆರೆಮನೆಗಳು, ಧರ್ಮಸಂಸ್ಥೆಗಳು ಮತ್ತು ಮರಣಗಳಲ್ಲಿ ಕೊನೆಗೊಳ್ಳುತ್ತಿವೆ.''* ಚಟಕ್ಕೆ ಬಲಿಯಾದವನು ಹೇಗೆ ಆಲೋಚಿಸುತ್ತಾನೆ ಎಂಬುದರಲ್ಲಿ ಇದು ಮುಂದುವರೆಯುತ್ತದೆ. ಇದು *''ಮದ್ದು (ಡ್ರಗ್ಸ್) ನಮ್ಮನ್ನು ಬಿಟ್ಟು ಹೋಗುವವರೆಗೂ, ನಮ್ಮಲ್ಲಿ ಡ್ರಗ್ಸ್‌ನ ತೊಂದರೆಯಿದೆ ಎಂಬುದಾಗಿ ನಮ್ಮಲ್ಲಿ ಅನೇಕರು ಯೋಚಿಸುವುದಿಲ್ಲ. ಬೇರೆಯವರು ನಿಮಗೆ ಡ್ರಗ್ಸ್‌ನ ತೊಂದರೆ ಎಂಬುದಾಗಿ ಹೇಳಿದರೂ, ನಾವು ಸರಿಯಿದ್ದೇವೆ ಮತ್ತು ಪ್ರಪಂಚದವರು ತಪ್ಪಾದವರೆಂದು ಮನದಟ್ಟು ಮಾಡಿಕೊಳ್ಳುತ್ತಿದ್ದೆವು ನಮ್ಮ ಸ್ವ-ಮಾರಕ ನಡವಳಿಕೆಯಲ್ಲಿ ತಪ್ಪಿಲ್ಲವೆಂದು ತೋರಿಸಲು ಈ ಒಂದು ನಂಬಿಕೆಯ ಮಾತು ಉಪಯೋಗಿಸುತ್ತಿದ್ದೆವು ಎಂದು ಹೇಳುತ್ತದೆ. ಇಂತಹ ಅನಿಯಂತ್ರಿತ ಪದಾರ್ಥಗಳ ಇಚ್ಛೆಗೆ ಒಳಗಾದ ಜನರು ತಾವು ತೊಂದರೆಗಳಲ್ಲಿದ್ದಾರೆಂದು ಒಪ್ಪಿಕೊಳ್ಳುವುದಿಲ್ಲ. ಯಾರಾದರೂ ಡ್ರಗ್ಸ್‌ನಿಂದ ತೊಂದರೆಯಾಗುತ್ತದೆಂದು ಹೇಳಿದರೆ, ನಮ್ಮ ಸಂತೋಷವನ್ನು ಇವರು ಕದ್ದುಕೊಳ್ಳುತ್ತಿದ್ದಾರೆಂದು ಆಲೋಚಿಸುತ್ತಾರೆ. ಬಂಧನ ಅಥವಾ ದುರಿಚ್ಛೆ ಅಂದರೇನು ಎಂಬುದನ್ನು ಪ್ರತಿಪಾದಿಸಲು ನಾವು ಈ ವಾದವನ್ನು ಉಪಯೋಗಿಸಿದ್ದೇವೆ.''*

## ನಿರ್ಬಂಧಪಡಿಸುವ ಹವ್ಯಾಸಗಳು ಅಥವಾ ಇಚ್ಛೆಗಳು

ನಿರ್ಬಂಧ ಪಡಿಸುವ ಹವ್ಯಾಸಗಳು ಅಥವಾ ಇಚ್ಛೆಗಳು ದುರಿಚ್ಛೆಯ ಮತ್ತೊಂದು ತೋರ್ಪಡಿಸುವಿಕೆಯಾಗಿದೆ. ನಮ್ಮ ಅಗತ್ಯತೆಗಿಂತ, ಹೆಚ್ಚಾಗಿ ನಿದ್ದೆ ಮಾಡುವುದು ಒಂದು ಹವ್ಯಾಸವಾಗಿದೆ. ಉದಾಹರಣೆ, ಪ್ರತಿದಿನ 8 ಗಂಟೆ ನಿದ್ರೆ ಮಾಡುವುದು ನಮಗೆ ಅವಶ್ಯ ಆದರೆ ಪ್ರತಿದಿನ ನಾವು 12 ಗಂಟೆ ನಿದ್ರೆ ಮಾಡಿದರೆ, ಆ ಹೆಚ್ಚಿನ 4 ಗಂಟೆಗಳು 'ಚಟ'ದ ಒಂದು ಭಾಗವಾಗಿರುತ್ತದೆ. ಅಥವಾ ಪ್ರತಿವಾರ ಅಥವಾ ಪ್ರತಿ ತಿಂಗಳು ಚಲನಚಿತ್ರ ವೀಕ್ಷಿಸುವುದು ಅತ್ಯಗತ್ಯವಾಗಿದೆ ಎಂಬುದಾಗಿ ಭಾವಿಸಿದರೆ, ಅದು ನಿರ್ಬಂಧಪಡಿಸುವ ಹವ್ಯಾಸ ಅಥವಾ ಇಚ್ಛೆಯಾಗಿರುತ್ತದೆ. ಮತ್ತೊಂದು ಉದಾಹರಣೆಯು ನಿರ್ಬಂಧವಾಗಿ ಸರಕುಗಳನ್ನು ಕೊಳ್ಳುವಿಕೆಯ ಕ್ಷೇತ್ರ ಸಂಬಂಧಿಸಿದೆ. ಪ್ರತಿವಾರ ನೀವು ಸರಕು ಖರೀದಿಗೆ ಹೋಗಲೇಬೇಕೆಂದು ಅಥವಾ ಹೋಗದಿದ್ದರೆ ಏನೋ ತಪ್ಪಾಯಿತು ಮತ್ತು ಜೀವನ ಮುಂದುವರೆಯುವುದಿಲ್ಲ ಎಂದು ಆಲೋಚಿಸಿದರೆ ಇದು ನಿರ್ಬಂಧಪಡಿಸುವ ಹವ್ಯಾಸ, ಇಚ್ಛೆ ಮತ್ತು ಶರೀರಾದಾಶೆಯಾಗಿರುತ್ತದೆ. ನೀವು ನಿರ್ದಿಷ್ಟ ಭೋಗ ವಿಲಾಸಿ ವಸ್ತುಗಳನ್ನು ಹೊಂದಿಕೊಳ್ಳಬೇಕು ಅಥವಾ ನನ್ನ ಹೆಂಡತಿ/ಗಂಡನಿಂದ ಬಹುಮಾನಗಳನ್ನು ಪಡೆದುಕೊಳ್ಳಬೇಕೆಂದು ಆಲೋಚಿಸಿದರೆ, ಇದು

ನಿರ್ಬಂಧಪಡಿಸುವ ಹವ್ಯಾಸ ಅಥವಾ ಬಯಕೆಯಾಗಿರುತ್ತದೆ ಮತ್ತು ಇದು ಶರೀರದಾಶೆಯಾಗಿರುತ್ತದೆ. ಯಾವುದಾದರೂ ನಮ್ಮನ್ನು ನಿಯಂತ್ರಿಸಿ, ದಾಸತ್ವ ಬಂಧನಗಳಲ್ಲಿಟ್ಟರೆ, ಅದು 'ಚಟ'ವಾಗಿರುತ್ತದೆ.

**''ದುಷ್ಟನ ದುಷ್ಕೃತ್ಯಗಳೇ ಅವನನ್ನು ಆಕ್ರಮಿಸುವವು, ಅವನ ಪಾಪಪಾಶಗಳೇ ಅವನನ್ನು ಬಂಧಿಸುವವು''** (ಜ್ಞಾನೋಕ್ತಿ 5:22)

ನಮ್ಮ ಪಾಪಗಳು ನಮಗೆ ಉರುಲುಗಳಾಗುತ್ತವೆ ಮತ್ತು ಗುಲಾಮನಂತೆ ನಮ್ಮನ್ನು ಅಧೀನದಲ್ಲಿಡುತ್ತವೆ. ಪಾಪ ಮಾಡುವವರು ಪಾಪಕ್ಕೆ ಗುಲಾಮರಾಗಿದ್ದಾರೆ ಎಂದು ಯೇಸು ಹೇಳಿದನು.

**''ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪಾಪ ಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ''** (ಯೋಹಾನ 8:34).

**''ಸ್ವಾತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನ ಮಾಡುತ್ತಾರೆ, ಆದರೆ ತಾವೇ ಕೆಟ್ಟತನದ ದಾಸತ್ವದೊಳಗಿದ್ದಾರೆ. ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನು''** (2 ಪೇತ್ರ 2:19).

ನಾವು ಯಾವುದಕ್ಕೆ ಸೋತುಹೋಗಿರುತ್ತೇವೋ ಅದರ ದಾಸತ್ವದೊಳಗಿರುತ್ತೇವೆ. ಇಲ್ಲಿ ದುರಾಶೆಯಿದೆ ಎಂಬುದಾಗಿ ನಾವು ಮಾನ್ಯಮಾಡಬೇಕು.

## ಲೈಂಗಿಕ ವೈಪರೀತ್ಯ

ಮೂರನೇ ತೋರ್ಪಡಿಸುವಿಕೆಯು ಲೈಂಗಿಕ ವೈಪರೀತ್ಯವಾಗಿದೆ. ನಮ್ಮ ಲೈಂಗಿಕತೆ ದೇವರಿಂದ ಸೃಷ್ಟಿಸಲ್ಪಟ್ಟಿದೆ ಮತ್ತು ರಚಿಸಲ್ಪಟ್ಟಿದೆ. ದೇವರು ಯಾವ ಮಾರ್ಗದಲ್ಲಿ ರಚಿಸಿದ್ದಾನೆಂದರೆ ಸ್ತ್ರೀ ಅಥವಾ ಪುರುಷ ಜಾತಿಯು ಆತನ ಮುಂದೆ ಪವಿತ್ರವಾಗಿದೆ. ಇದು ಪರಿಶುದ್ಧವಾದುದು ಮತ್ತು ಮದುವೆಯೊಳಗೆ, ರಚಿಸಲ್ಪಡುವ ಸೃಷ್ಟಿಯಲ್ಲಿಟ್ಟ ಈ ವಿಷಯದಲ್ಲಿ ಯಾವುದೇ ತಪ್ಪಿಲ್ಲ. ಹೇಗಿದ್ದರೂ, ಸ್ವಾಭಾವಿಕವಲ್ಲದ ಲೈಂಗಿಕ ಕ್ರಿಯೆ ಮತ್ತು ಲೈಂಗಿಕ ಭೋಗ ಆಕಾರಗಳು ಇವು. ದೇವರಿಂದ ಸಂಕಲ್ಪಸಲ್ಪಟ್ಟದ್ದಲ್ಲ ಮತ್ತು ಆತನ ಮುಂದೆ ಅಂಗೀಕಾರವಾಗುವುದಿಲ್ಲ. ಅನೇಕ ಕ್ರೈಸ್ತರು ಶರೀರಾದಾಶೆಯ ದಾಸತ್ವದಲ್ಲಿ ಮತ್ತು ಲೈಂಗಿಕತೆಯ ಕ್ಷೇತ್ರಗಳಲ್ಲಿರುವುದನ್ನ ನೋಡುತ್ತೇವೆ. ರೋಮಾಪುರದವರಿಗೆ 1:18-32ರಲ್ಲಿ ದೇವರ ಕೋಪವನ್ನು ನೋಡಬಹುದಾಗಿದೆ.

''ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ. ಯಾಕೆಂದರೆ ದೇವರ ವಿಷಯವಾಗಿ ತಿಳಿಯಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ, ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದನು. ಹೇಗೆಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ. ಹೀಗಿರುವುದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ. ಯಾಕೆಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ. ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿ ಮಾಡಿ ಫಲ ಕಾಣಲಿಲ್ಲ, ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶುಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು. ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನ ಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡೆತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು. ಆಮೆನ್. ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗೆಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾಗಿ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು. ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡೆಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. ಹೇಗೆಂದರೆ ಅವರು ಸಕಲ ವಿಧವಾದ ಅನ್ಯಾಯ ದುರ್ಮಾರ್ಗತನ ಲೋಲುಪ್ತಿ, ದುಷ್ಟತ್ವಗಳಿಂದಲೂ ಹೊಟ್ಟೇಕಿಚ್ಚು, ಕೊಲೆ, ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು. ಅವರು ಕಿವಿ ಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ, ಅಹಂಕಾರಿಗಳೂ, ಬಡಾಯಿಕೊಚ್ಚುವವರೂ, ಕೇಡನ್ನು ಕಲ್ಪಿಸುವವರೂ, ತಂದೆ ತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ, ಮಮತೆಯಿಲ್ಲದವರೂ, ಕರುಣೆಯಿಲ್ಲದವರೂ ಆದರು. ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ (ರೋಮಾಪುರದವರಿಗೆ 1:18-32).

ಸತ್ಯವೇದವು-ಸಲಿಂಗಕಾಮ ಅನೀತಿಯಾದದ್ದೆಂದು ಎಚ್ಚರಿಕೆ ನೀಡುತ್ತದೆ. ದೇವರೇ ಸಲಿಂಗಲೈಂಗಿಕತೆ ಸೃಷ್ಟಿಸಿದ್ದರಬೇಕು ಎಂದು ಪಾಶ್ಚಾತ್ಯ ಜನರು ಯೋಚಿಸುತ್ತಾರೆ. ಇದು ನಿಧಾನವಾಗಿ ನಮ್ಮ ದೇಶಕ್ಕೂ ಸೋಸುತ್ತಿದ್ದೆ. ದೇವರು ನಮ್ಮಲ್ಲಿ ಯಾರನ್ನೂ

ಸಲಿಂಗ ಕಾಮಿಗಳಾಗಿ ಸೃಷ್ಟಿಸಿಲ್ಲ. ಇದು ದೇವರ ಆಜ್ಞೆಗೆ ವ್ಯತಿರಿಕ್ತವಾದುದು. ಇದು ಅಸ್ವಾಭಾವಿಕವಾದದ್ದು. ಈ ಮಾದರಿಯಲ್ಲಿ ದೇವರು ನಮ್ಮ ಲೈಂಗಿಕತೆಯನ್ನು ವಿನ್ಯಾಸಗೊಳಿಸಿಲ್ಲ ಇದು ಪಾಪ ಮತ್ತು ನಾವು ಇದನ್ನು ಮನ್ನಿಸಲು ಸಾಧ್ಯವಿಲ್ಲ. ದೇವರ ಸೃಷ್ಟಿಯಲ್ಲಿ ಸಲಿಂಗ ಕಾಮವು ಅಂಗೀಕಾರವಾಗಲಿಲ್ಲವಾದ್ದರಿಂದ, ನಾವು ಸಲಿಂಗ ಲೈಂಗಿಕತೆ ಅಂಗೀಕೃತವಾಗುತ್ತದೆಂದು ಹೇಳಲಾಗುವುದಿಲ್ಲ. ರೋಮಾಪುರದವರಿಗೆ 1:28ರಲ್ಲಿ ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡೆಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. ಯಾವಾಗ ಜನರು ತಮ್ಮ ಸ್ವಂತ ಮಾರ್ಗಗಳಿಗೆ ಹಟಹಿಡಿಯುತ್ತಾರೋ, ಮತ್ತು ಅಸ್ವಾಭಾವಿಕ ಇಚ್ಛೆಗಳನ್ನು ಪಾಲಿಸುತ್ತಾರೋ, ದೇವರು ಅವರಿಂದ ದೂರ ಸರಿಯುತ್ತಾನೆ. ಮತ್ತು ಆ ವ್ಯಕ್ತಿಯ ಮನಸ್ಸು ನೀಚವಾಗುತ್ತದೆ. (ಅಂಗೀಕೃತವಲ್ಲದ, ತಿರಸ್ಕೃತ, ವ್ಯರ್ಥ, ಪ್ರಯೋಜನಕ್ಕೆ ಬಾರದ್ದಾಗುತ್ತದೆ).

ಯಾವಾಗ ಜನರ ಮನಸ್ಸು ಅನಾಚಾರದಿಂದ ತುಂಬಿರುತ್ತದೋ ಅವರ ಆಲೋಚನೆಯ ಪ್ರಕ್ರಿಯೆಯು ಬಹಳವಾಗಿ ಅಂಧಗೊಂಡಿರುತ್ತದೆ. ಮತ್ತು ಅವರ ಅಸ್ವಾಭಾವಿಕ ಜೀವನ ಶೈಲಿಯು ನಿಶ್ಚಿತವಾಗಿ ಸಾಮಾನ್ಯವಾದುದೆಂದು ಆಲೋಚಿಸುತ್ತಾರೆ. ಉದಾಹರಣೆಗೆ ಸಲಿಂಗಕಾಮಿಗಳು, ನಾವು ಇದೇ ರೀತಿಯಾಗಿ ಮಾಡಲ್ಪಟ್ಟಿದ್ದೇವೆಂದು ಆಲೋಚಿಸುತ್ತಾರೆ ಆದರೆ ಸತ್ಯವೇದವು ಅದನ್ನು ಪಾಪವೆಂದು ಕರೆಯುತ್ತದೆ! ಯಾವಾಗ ಯಾರಾದರೂ, ಅಂದರೆ ಅವನು ಅಥವಾ ಅವಳು, ತಮ್ಮ ಸ್ವಂತ ವಿಚಾರಗಳು ಮತ್ತು ಆಲೋಚನೆಗಳನ್ನು ಪಾಲಿಸಬೇಕೆಂದು ಬಯಸಿದರೆ, ದೇವರು ಅವರಿಂದ ದೂರ ಸರಿದು ''ನೀನು ಈ ಕಾರ್ಯಮಾಡಬೇಕೋ, ನಡೆಯಿಸು, ನಿನ್ನ ಸ್ವಂತ ಮಾರ್ಗಗಳು ಬೇಕು ಎಂಬುದಾಗಿ ಬಯಸಿದರೆ ಹೊಂದಿಕೋ'' ಎಂಬುದಾಗಿ ಹೇಳುತ್ತಾನೆ ಎಂದು ಹೇಳುತ್ತದೆ. ಲೈಂಗಿಕ ವೈಪರೀತ್ಯ, ಅನೀತಿ, ಮದುವೆಗೆ ಮೊದಲು ಲೈಂಗಿಕತೆ, ಮದುವೆಯಾದ ಮೇಲೆ ಬಾಹ್ಯ ಲೈಂಗಿಕತೆ, ವ್ಯಭಿಚಾರ, ಸಲಿಂಗಕಾಮ ಮತ್ತು ಹಾದರ (ಬಂಧು ಜತೆ ಲೈಂಗಿಕ ಸಂಪರ್ಕ) ಮುಂತಾದವುಗಳು ದೇವರ ಮುಂದೆ ಅಂಗೀಕೃತವಾಗುವುದಿಲ್ಲ.

ಆಮೇಲೆ, ಲೈಂಗಿಕ ವ್ಯತಿರಿಕ್ತತೆಯ ಆಕಾರಗಳು ಸಹ ಇದೆ, ಇದರಲ್ಲಿ ಅತಿ ಕಲ್ಪನಾಮಯ ಲೈಂಗಿಕ ಅನುಭವಗಳು ಒಂದಾಗಿದೆ. ಇದರಲ್ಲಿ ನೀನು ದೈಹಿಕವಾಗಿ ಕಾರ್ಯ ಮಾಡಲಿಲ್ಲ ಆದರೆ ನೀನು ನಿನ್ನ ಕೊಠಡಿಗಳಲ್ಲಿ ಕುಳಿತು ಎಲ್ಲಾ ಬಗೆಯ

ವಿಷಯಗಳನ್ನು ಕಲ್ಪಿಸಿಕೊಳ್ಳುತ್ತಿ. ನಿನ್ನ ಸಂಗಾತಿಯೊಡನೆ ದೈಹಿಕ ಲೈಂಗಿಕತೆ ಹೊಂದದೇ, ಲೈಂಗಿಕ ತೃಪ್ತಿಪಡಲು ವಸ್ತುಗಳನ್ನು ಉಪಯೋಗಿಸುವುದು. ಇದು ಸಹ ಲೈಂಗಿಕ ವೈಪರೀತ್ಯ ಹಸ್ತಮೈಥುನದ ಬಂಧನದಲ್ಲಿರುವುದು (ರೂಢಿಕರ ಹಸ್ತಮೈಥುನ) ಸಹ ಮತ್ತೊಂದು ಲೈಂಗಿಕ ವ್ಯತಿರಿಕ್ತತೆಯ ಉದಾಹರಣೆಯಾಗಿದೆ. ಮತ್ತು ಇದು ಶರೀರಾದಾಸೆಯಾಗಿದೆ. ಇದು ನಿನ್ನನ್ನು ಹಿಡಿದಿರಬಹುದೇ ನೀನು ಇದರಿಂದ ಸ್ವತಂತ್ರಗೊಳ್ಳಬೇಕು. ದೇವರು ನಿನ್ನ ಜೀವಿತದಲ್ಲಿರುವ ಇಂತಹ ಸಮಸ್ಯೆಗಳೊಂದಿಗೆ ವ್ಯವಹರಿಸಲು ಬಯಸುತ್ತಾನೆ.

## ಕಣ್ಣಿನಾಶೆ (ಕಣ್ಣಿನ ದುರಾಶೆ)

**ಅಶ್ಲೀಲತೆ :**

''**ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ**'' (1 ಥೆಸಲೋನಿಕದವರಿಗೆ 5:22)

ಹಲವು ವಿಶ್ವಾಸಿಗಳು ಇಂತಹ ಅಶ್ಲೀಲತೆಗಳಲ್ಲಿ ಸಿಲುಕಿಹಾಕಿಕೊಂಡಿದ್ದಾರೆ ಯಾಕೆಂದರೆ ನಮ್ಮ ಮನೆಗಳಿಗೆ ಅಂತಹ ಸಾಮಾಗ್ರಿಗಳು ಬಂದು ಸೇರಿವೆ. ನಮ್ಮ ಬೆಳಗ್ಗಿನ ವೃತ್ತಪತ್ರಿಕೆಗಳು (ನ್ಯೂಸ್ ಪೇಪರ್)ಗಳ ಜಾಹೀರಾತು ಮತ್ತು ಅಂಕಣಗಳಲ್ಲಿ ಬರೀ ಅಲ್ಪ ಬಟ್ಟೆ ತೊಡಿಸಿರುವ ಸ್ತ್ರೀಯರ ಚಿತ್ರಗಳಿರುತ್ತವೆ. ವೃತ್ತ ಪತ್ರಿಕೆಗಳು ಸುದ್ಧಿಗಳನ್ನು ದೀರ್ಘವಾಗಿ ನೀಡುವುದಿಲ್ಲ ಆದರೇ ಅಲ್ಪ ಬಟ್ಟೆ ಧರಿಸಿದ ಸ್ತ್ರೀಯರ ಚಿತ್ರಗಳು ಎಲ್ಲಾ ಪುಟಗಳಲ್ಲಿರುತ್ತವೆ. ಈ ಚಿತ್ರಗಳನ್ನು ನೋಡದೇ ಸುದ್ದಿಗಳನ್ನು ಓದುವುದು ಬಹಳ ಕಷ್ಟವಾಗುತ್ತದೆ. ಇಂದಿನ ದಿನಗಳಲ್ಲಿ ಅಂತಹ ಭಾವಚಿತ್ರಗಳು ನಾವು ನೋಡುವ ಎಲ್ಲಾ ಸ್ಥಳಗಳಲ್ಲೂ ಆವರಿಸಿವೆ. ಬೆಲೆಪಟ್ಟಿ ಫಲಕಗಳು, ಪ್ರಕಟನಾ ಭಿತ್ತಿ ಪತ್ರಗಳು, ಇಂಟರ್‌ನೆಟ್‌ಗಳು ಮುಂತಾದವುಗಳ ಕಡೆಯಲ್ಲೂ ಸಹ ಕಾಣುತ್ತೇವೆ. ಇಂತಹ ಅಶ್ಲೀಲತೆಯೆಂಬ ಬಲೆಯಲ್ಲಿ ಸಿಕ್ಕಿಕೊಂಡಿದ್ದರೆ, ನಮ್ಮನ್ನು ನಾವೇ ಇದಕ್ಕೆ ವಿರುದ್ಧವಾಗಿ ಕಾಪಾಡಿಕೊಳ್ಳಬೇಕು. ಯಾಕೆಂದರೆ ಆಶ್ಲೀಲತೆ ಕಣ್ಣಿನಾಶೆಯಾಗಿದೆ.

### ಹೊಲಸು ಆಲೋಚನೆಗಳು ಮತ್ತು ಅನೈತಿಕ ಭ್ರಮೆಗಳು

ಜನರು ಹೊಲಸು ವಿಚಾರಗಳಿಂದಲೂ ಮತ್ತು ನೀತಿಗೆಟ್ಟ ಕಲ್ಪನೆಗಳಿಂದಲೂ ಆಶೆ ತಣಿಸಿಕೊಳ್ಳುತ್ತಾರೆ. ಹೊಲಸು ಆಲೋಚನೆಗಳು ಮತ್ತು ಭ್ರಮೆಗಳು ಕಣ್ಣಿನಾಶೆಯ ಭಾಗಗಳಾಗಿವೆ. ಪವಿತ್ರವಾದ ಮತ್ತು ಶುಚಿಯಾದ ವಿಷಯಗಳ ಬಗ್ಗೆ ಯೋಚಿಸಿರಿ ಎಂಬುದಾಗಿ ಸತ್ಯವೇದವು ನಮಗೆ ಪ್ರೋತ್ಸಾಹಿಸುತ್ತದೆ.

**ಕಡೇ ಮಾತೇನಂದರೆ ಸಹೋದರರೇ, ಯಾವೂದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ ಯಾವದು ಸದ್ಗುಣವಾಗಿದೆಯೋ ಯಾವದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ** (ಫಿಲಿಪ್ಪಿಯವರಿಗೆ 4:8)

## ಚೆಂದವಾಗಿ ಕಾಣಿಸುವ ಪುರುಷ ಮತ್ತು ಸ್ತ್ರೀ ಕಡೆಗೆ ಆಕರ್ಷಣೆಗಳು

ಇದು ನಮ್ಮೆಲ್ಲರ ಮನೆಗಳ ಸಮೀಪಕ್ಕೂ ತಾಕುತ್ತದೆ ಮತ್ತು ಇದು ಕಣ್ಣಿನಾಶೆಯಾಗಿದೆ. ಕೆಲವು ಜನರು ಅವರ ತಲೆಯನ್ನು ನೇರವಾಗಿ ಇಟ್ಟುಕೊಳ್ಳುವುದಿಲ್ಲ. ಅವರ ತಲೆಗಳು ಎಲ್ಲಾ ಸಮಯದಲ್ಲೂ ಅವರ ಮುಂದೆ ಹಾದುಹೋಗುವ ಒಳ್ಳೆಯ ನೋಟವುಳ್ಳ ವ್ಯಕ್ತಿಗಳ ಕಡೆಗೆ ಹೋಗುತ್ತದೆ. ಯೇಸು ಹೇಳಿದ್ದೇನೆಂದರೆ ''ಆದರೆ ನಾನು ನಿಮಗೆ ಹೇಳುವದೇನೆಂದರೆ ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು (ಮತ್ತಾಯ 5:28).

## ಲೋಭ (ಅತ್ಯಾಶೆ)

ಲೋಭವು ಯಾವನೋ ಒಬ್ಬನು ಹೊಂದಿರುವುದನ್ನು ಇಚ್ಛಿಸುವುದಾಗಿದೆ ಲೋಭವು ಸಹ ವಿಗ್ರಹಾರಾಧನೆಗೆ ಸಮವಾದುದೆಂದು ಸತ್ಯವೇದವು ಎಚ್ಚರಿಸುತ್ತದೆ. ನಾವು ಯಾವಾಗಲೂ, ಚಿತ್ರಪಟಗಳು, ಮೂರ್ತಿಗಳ ವಿಗ್ರಹಗಳಿಗೆ ಅಡ್ಡಬೀಳುವವರನ್ನು ನೋಡಿ ಅವರಿಗೆ ಕೈ ಮಾಡಿ ತೋರಿಸುತ್ತೇವೆ. ನೀವು ಬೇರೊಬ್ಬನು ಹೊಂದಿರುವುದನ್ನು ಪಡೆಯುವ ದಾಹವಿದ್ದರೆ ಅದು ಲೋಭ ಮತ್ತು ವಿಗ್ರಹರಾಧನೆ.

**''ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರು ಬಾಚಿಕೊಳ್ಳುತ್ತಲೆ ಇದ್ದಾರೆ. ಪ್ರವಾದಿಗಳು ಮೊದಲಾಗಿ ಯಾಜಕರವರೆಗೆ ಸಕಲರು ಮೋಸ ಮಾಡುತ್ತಾರೆ''** (ಯೆರೆಮೀಯ 6:13)

**''ಆದುದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವನೆಗಳನ್ನು ಸಾಯಿಸಿರಿ ಜಾರತ್ವ, ಬಂಡುತನ, ಕಾಮಾಭಿಲಾಷೆ, ದುರಾಶೆ, ವಿಗ್ರಹರಾಧನೆಗೆ ಸಮವಾಗಿರುವ ಲೋಭ ಇವುಗಳನ್ನ ವಿಸರ್ಜಿಸಿ ಬಿಡಿರಿ''** (ಕೊಲೊಸ್ಸೆ 3:5)

ಲೋಭವು ವಿಗ್ರಹರಾಧನೆಗೆ ಸಮವಾಗಿದೆ ಯಾಕೆಂದರೆ ದೇವರ ಮೇಲೆ ನಮಗಿರುವ ಇಚ್ಛೆಗಳ ಪ್ರಾಧಾನ್ಯತೆಗೆ ಬದಲು ಬೇರೆ ಯಾವುದನ್ನೂ ಇಚ್ಛಿಸುವಂತೆ ಅವಕಾಶ ನೀಡುತ್ತದೆ. ನಮ್ಮ ಮತ್ತು ದೇವರ ನಡುವೆ ಆತನೊಂದಿಗೆ ಆತ್ಮದಲ್ಲೂ ಸತ್ಯದಲ್ಲೂ ಸಂಬಂಧವನ್ನು ಕಾಪಾಡಿಕೊಳ್ಳುವುದರ ನಡುವೆ ಯಾವುದೇ ಬಂದರೂ ಅದು ವಿಗ್ರಹವಾಗಿದೆ. ಭೌತಿಕ ವಸ್ತುಗಳಾದ ಚಿತ್ರಪಟ ಅಥವಾ ಮೂರ್ತಿಗಳು, ಅಥವಾ

ಯಾವುದಕ್ಕಾದರೂ ''ಪ್ರಾಣಕ್ಕೆ'' ಸಂಬಂಧಿಸಿದ ಆಕರ್ಷಣೆಯಾಗಿರಬಹುದು. ದೇವರು ಇವುಗಳನ್ನು ಆತ್ಮಿಕ ವ್ಯಭಿಚಾರವೆಂದು ಪರಿಗಣಿಸುತ್ತಾನೆ. ನಮ್ಮ ಜೀವಿತಗಳಲ್ಲಿ ಯಾವುದಾದರೂ, ಅಂದರೆ ವ್ಯಕ್ತಿಯಾಗಿರಬಹುದು, ಆಹಾರ, ಲೈಂಗಿಕತೆ, ವ್ಯಕ್ತಿ, ಕ್ರೀಡೆ, ಧರ್ಮ, ಅಥವಾ ಆರಾಧನೆಯ ಆಕೃತಿಯು ಇವುಗಳೆಲ್ಲವು ದೇವರ ಸ್ಥಾನವನ್ನು ತೆಗೆದುಕೊಂಡಿದ್ದರೆ ಅದು ವಿಗ್ರಹಾರಾಧನೆಯಾಗಿರುತ್ತದೆ.

ದೇವರು ಹೇಳುತ್ತಾನೆ ''ಮತ್ತೊಬ್ಬನ ಮನೆಯನ್ನು ಆಶಿಸಬಾರದು, ಮತ್ತೊಬ್ಬನ ಹೆಂಡತಿ ಗಂಡಾಳು ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವದನ್ನೂ ಆಶಿಸಬಾರದು'' (ವಿಮೋಚನಾಕಾಂಡ 20:17). ಮತ್ತೊಬ್ಬನು ಹೊಂದಿರುವುದನ್ನು ನೋಡಿ ''ನಾನು ಅದನ್ನು ಹೊಂದಿಕೊಳ್ಳಬೇಕು'', ಎಂದು ಹೇಳಿದರೆ ಅದು ಲೋಭವಾಗುತ್ತದೆ. ಯೇಸು ಲೋಭದ ಬಗ್ಗೆ ಎಚ್ಚರಿಕೆ ನೀಡಿದ್ದಾನೆ. ''ಜನರಿಗೆ ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರವಾಗುವುದಿಲ್ಲ'' (ಲೂಕ 12:15) ಎಂದು ಹೇಳಿದನು.

**ಹಣದಾಶೆ, ಅಧಿಕಾರ, ಕೀರ್ತಿ, ಸ್ಥಾನ ಮತ್ತು ವರ್ಚಸ್ಸು**

ಹಣ, ಅಧಿಕಾರ, ಪ್ರಸಿದ್ಧಿ, ಸ್ಥಾನ ಮತ್ತು ಪ್ರಭಾವಗಳು, - ನಾವು ಉಪಯೋಗಿಸುವ ಸಾಧನಗಳಾಗಿವೆ. ಆದರೆ ಅತಿಯಾದ ಮೋಹ ಅಥವಾ ಹತೋಟಿಯಲ್ಲಿರದ ಇಚ್ಛೆಗಳು ದುರಾಶೆಯಾಗಿರುತ್ತದೆ. ಏದೇನ್ ತೋಟದಲ್ಲಿ ಸೈತಾನನು ಹವ್ವಳನ್ನು ಇಂತಹ ಬಗೆಯ ಶೋಧನೆಯೊಳಗೆ ಸಿಲುಕಿಸಿದನು. ''ಆಗ ಸ್ತ್ರೀಯು - ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು'' (ಆದಿಕಾಂಡ 3:6) ಇಲ್ಲಿ ಮೂರು ಬಗೆಯ ಶೋಧನೆಗಳನ್ನು ನೋಡುತ್ತೇವೆ ಕಣ್ಣೀನಾಶೆ (ನೋಡುವದಕ್ಕೆ ರಮ್ಯವಾಗಿಯೂ'') ಶರೀರದಾಶೆ (''ತಿನ್ನುವದಕ್ಕೆ ಉತ್ತಮವಾಗಿಯೂ'') ಬದುಕುಬಾಳಿನ ಡಂಭ (''ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದಾಗಿಯೂ''). ಆದ್ದರಿಂದ ಇಂತಹ ಬಗೆಯ ಎಲ್ಲಾ ವಸ್ತುಗಳ ಮೇಲಿನ ಮಿತಿಮೀರಿದ ಇಚ್ಛೆಯನ್ನು ಹೊಂದದಂತೆ ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು.

**ಪ್ರಾಪಂಚಿಕತೆ**

(ಮೋಹಕ ಶಕ್ತಿ (ಎಳೆತ) ಅಥವಾ ಆಕರ್ಷಣೆ)- ಪ್ರಾಪಂಚಿಕ ವಸ್ತುಗಳ ಮೇಲೆ ಮೋಹಗೊಂಡರೆ ಅಥವಾ ಆಕರ್ಷಣೆಗೊಂಡರೆ, ಅದು ನಮ್ಮನ್ನು ದೇವರೊಂದಿಗೆ ವೈರಿಗಳನ್ನಾಗಿಸುತ್ತದೆ. ಇದು ಕಣ್ಣೀನಾಶೆಯ ಮತ್ತೊಂದು ಹಂತವಾಗಿದೆ.

**''ನಿಮ್ಮಲ್ಲಿ ಯುದ್ಧಗಳೂ ಕಾದಾಟಗಳೂ ಎಲ್ಲಿಂದ ಹುಟ್ಟುತ್ತವೆ? ನಿಮ್ಮ ಇಂದ್ರಿಯಗಳಲ್ಲಿ ಹೋರಾಡುವ ಭೋಗಾಶೆಗಳಿಂದಲೇ ಅಲ್ಲವೇ. ನೀವು ಆಶಿಸಿದರೂ ಹೊಂದದೆ ಇದ್ದೀರಿ. ನೀವು ಕೊಲೆಗಾರರಾಗುವಷ್ಟು ಹೊಟ್ಟೆಕಿಚ್ಚುಪಟ್ಟಾದರೂ ಸಂಪಾದಿಸಲಾರದೆ ಇದ್ದೀರಿ, ನೀವು ಕಾದಾಡುತ್ತೀರಿ. ಯುದ್ಧ ಮಾಡುತ್ತೀರಿ. ನೀವು ದೇವರನ್ನು ಬೇಡಿಕೊಳ್ಳದ ಕಾರಣ ನಿಮಗೇನು ದೊರೆಯಲಿಲ್ಲ. ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವುದರಿಂದ ನಿಮಗೆ ದೊರೆಯುವುದಿಲ್ಲ. ವ್ಯಭಿಚಾರಿಗಳು ನೀವು, ಇಹಲೋಕ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ''** (ಯಾಕೋಬ 4:1-4).

ಯಾರಾರು ಲೋಕಕ್ಕೆ ಸ್ನೇಹಿತರಾಗಿರುತ್ತಾರೋ, ಅವರು ದೇವರಿಗೆ ವೈರಿಗಳಾಗಿರುತ್ತಾರೆ. ಈ ಪ್ರಪಂಚದಲ್ಲಿರುವ ಯಾವುದರ ಮೇಲೂ ಇಚ್ಛೆ ಹೊಂದಿರಬಾರದೆಂದು ನಾನು ಹೇಳುತ್ತಿಲ್ಲಾ. ಖಂಡಿತವಾಗಿ ನಮಗೆ ಓಡಾಡಲು ವಾಹನಬೇಕು, ಜೀವನ ಸಾಗಿಸಲು ಮನೆಬೇಕು. ಮತ್ತು ಇನ್ನು ಅನೇಕ ವಿಷಯಗಳ ಅವಶ್ಯವಿದೆ. ದೇವರು ಕೊಟ್ಟ ವಸ್ತುಗಳಲ್ಲಿ ಸಂತೋಷಪಡುವುದರಲ್ಲಿ ಯಾವುದೇ ತಪ್ಪಿಲ್ಲ. (1 ತಿಮೊಥೆಯನಿಗೆ 6:1-7) ಆದರೆ ಲೋಕದ ವಸ್ತುಗಳ ಮೇಲಿರುವ ನಮ್ಮ ಆಶೆಗಳು, ನಿಯಂತ್ರಿತವಾಗದ ಇಚ್ಛೆಗಳಾಗಿದ್ದರೆ, ಆವಾಗ ನಾವು ''ಇಹಲೋಕದ ಪ್ರೀತಿ''-ಯೊಳಗಿರುವವರು ಮತ್ತು ದೇವರ ಸ್ನೇಹಿತರಾಗಲು ಸಾಧ್ಯವಿಲ್ಲದಂತಾಗುತ್ತದೆ.

**ದುರಾಶೆ**

ದುರಾಶೆಯು ಅತ್ಯಧಿಕವಾಗಿ ಇಚ್ಛೆಪಡುವುದಾಗಿದೆ. ''ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯುನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ''. (1 ತಿಮೊಥೆಯನಿಗೆ 6:10). ಹಣ ಅನ್ನುವಂತಹದ್ದು ತಪ್ಪಲ್ಲ. ಆದರೆ ಅದರ ಮೇಲೆ ಆಶೆ ಮತ್ತು ಅದಕ್ಕಾಗಿ ಹಂಬಲಿಸುವುದು ತಪ್ಪು. ಆತನ ಜನರನ್ನು ಅಭಿವೃದ್ಧಿಪಡಿಸಬೇಕು ಮತ್ತು ಆಶೀರ್ವದಿಸಬೇಕೆಂಬುದು ದೇವರ ಚಿತ್ತವಾಗಿದೆ. ಇದರ

ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲಾ! ಆದರೆ ನಮ್ಮಲ್ಲಿರುವ ದೇವರ ಆಶೀರ್ವಾದಗಳ ಇಚ್ಛೆಗಳಲ್ಲಿ ಅನೇಕರು ದುರಾಶೆಯೆಂಬ ಅಪಾಯಕಾರಿ ಕ್ಷೇತ್ರದಲ್ಲಿ ಮಾರ್ಗತಪ್ಪಿದ್ದಾರೆ. ಇದು ಸಭೆಗಳಲ್ಲೂ ಸಹ ಪೂರ್ಣವ್ಯಾಪ್ತಿಗೊಂಡಿದೆ. ನಾವು ನಮ್ಮ ಜೀವಿತಗಳಲ್ಲಿ, ಬಹುದೊಡ್ಡ ಕಾರು, ದೊಡ್ಡಮನೆ, ಅಧಿಕ ಸಂಪತ್ತು, ಅತ್ಯಧಿಕ ಯಶಸ್ಸು, ವಿಶಾಲವಾದ ಸೇವೆ, ಶ್ರೇಷ್ಟವಾಗಿ ಗುರ್ತಿಸುವಿಕೆ, ಮಹೋನ್ನತ ಪದವಿ ಮುಂತಾದವುಗಳನ್ನು ಹೊಂದಬೇಕೆಂದು ಆಶಿಸಿ ನಾವು ದೇವರ ಆಶೀರ್ವಾದಗಳನ್ನು ಕೇಳಿಕೊಳ್ಳುತ್ತೇವೆ ಎಂದು ಹೇಳುತ್ತೇವೆ. 'ಅಧಿಕ' 'ದೊಡ್ಡ' ಮತ್ತು 'ಉತ್ತಮ' - ಇವುಗಳನ್ನು ಅಪೇಕ್ಷಿಸುವ ಕಾರ್ಯ ವಿಧಾನದಲ್ಲಿ, ನಮಗೆ ಗೊತ್ತಿಲ್ಲದೇ, ಅಂತಹ ವಸ್ತುಗಳ ಮೇಲೆ ಅತಿಯಾದ ಮೋಹವನ್ನು ಬೆಳೆಸಿಕೊಳ್ಳುತ್ತೇವೆ. ಇವುಗಳ ಮೇಲಿನ ಅಪೇಕ್ಷೆಯು ಹತೋಟಿಯಲ್ಲಿಡಲಾಗದ್ದು ಮತ್ತು ವಿಪರೀತವಾದದ್ದು. ನಾವು ದೈಹಿಕ ಅಪೇಕ್ಷ ಮತ್ತು ಒಳ್ಳೆಯ ಇಚ್ಛೆಗಳನ್ನು ಬಿಟ್ಟು, ದುರಾಶೆಯೆಂಬ ಸ್ಥಳಕ್ಕೆ ತಲುಪಿದ್ದೇವೆ. ಇದು ಅಪಾಯಕಾರಿ! ''ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ'' (1 ತಿಮೊಥೆಯನಿಗೆ 6:6). ಎಂಬ ನಮಗೆ ಗೊತ್ತಿರುವ ಸ್ಥಳಗಳಿಗೆ ಹಿಂದಿರುಗಬೇಕು.

ನಾವು ಹಣ, ಪ್ರಭಾವ, ಬಲ, ಸ್ಥಾನಮಾನ ಮುಂತಾದವುಗಳ ಮೇಲೆ ಮೋಹವನ್ನು ಬೆಳೆಸಿಕೊಳ್ಳದೆ ದೇವರ ಮಹೋನ್ನತ ಕರೆ, ಶ್ರೇಷ್ಟ ಕನಸುಗಳು ಮತ್ತು ಸಾತ್ವಿಕ ಉದ್ದೇಶಗಳನ್ನು ಪೂರ್ಣಗೊಳಿಸಲು ನಡೆದುಕೊಳ್ಳುವವರಾಗಿರಬೇಕು. ಹಣವು ತಾನೇ ತಾನಾಗಿ ಯಾವುದೇ ದೋಷವಿಲ್ಲದ್ದು. ನಮಗೆ ಖಂಡಿತವಾಗಿ ಹಣಬೇಕು. ತುಂಬಾ ಹಣಬೇಕು ಎಂಬುದಾಗಿ ದೇವರಲ್ಲಿ ಪ್ರಾರ್ಥಿಸಿ ನಂಬುತ್ತೇವೆ ಆದರೆ ಹಣವೇ ನಮ್ಮ ಗುರಿಯಲ್ಲ. ಇದು ಸಾಮಾನುಗಳ ಬೆಲೆ ತೆರುವ ಸಾಧನ ಮಾತ್ರವಾಗಿದೆ ಇದರಿಂದ ನಾವು ಸುವಾರ್ತೆ ಹೇಳಿ ಮತ್ತು ಆತ್ಮಗಳನ್ನು ಕ್ರಿಸ್ತನ ಬಳಿಗೆ ನಡಿಸಿ ದೇವರ ರಾಜ್ಯ ಕಟ್ಟಬಹುದು.

ಆದರೆ ಕ್ರಿಸ್ತನ ಅಂಗಗಳಾದ ನಮ್ಮಲ್ಲಿ ಏನು ಸಂಭವಿಸಿದೆ. ನಾವು ದೇವರ ಆಶೀರ್ವಾದಗಳನ್ನು ಪಾಲಿಸುವ ಇಚ್ಛೆಗಳಲ್ಲಿ ಲೋಭ, ಧನಲಾಭ ಮತ್ತು ದುರಾಶೆಗಳಿಗೆ ಬಲಿಯಾಗಿದ್ದೇವೆ. ನಾವು ವಸ್ತುಗಳನ್ನು ಹಿಂಬಾಲಿಸುವವರಾಗಿ, ದೇವರ ಕರೆ ಆತನು ನಮಗೆ ಕೊಟ್ಟ ಕನಸುಗಳನ್ನು ಮರೆತುಬಿಡುತ್ತೇವೆ. ''ಸರಕುಗಳು''-ದೇವರ ಕರೆಯನ್ನು ಮುಂದುವರೆಸಲು ನಾವು ಬಳಸುವ ಆತನ ಸಾಧನಗಳಾಗಿವೆ.

**ದುರಿಚ್ಛೆಯ ಮೂಲದ ತೋರ್ಪಡಿಸುವಿಕೆ**

- ಪದಾರ್ಥಗಳ ಮೇಲಿನ ಅನಿಯಂತ್ರಿತ ಇಚ್ಛೆಗಳು
- ನಿರ್ಬಂಧಪಡಿಸುವ ಹವ್ಯಾಸಗಳು ಅಥವಾ ಇಚ್ಛೆಗಳು
- ಲೈಂಗಿಕ ವ್ಯತಿರಿಕ್ತತೆ
- ಅಶ್ಲೀಲತೆ
- ಹೊಲಸು ಆಲೋಚನೆಗಳು ಮತ್ತು ಅನೈತಿಕ ಭ್ರಮೆಗಳು
- ಲೋಭ
- ಹಣದಾಸೆ, ಅಧಿಕಾರ, ಕೀರ್ತಿ, ಸ್ಥಾನಮಾನ ಮತ್ತು ಪ್ರಭಾವಗಳ ಆಶೆ
- ಪ್ರಾಪಂಚಿಕತೆ
- ದುರಾಶೆ

**ಯೌವ್ವನದ ಇಚ್ಛೆಗಳು**

''ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು, ನೀತಿ ವಿಶ್ವಾಸ, ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವುದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು'' (2 ತಿಮೊಥೆಯನಿಗೆ 2:22). ಎಂಬುದಾಗಿ ಸತ್ಯವೇದವು ಎಚ್ಚರಿಸುತ್ತದೆ. ಯೌವನಸ್ಥರು ದುರಾಶೆಗಳಿಂದ ಹಿಡಿಯಲ್ಪಟ್ಟಿರುವುದಕ್ಕೆ ಒಂದು ದೊಡ್ಡ ಪಟ್ಟಿಯೇ ಇದೆ. ಕೆಲವು ಉದಾಹರಣೆಗಳನ್ನು ನೋಡೋಣ. ದೈವಿಕವಲ್ಲದ ಸಂಗೀತಗಳು, ಹಲವು ಬಗೆಯ / ಆಧುನಿಕ ಸಂಗೀತ ಮುಂತಾದವುಗಳು ಅವುಗಳ ವಸ್ತು ವಿಷಯಗಳಲ್ಲಿ ಚಟಗಳಾಗಿದ್ದು ಮಾರಕಗಳಾಗುತ್ತವೆ. ಅವರು ಇವುಗಳಿಂದ ನೀತಿ ಬೋಧೆ ಹೊಂದುವುದಿಲ್ಲ. ಆದಾಗ್ಯೂ ಅನೇಕ ಯೌವನಸ್ಥರು ''ನಾನು ಇದನ್ನು ಕೇಳಲೇಬೇಕು ಈ ದಿನವನ್ನು ಕಾಫಿ ಮತ್ತು ಸಂಗೀತವಿಲ್ಲದೇ ಪ್ರಾರಂಭಿಸಲು ಸಾಧ್ಯವಿಲ್ಲ'' ಎಂಬುದಾಗಿ ಹೇಳುತ್ತಾರೆ. ಇದು ಯೌವ್ವನದ ದುರಿಚ್ಛೆಗಳಾಗಿವೆ. ಇದು ಬೇಕೆ ಬೇಕಾದರೆ, ಇದು ದುರಿಚ್ಛ (ದುರಾಶೆ)ಯೇ. ಸಂಗೀತದ ಚಟ, ಟಿ.ವಿ. ಚಲನಚಿತ್ರಗಳು, ಎಕ್ಸ್‌ಡಬ್ಬಗಳು, ಆಟದ ಜಾಗಗಳು, ಇಂಟರ್‌ನೆಟ್, ಹರಟೆ ಕೊಠಡಿಗಳು ಇವು ನಮ್ಮ ಆಧುನಿಕ ಯುಗದ ಯೌವ್ವನಸ್ಥರ ದುರಾಶೆಗಳ ಭಾಗಗಳಾಗಿವೆ. ಇವುಗಳಿಂದ ಯಾವುದೇ ತಪ್ಪಿಲ್ಲ. ಆದರೆ ಅವುಗಳ ಚಟಕ್ಕೆ ಬಲಿಯಾದರೆ, ಆಗ ಯೌವ್ವನದ ದುರಾಶೆ ನಿಮ್ಮನ್ನು ಹಿಡಿದಿರುತ್ತದೆ. ಪ್ರತಿದಿನವು

ಒಂದು ಗಂಟೆ ಹರಟೆ ಕೊಠಡಿಗಳಲ್ಲಿ ಅಥವಾ ಇಂಟರ್‌ನೆಟ್‌ನಲ್ಲಿ ಕುಳಿತು ಕಳೆದರೆ ಮಾತ್ರ ನಮ್ಮ ದಿನ ಸಂಪೂರ್ಣವಾಗುತ್ತದೆಂದು ತಿಳಿದರೆ ಅದು ಯೌವ್ವನದ ಅತ್ಯಾಶೆಯಾಗಿದೆ. ಅವರು ಮಾಡುತ್ತಿರುವ ಕಾರ್ಯಗಳು ಸರಿಯೋ ಅಥವಾ ತಪ್ಪೋ ಎಂಬುದಾಗಿ ತಿಳಿಯದಿರುವ ಯೌವ್ವನಸ್ಥರಿಗೆ ಒಂದು ಎಚ್ಚರಿಕೆ ಮಾತಿದೆ. ''ಯಾವಾಗ ಸಂಶಯಾಸ್ಪದವಾಗಿದೆಯೋ ಅದನ್ನು ತೊರೆದು ಬಿಡಿರಿ'', ಯಾಕೆ ಅವಕಾಶ ಕಳೆದುಕೊಳ್ಳುತ್ತೀರಿ ? ಅಂತಹ ವಿಷಯಗಳನ್ನ ವ್ಯವಹರಿಸಲೇ ಬೇಡಿರಿ.. ಕೆಟ್ಟವುಗಳಿಂದ ದೂರ ಸರಿಯಿರಿ. ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ (1 ಥೆಸಲೋನಿಕದವರಿಗೆ 5:22).

## ದುರಿಚ್ಛೆಯ ಮೂಲದ ಕಾರ್ಯದ ಫಲಗಳು (ಪರಿಣಾಮಗಳು)

ನಮ್ಮ ಜೀವಿತಗಳಲ್ಲಿ ಅತ್ಯಾಶೆಯ ಮೂಲವಿದ್ದರೆ, ಇದರಿಂದ ಅನೇಕ ಪರಿಣಾಮಗಳಿವೆ ಅವುಗಳು ಕೆಳಕಂಡಂತಿವೆ.

### ದುರಿಚ್ಛೆಯು ವಾಕ್ಯವನ್ನು ಅಡಗಿಸಿಬಿಡುತ್ತದೆ

ದುರಾಶೆಯು ಮುಂದುವರೆಯಲು ಅವಕಾಶವಿತ್ತರೆ, ಅಥವಾ ಶರೀರಾದಾಶೆ, ಕಣ್ಣಿನಾಶೆಗಳಿದ್ದರೆ, ಜನರ ಜೀವಿತಗಳಲ್ಲಿ ದೇವರ ವಾಕ್ಯವು ಕಾರ್ಯ ಮಾಡುವುದನ್ನು ಇಲ್ಲದಂತೆ ಮಾಡುತ್ತದೆ. ಮಾರ್ಕ 4:19ರಲ್ಲಿ ಯೇಸುವು ''ಇನ್ನು ಕೆಲವರು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರೆ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿಬಿಡುವುದರಿಂದ. ಫಲವನ್ನು ಕೊಡದೆ ಇರುತ್ತಾರೆ'' ಎಂಬುದಾಗಿ ಹೇಳಿದ್ದಾನೆ. ನೀನು ಸಭೆಯಲ್ಲಿ ಕುಳಿತಿರಬಹುದು. ವಾಕ್ಯವನ್ನು ಕೇಳಬಹುದು. ಆದರೆ ಫಲ ಕೊಡದೆ ಒಂದು ಕಿವಿಯಲ್ಲಿ ಕೇಳಿ ಮತ್ತೊಂದು ಕಿವಿಯಲ್ಲಿ ಬಿಟ್ಟುಬಿಡುತ್ತೀ. ಪ್ರಪಂಚದಲ್ಲಿರುವ ಇತರ ವಸ್ತುಗಳಿಗೆ ಅತ್ಯಾಶೆ ಪಟ್ಟರೆ, ಪ್ರಪಂಚವು ವಾಕ್ಯವನ್ನು ಅಡಗಿಸುತ್ತದೆ. ಮತ್ತು ದೇವರ ವಾಕ್ಯದ ಕಾರ್ಯವು ನಿನ್ನಲ್ಲಿ ನಡೆಯದಂತೆ ಮಾಡುತ್ತದೆ.

### ದುರಿಚ್ಛೆಯು ಬಂಧನಗಳನ್ನು ತರುತ್ತದೆ

ನಾವು ಸ್ವತಂತ್ರವನ್ನು ಕಳೆದುಕೊಂಡು, ದುರಿಚ್ಛೆ (ದುರಾಶೆ) ಪಡುವ ವಸ್ತುಗಳಿಗೆ ಗುಲಾಮರಾಗಿದ್ದೇವೆ. ಪೌಲನು ರೋಮಾಪುರದವರಿಗೆ 6:12ರಲ್ಲಿ ಹೀಗೆ ಬರೆಯುತ್ತಾನೆ. ''ಹೀಗಿರುವದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ

ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ'' ನೀನು ಯಾವುದಕ್ಕೆ ವಿಧೇಯನಾಗುತ್ತೀಯೋ ಅದಕ್ಕೆ ದಾಸನಾಗುತ್ತಿ. ''ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತಿರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬುದು ನಿಮಗೆ ಗೊತ್ತಿಲ್ಲವೊ!? ಪಾಪಕ್ಕೆ ದಾಸರಾದರೆ ಮರಣವೇ ಫಲ, (ನಂಬಿಕೆಯೆಂಬ) ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ'' (ರೋಮಾಪುರದವರಿಗೆ 6:16).

## ದುರಿಚ್ಛೆಯು ನಮ್ಮ ಆತ್ಮ ಮತ್ತು ಶರೀರಗಳಿಗೆ ನಾಶನ ತರುತ್ತದೆ

ಶಾರೀರಿಕ ದುರಿಚ್ಛೆ (ದುರಾಶೆ)ಯು, ನಮ್ಮ ಆತ್ಮ, ಮನಸ್ಸು, ಚಿತ್ತ ಮತ್ತು ಭಾವನೆಗಳಿಗೆ ತದ್ವಿರುದ್ಧವಾಗಿ ಯುದ್ಧ ಮಾಡುತ್ತದೆ. ''ಪ್ರಿಯರೇ ಪ್ರವಾಸಿಗಳೂ ಪರದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು'' (1 ಪೇತ್ರನು 2:11). ನೀನು ಲೈಂಗಿಕ ವೈಪರೀತ್ಯಗಳಲ್ಲಿ ತೃಪ್ತಿಪಡುವವನಾಗಿ ''ನಾನು ಏಕಾಗ್ರತೆ ವಹಿಸಲು ಆಗುತ್ತಿಲ್ಲಾ'' ಎಂಬುದಾಗಿ ಹೇಳುತ್ತೀ. ಮತ್ತು ಯಾವುದಾದರೂ ಕಾರ್ಯಗಳನ್ನು ಮಾಡುತ್ತಿದ್ದರೆ ನಿನ್ನ ಮನಸ್ಸು ಎಡೆಬಿಡದೆ ಅಲೆದಾಡುತ್ತಿರುತ್ತದೆ. ಇದು ಶಾರೀರಿಕ ದುರಿಚ್ಛೆ ಇದು. ನಿನ್ನ ಜೀವಿತದಲ್ಲಿ ಮುಂದುವರೆಯಲು ಅವಕಾಶ ನೀಡಿದ್ದಕ್ಕೆ ಈ ಪರಿಣಾಮವನ್ನುಂಟು ಮಾಡುತ್ತಿದೆ ಎಂದು ತಿಳಿಯಬೇಕು. ಅತ್ಯಾಶೆಯು ನಮ್ಮ ಮನಸ್ಸು ಚಿತ್ತ ಮತ್ತು ಭಾವನೆಗಳಿಗೆ ವಿರುದ್ಧವಾಗಿ ಯುದ್ಧ ಮಾಡುತ್ತದೆ ಮತ್ತು ನಮ್ಮ ಆತ್ಮಗಳನ್ನು ಶಿಥಿಲಗೊಳಿಸುತ್ತದೆ. ನಮ್ಮ ಏಕಾಗ್ರತೆಯ ಸಾಮರ್ಥ್ಯವನ್ನು, ನಮ್ಮ ಸ್ಮರಣಾಯೋಗ್ಯತೆಗಳನ್ನು ದೇವರಿಂದ ಕೊಡಲ್ಪಟ್ಟ ಪ್ರಜ್ಞೆಯನ್ನು ಕುಂದಿಸುತ್ತದೆ. ಇದು ಶರೀರವನ್ನು ಸಹ ನಾಶಗೊಳಿಸುತ್ತದೆ ''ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ. ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿವೆ. ಆದರೆ ಜಾರತ್ವ ಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ''. (1 ಕೊರಿಂಥದವರಿಗೆ 6:18) ಜಾರತ್ವದಲ್ಲಿದ್ದರೆ ನೀನು ಪಾಪ ಮಾಡುವವನು ಮತ್ತು ನಿನ್ನ ದೇಹವನ್ನು ಕೆಡಿಸಿಕೊಳ್ಳುವವನು ಆಗಿರುತ್ತೀ.

## ದುರಿಚ್ಛೆಯ ಸಮಸ್ಯೆಯ ಆಳವಾದ ನೋಟ

ಈ ಅಧ್ಯಾಯದ ಪ್ರಾರಂಭದಲ್ಲಿ ಯಾವಾಗ ನಾವು ನಮ್ಮ ಸ್ವಂತ ಇಚ್ಛೆಗಳಿಂದ ಮತ್ತು ನಮ್ಮ ಸ್ವಂತ ದುರಾಶೆಗಳಿಂದ - ಸೆಳೆಯಲ್ಪಡುತ್ತೇವೋ ಆಗ ನಾವು ಶೋಧನೆಗೆ

ಒಳಗಾಗುತ್ತೇವೆ ಎಂಬುದಾಗಿ ನಾನು ಹೇಳಿದ್ದೆನು. ಆದರೆ ಕೆಲವು ಬಾರಿ ಇತರೆ ವಿವಿಧ ಕಾರಣಗಳಿಂದಾಗಿ, ಸಮಸ್ಯೆಗಳು ಹೊರನೋಟಕ್ಕಿಂತ, ಬಹಳ ಆಳವಾಗಿ ನೆಲೆಯೂರಿರುತ್ತವೆ.

## ಗಾಯಗೊಂಡ ಆತ್ಮ (ನೊಂದ ಮನಸ್ಸು)

ಗಾಯಗೊಂಡ ಆತ್ಮವು ಜನರನ್ನು ಅತಿರೇಕವಾದ ತೃಪ್ತಿಪಡಿಸುವಿಕೆಗೆ ಒಳಗಾಗುವಂತೆ ಒತ್ತಾಯಪಡಿಸುತ್ತದೆ. ಭಾವನೆಗಳಲ್ಲಿ ನೊಂದವರು ಅಥವಾ ಕಮರಿ ಹೋದ ವಿನಾಶಗೊಂಡ ಜನರು - ಅಂದರೆ ಪ್ರಿಯವಾದವರನ್ನು ಕಳೆದುಕೊಂಡವರು, ವಿವಾಹ - ವಿಚ್ಛೇದನ ದಾಟಿಹೋದವರು, ಹಣಕಾಸಿನ ತೊಂದರೆ ಅನುಭವಿಸಿದವರು. ದಿವಾಳಿತನ ಎದುರಿಸಿದವರು ಅಥವಾ ಅವರ ಜೀವಿತಗಳಲ್ಲಿ ಬಹಳ ಭಯಾನಕ ಘಟನೆಗಳು ಜರುಗಿದವರು-ಇಂತಹವರುಗಳು ಅತಿಯಾಗಿ ವ್ಯಸನಗಳಲ್ಲಿ ತೃಪ್ತಿಗೊಳ್ಳಲು ದೂಡಲ್ಪಡುತ್ತಾರೆ. ಅಂತಹ ಪರಿಸ್ಥಿತಿಗಳಲ್ಲಿ ನಾವು ಮೂಲ ಕಾರಣದೊಂದಿಗೆ ವ್ಯವಹರಿಸಬೇಕು ಮತ್ತು ಆ ವ್ಯಕ್ತಿಯು ಒಳಗಾಗಿರುವ ಗಾಯಕ್ಕೆ ಸ್ವಸ್ಥತೆಯನ್ನು ತರಬೇಕು. ಕೆಲಸ ಕಳೆದುಕೊಂಡಿರಬಹುದು ಅಥವಾ ಅತಿ ಪ್ರಿಯವಾದ ಸ್ನೇಹಿತ ಅವರನ್ನು ತ್ಯಜಿಸಿರಬಹುದು-ಅವರ ಹೆಂಡತಿ ತ್ಯಜಿಸಿರಬಹುದು ಅಥವಾ ಭಾವನೆಗಳಲ್ಲಿ ನೊಂದಿರಬಹುದು, ಆಗ ಜನರು ಕುಡಿತದ ಚಟಕ್ಕೆ ಬಲಿಯಾಗುತ್ತಾರೆ. ಅಲ್ಲದೇ ಈ ಕಾರಣಗಳು ಅವರನ್ನು - ಮದ್ಯಪಾನ, ಧೂಮಪಾನ ಅಥವಾ ಅನೈತಿಕತೆ ಮುಂತಾದ ಅತಿಯಾದ ತೃಪ್ತಿಗೊಳ್ಳುವಿಕೆಗೆ ನೂಕಿರಬಹುದು. ನಾವು ಇಂತಹ ತೊಂದರೆಗಳ ಮೂಲವನ್ನು ಮೊದಲು ಕಂಡುಹಿಡಿಯಬೇಕು. ''ಆತ್ಮವು ವ್ಯಾಧಿಯನ್ನು ಸಹಿಸಬಲ್ಲದು, ಆತ್ಮವೇ ನೊಂದರೆ ಸಹಿಸುವವರು ಯಾರು?'' (ಜ್ಞಾನೋಕ್ತಿ 18:14) ವ್ಯಾದಿಯು ಆತ್ಮವನ್ನು, ಅಂದರೆ ಗಾಯವಲ್ಲ ಆದರೆ ಬಹಳ ಆಳವಾಗಿ ಬೇರೂರಿರುವ ಒಂದು ವ್ಯಾಧಿ, ಇಂತಹ ವ್ಯಾದಿಯನ್ನು ಗುಣಪಡಿಸಬೇಕು.

## ಕೆಲವು ದುರಿಚ್ಛೆಗಳು ದೆವ್ವಗಳಿಂದ ಬಲಗೊಂಡಿರುತ್ತವೆ

ಪಾಪಭರಿತ ನಡವಳಿಕೆಗಳ ಕ್ರಮಗಳು ವಿವಿಧ ಬಗೆಯ ದೆವ್ವಗಳ ಆತ್ಮನಿಂದ ಬಲಗೊಂಡಿರುತ್ತೇವೆಂದು ಸತ್ಯವೇದವು ಪ್ರಕಟಪಡಿಸುತ್ತದೆ. ಕೆಲವು ದುರಿಚ್ಛೆಗಳು ದೆವ್ವಗಳಿಂದ ಚೈತನ್ಯಗೊಂಡಿರುತ್ತವೆ. ನಾವು ದೆವ್ವಗಳ ಕುರಿತು ಮಾತನಾಡುತ್ತಿರುವುದು ನಿಮಗೆ ಭಯಹುಟ್ಟಿಸವುದಕ್ಕಲ್ಲ ಆದರೆ ನಿಮ್ಮನ್ನು ಸಿದ್ಧಗೊಳಿಸಲು ನಿಮ್ಮ ಸ್ವಂತ ಇಚ್ಛೆಗಳೊಂದಿಗೆ, ನಿಮ್ಮ ಜೀವಿತಗಳಲ್ಲಿ ದೆವ್ವಗಳ ಬಲದಿಂದುಂಟಾದ ಬಲಿಷ್ಟ

ಬಂಧನಗಳ ಸ್ಥಿತಿಗೆ ನಿಮ್ಮ ವಿಷಯಗಳು ಬಂದಿರಬಹುದು. ಸತ್ಯವೇದವು ಅನೇಕ ರೀತಿಯ ದೆವ್ವಗಳ, ಆತ್ಮಗಳ ಬಗ್ಗೆ ತಿಳಿಸುತ್ತದೆ.

*ಕೆಲವು ಅಶುದ್ಧ ಆತ್ಮಗಳು ಅನೈತಿಕ ಜೀವನ ಶೈಲಿಯನ್ನು ಉತ್ಪತ್ತಿ ಮಾಡುತ್ತವೆ.*

**''ದೆವ್ವವು ಮನುಷ್ಯನನ್ನು ಬಿಟ್ಟು ಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ ತಿರುಗಾಡುತ್ತದೆ''** (ಮತ್ತಾಯ 12:43).

ಕೆಲವು ವಿಕೃತ ಆತ್ಮಗಳು ಸಹ, ಎಲ್ಲಾ ಬಗೆಯ ವ್ಯತಿರಿಕ್ತತೆಯನ್ನು ಉಂಟುಮಾಡುತ್ತದೆ. ಅಥವಾ ದೇವರು, ವಸ್ತುಗಳನ್ನು / ಜನರನ್ನು ತನ್ನ ಮಾರ್ಗದಂತೆ ನಡೆಯಲು ಸಂಕಲ್ಪಿಸಿದ್ದನ್ನು ಉಲ್ಲಂಘನೆ ಮಾಡಿಸುವ ಕಾರ್ಯಮಾಡುತ್ತವೆ.

**''ಯೆಹೋವನು ಅದರ ಅಂತರಾತ್ಮದಲ್ಲಿ ವಕ್ರಬುದ್ಧಿಯನ್ನು ಕಲ್ಪಿಸಿದ್ದಾನೆ. ಅಮಲೇರಿದವನು ಕಕ್ಕುತ್ತಾ ಓಲಾಡುವ ಪ್ರಕಾರ ಐಗುಪ್ತವು ತನ್ನ ಒಂದೊಂದು ಕೆಲಸದಲ್ಲಿಯೂ ಓಲಾಡುವಂತೆ ಮಾಡಿದ್ದಾನೆ''**. (ಯೆಶಾಯ 19:14)

ಈ ವಚನಭಾಗದಲ್ಲಿ ದೇವರೇ ವಕ್ರ ಆತ್ಮವನ್ನು ಕಳುಹಿಸಿದ್ದಾನೆ ಎಂಬುದಾಗಿ ಕಂಡುಬರುತ್ತದೆ. ಹಾಗಿದ್ದಾಗ್ಯೂ, ಪೂರ್ಣವಚನ ಭಾಗವನ್ನು ನೋಡಿದ ಮೇಲೆ, ದೇವರಿಗೆ ತನ್ನ ಚಿತ್ತವನ್ನು ಭೂಮಿಯ ಮೇಲೆ ನೆರವೇರಿಸಲು ವಕ್ರ ಆತ್ಮನ ಸಹಾಯ ಬೇಡವೆಂದು ನಮಗೆ ಗೊತ್ತಾಗುತ್ತದೆ. ಈ ವಚನಗಳಿಗಿರುವ ಸರಿಯಾದ ಅರ್ಥವಿವರಣೆಯೆಂದರೆ ದೇವರು ಪಾಪ ಮಾಡುತ್ತಾ ಮುಂದುವರಿಯುತ್ತಿರುವ ಜನರನ್ನು ನೋಡಿ (ಈ ಸಂದರ್ಭದಲ್ಲಿ ಐಗುಪ್ತ) ಅವರಿಗೆ ತನ್ನ ದೈವಿಕ ಸಂರಕ್ಷಣೆಯನ್ನು ನಿಲ್ಲಿಸಿದನು. ಇದು ಅವರು ವಕ್ರ ಆತ್ಮವನ್ನು ಹೊಂದುವಂತೆಯೂ ಜನರು ಪಾಪಗಳಿಂದ ಆಕರ್ಷಣೆ ಹೊಂದುವಂತೆಯೂ, ಅವುಗಳು ಅವರ ಜೀವಿತಗಳಿಗೆ ಪ್ರವೇಶಿಸಿ ಅವರನ್ನು ಬಂಧನದಲ್ಲಿಡುವಂತೆಯೂ ಮಾಡಿತು.

*ಇದಲ್ಲದೆ ಕೆಲವು ಹಾದರದ ಆತ್ಮಗಳು ಇವೆ.*

**''ನನ್ನ ಜನರು ತಮ್ಮ ಮರದ ತುಂಡನ್ನು ಪ್ರಶ್ನೆ ಕೇಳುತ್ತಾರೆ, ಅವರ ಕೋಲು ಅವರಿಗೆ ಅರುಹನ್ನು ಉಂಟುಮಾಡುತ್ತದೆ. ವ್ಯಭಿಚಾರ ಗುಣವು ಅವರನ್ನು ಭ್ರಾಂತಿಗೊಳಿಸಿದೆ, ತಮ್ಮ ದೇವರಿಗೆ ಪತಿಭಕ್ತಿಯನ್ನು ಸಲ್ಲಿಸದೆ ದ್ರೋಹಿಗಳಾಗಿದ್ದಾರೆ''** (ಹೋಶೇಯೆ 4:12).

**''ಅವು ತಮ್ಮ ದೇವರ ಕಡೆಗೆ ತಿರುಗಿಕೊಳ್ಳಲು ಅವುಗಳ ದುಷ್ಕೃತ್ಯಗಳು ಬಿಡವು ವ್ಯಭಿಚಾರ ಸ್ವಭಾವವು ಅವುಗಳಲ್ಲಿ ನೆಲೆಗೊಂಡಿದೆ, ಯೆಹೋವನನ್ನು ಅರಿಯವು''** (ಹೋಶೇಯ 5:4)

ಹಾದರದ ಆತ್ಮ ಅಥವಾ ವೇಶ್ಯಾವೃತ್ತಿಯ ಆತ್ಮವು, ಜನರು ದೇವರನ್ನು ಅರಿಯದೇ ಇತರ ವಿಷಯಗಳನ್ನು ಪಾಲಿಸುವಂತೆ ಮಾಡುತ್ತದೆ. ಮತ್ತು ಅವರನ್ನು ಆತ್ಮಿಕ ವ್ಯಭಿಚಾರ ಮಾಡುವಂತೆ ಕಾರ್ಯ ಎಸಗುತ್ತದೆ. *ಅಲ್ಲದೇ ಬಂಧಿಸುವ ಆತ್ಮಗಳು ಸಹ ಇವೆ. ಇವು ಪಾಪದ ಬಂಧನ, ನಿರ್ಬಂಧಪಟ್ಟ ಹವ್ಯಾಸಗಳು ಮತ್ತು ಚಟಗಳನ್ನು ಉತ್ಪತ್ತಿಮಾಡುತ್ತವೆ.*

**''ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ ಎಂದು ಕೂಗುತ್ತೇವೆ''.** (ರೋಮಾಪುರ 8:15).

*ಅವಿಧೇಯತೆಯ ಆತ್ಮಗಳು ಸಹ ಇರುವುವು. ಇವು ಅವಿಧೇಯತೆ ಮತ್ತು ಸತ್ಯಕ್ಕೆ ವಿರುದ್ಧವಾದ ಬಂಡಾಯಕ್ಕೆ ಕಾರಣಗಳಾಗಿ ಪರಿಣಮಿಸುತ್ತವೆ*

**''ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ. ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ''.** (ಎಫೆಸದವರಿಗೆ 2:2).

*ಇಹಲೋಕದ ಆತ್ಮಗಳು ಸಹ ಇವೆ., ಅವು ಪ್ರಾಪಂಚಿಕತೆಯ ಮಾದರಿಯನ್ನು ತರುತ್ತವೆ*

**''ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾ ವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು''.** (1 ಕೊರಿಂಥದವರಿಗೆ 2:12).

*ವಂಚಿಸುವ ಆತ್ಮಗಳು ಸಹ ಇವೆ. ಇವು ಜನರನ್ನು ಲೋಕದ ಎಲ್ಲಾ ವಿಷಯಗಳೊಳಗೆ ಸಿಕ್ಕಿಸುತ್ತವೆ ಮತ್ತು ಮೋಹಗೊಳಿಸುತ್ತವೆ.*

**''ಆದರೂ ಮುಂದಣ ದಿನಗಳಲ್ಲಿ ಕೆಲವು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ''.** (1 ತಿಮೊಥೆಯನಿಗೆ 4:1).

**‘‘ಆದರೆ ದುಷ್ಟರೂ ವಂಚಕರೂ ಇತರರನ್ನು ಮೋಸಮಾಡುತ್ತಾ ತಾವೇ ಮೋಸ ಹೋಗುತ್ತಾ ಹೆಚ್ಚಾದ ಕೆಟ್ಟತನಕ್ಕೆ ಹೋಗುವರು’’** (2 ತಿಮೊಥೆಯನಿಗೆ 3:13).

ಹೀಗೆ ನಮ್ಮ ಸುತ್ತಲಿರುವ ಪ್ರಪಂಚದ ವಿವಿಧ ಬಗೆಯ ದೆವ್ವದ ಆತ್ಮಗಳು ಕ್ರಿಯೆ ಮಾಡುತ್ತಿರುತ್ತವೆ. ವಿಶ್ವಾಸಿಗಳು ತಮ್ಮ ಜೀವಿತಗಳಿಗೆ ಇಂತಹ ದೆವ್ವಗಳ ಕಾರ್ಯಗಳಿಗೆ ಅವಕಾಶ ಮಾಡಿಕೊಡುತ್ತಿರುವುದು ಬಹಳ ದುಃಖಕರ ಸಂಗತಿಯಾಗಿದೆ.

## ಒಬ್ಬ ವಿಶ್ವಾಸಿಯು ಸಹ ಕೋಟೆ ಕೊತ್ತಲಗಳ ಹಿಡಿತಗಳನ್ನು ಹೊಂದಿರಬಹುದು

ಹೊಸದಾಗಿ ಹುಟ್ಟಿದ ಅನ್ಯಭಾಷೆ ಮಾತಾಡುವ, ಸಭೆಗಳಿಗೆ ತಪ್ಪದೆ ಹೋಗುವ ವಿಶ್ವಾಸಿಗಳ ಜೀವಿತಗಳಲ್ಲಿ, ಅವರ ಆತ್ಮಗಳು, ದೆವ್ವಗಳ ಆತ್ಮಗಳಿಂದ ಆವರಿಸಿ ಅವುಗಳ ನಿಯಂತ್ರಕ್ಕೊಳಗಾದ ಕೊತ್ತಲ ಕೋಟೆಗಳ ಹಿಡಿತಗಳಿರಬಹುದು. ಅಂದರೆ ಕೊತ್ತಲ ದೆವ್ವಗಳ ಕಾರ್ಯಗಳಿಂದ ಅವೃತವಾಗಿರಬಹುದು. ಪೌಲನು ಕೋಟೆ ಕೊತ್ತಲಗಳ ಬಗ್ಗೆ ಮಾತನಾಡುತ್ತಾನೆ. ‘‘ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿಹಾಕಿ ಎಲ್ಲಾ ಯೋಜನೆಗಳನ್ನು ಕ್ರಿಸ್ತನಿಗೆ ವಿಧೇಯನಾಗುವಂತೆ ಸೆರೆಹಿಡಿದು ನಿಮ್ಮ ವಿಧೇಯತ್ವವು ಪರಿಪೂರ್ಣವಾದ ಮೇಲೆ ಎಲ್ಲಾ ಅವಿಧೇಯತ್ವಕ್ಕೆ ಶಿಕ್ಷೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ’’. (2 ಕೊರಿಂಥದವರಿಗೆ 10:4-6).

ದುರಾಚಾರಿಯ ಮನಸ್ಸು ಸೈತಾನನ ಹಿಡಿತದೊಳಗಿರುತ್ತದೆ. ಆ ಮನಸ್ಸು, ಕೆಟ್ಟದ್ದನ್ನು ಒಳ್ಳೆಯದೆಂದು ಮತ್ತು ಒಳ್ಳೆಯದನ್ನು ಕೆಟ್ಟದ್ದೆಂದು ಪರಿಗಣಿಸುವಂತಹದ್ದಾಗಿರುತ್ತದೆ. ಈ ರೀತಿಯಾಗಿ ಪ್ರಾಪಂಚಿಕತೆಗೆ ಮನಸ್ಸುಕೊಟ್ಟರೆ ವಿಶ್ವಾಸಿಗಳ ಜೀವಿತಗಳಲ್ಲಿ ಬೆಳಕನ್ನು ತರದೇ ಕತ್ತಲೆಯಲ್ಲಿ ಇರುವವರಾಗಿರುತ್ತೇವೆ. ಸೈತಾನನು ಸುಭದ್ರಸ್ಥಾನ ಪಡೆದುಕೊಳ್ಳುತ್ತಾನೆ. ಮತ್ತು ನಮ್ಮ ಆಲೋಚನೆಗಳ ಜೀವಿತಗಳಿಗೆ ಇಂತಹ ಕ್ಷೇತ್ರಗಳಲ್ಲಿ ದೇವರ ವಾಕ್ಯದ ಸತ್ಯಕ್ಕೆ ನಮ್ಮನ್ನು ಸಮರ್ಪಿಸುವ ಬದಲು ಸುಳ್ಳಿನಿಂದ ಆವರಿಸಿಕೊಂಡಿರುತ್ತೇವೆ. ಮತ್ತು ಸೈತಾನನು ನಮ್ಮನ್ನು ಅಂತಹ ಕ್ಷೇತ್ರಗಳಲ್ಲಿ ಮುಳುಗಿಸಿರುತ್ತಾನೆ. ಕೆಲವು ಸಮಯದ ಹಿಂದೆ ಡ್ರಗ್ಸ್ (ಮದ್ದು) ಮಾದಕದ್ರವ್ಯ ಚಟಕ್ಕೆ ಬಲಿಯಾದವನೊಂದಿಗೆ ನಾನು ಮಾತನಾಡುತ್ತಿದ್ದೆ. ಅವನನ್ನು

''ಏಕೆ ನೀನು ಇದನ್ನು ಮಾಡುತ್ತೀ''? ಎಂಬುದಾಗಿ ಕೇಳಿದೆ. ಅದಕ್ಕೆ ಅವನು ''ನಾನು ಯಾವುದೇ ರೀತಿಯ ತಪ್ಪು ಮಾಡುತ್ತಿಲ್ಲಾ, ನಾನು ನಿಮಗೆ ನೋವುಂಟು ಮಾಡುತ್ತಿಲ್ಲಾ, ಆದ್ದರಿಂದ ಏಕೆ ನೀವು ತಪ್ಪು ಎಂಬುದಾಗಿ ಹೇಳುತ್ತೀರಿ? ಎಂದನು. ಇದೊಂದು ತಾರ್ಕಿಕ ಆಲೋಚನೆ, ಆದರೆ ಹಾಗಿದ್ದರೂ ಇದು ಕೋಟೆ ಕೊತ್ತಲೆಯ ಹಿಡಿತವೇ ''ನಾನು ಎಷ್ಟರವರೆಗೆ ಯಾರಿಗೂ ನೋವುಂಟು ಮಾಡುವುದಿಲ್ಲವೋ, ಅಲ್ಲಿಯವರೆಗೆ ಡ್ರಗ್ಸ್ (ಮದ್ದು) ತೆಗೆದುಕೊಳ್ಳುವುದು ನನಗೆ ಒಳ್ಳೆಯದು'' ಎಂಬುದಾಗಿ ಅವನು ಆಲೋಚಿಸುತ್ತಾನೆ.

ಅಂತಹ ಹಿಡಿತಗಳಾವುವು? ಹಿಡಿತಗಳು, ಪಾಪಗಳಿಗೆ ಸೌಮ್ಯವಾಗಿರುವಂತೆ ನಮ್ಮ ಮನಸ್ಸುಗಳ ಆಲೋಚನೆಯ ಮಾದರಿಯನ್ನು ಹಿಡಿದಿರುತ್ತದೆ. ಅಂದರೆ ನಾವು ಇದರೊಂದಿಗೆ ರಾಜಿಯಾಗಿರುತ್ತೇವೆ ಮತ್ತು ಸುಳ್ಳಿನಿಂದ, ಸತ್ಯವನ್ನು ತಿರಸ್ಕರಿಸಿರುತ್ತೇವೆ. ಹೀಗೆ ಸೈತಾನನ ಪ್ರಭಾವಗಳಿಗೆ ಸ್ಥಳ ಕೊಟ್ಟಿರುತ್ತೇವೆ ಮತ್ತು ಇದು ನಮ್ಮ ಮನಸ್ಸುಗಳಲ್ಲಿ ಇರುವವರೆಗೂ ಇದು ಆಗಬಹುದು ''ಎಂದು'' ನೀನು ಆಲೋಚಿಸಬಹುದು. ಆದ್ದರಿಂದ ಇಡೀ ವಾರದಲ್ಲಿ ತಪ್ಪುಗಳನ್ನು ಮಾಡುವುದು ಮತ್ತು ಭಾನುವಾರದ ಬೆಳಗ್ಗಿನ ಆರಾಧನೆಯಲ್ಲಿ ''ಹಲ್ಲೆಲೂಯ'' ಎಂಬುದಾಗಿ ಹಾಡುವುದು ಇದರಲ್ಲಿ ತಪ್ಪಿಲ್ಲ ಎಂದು ಯೋಚಿಸುತ್ತೀರಿ. ಇದು ಹಿಡಿತವಾಗಿದೆ ಅಥವಾ ಹಿಡಿಯಲ್ಪಟ್ಟಿರುವುದಾಗಿದೆ, ಇಂತಹ ಆಲೋಚನೆಯ ಮಾದರಿಯು, ಇದು ಆಗಬಹುದು ಎಂದು ಯೋಚಿಸುವಂತೆ ಮಾಡುತ್ತದೆ ಮತ್ತು ಪಾಪಕ್ಕೆ ಸೌಮ್ಯವಾಗಿರುವಂತೆ ಮಾಡುತ್ತದೆ. ನಾವು ಸೈತಾನನ ಪ್ರಭಾವಗಳಿಗೆ ನಮ್ಮ ಜೀವಿತಗಳಲ್ಲಿ ಸ್ಥಳ ಕೊಡುತ್ತೇವೆ. ಇಂತಹ ಹಿಡಿತಗಳ ಮೂಲಕ ನಮ್ಮಲ್ಲಿ ಪಾಪಭರಿತ ಕಾರ್ಯಗಳು ಸುರಕ್ಷಿತವಾಗಿರುತ್ತವೆ. ಯಾಕೆಂದರೆ ನಮ್ಮ ಮನಸ್ಸುಗಳಲ್ಲಿ ಅಂತಹ ಆಲೋಚನಾ ಮಾದರಿಯನ್ನು ನಾವು ಅಡಕಮಾಡಿಕೊಂಡಿರುತ್ತೇವೆ. ಕ್ರೈಸ್ತರು ದೆವ್ವಗಳಿಂದ ಹಿಡಿಯಲ್ಪಟ್ಟಿರುವುದಿಲ್ಲ. ಯಾಕೆಂದರೆ ನಮ್ಮ ಆತ್ಮಗಳಲ್ಲಿ ಪವಿತ್ರಾತ್ಮನು ಆಗಲೇ ವಾಸಮಾಡುತ್ತಿರುವುದರಿಂದ ದೆವ್ವ ಬರಲು ಸಾಧ್ಯವಿಲ್ಲ. ಹೀಗಿದ್ದರೂ, ಕ್ರೈಸ್ತರು ಸಹ ಬಂಧನಗಳಲ್ಲಿರಬಹುದು. ಪೀಡಿಸಲ್ಪಡುತ್ತಿರಬಹುದು. ಕಿರುಕುಳ ಹೊಂದುತ್ತಿರಬಹುದು. ಇವೆಲ್ಲವು ಅವರ ಸ್ಥಿರವಾದ ತಪ್ಪು ಆಲೋಚನೆ ಮತ್ತು ನಡವಳಿಕೆಗಳಿಂದ ಪ್ರವೇಶ ಪಡೆದಿರುತ್ತವೆ. ಉದಾಹರಣೆಗೆ, ನೀವು ಸಾಂದರ್ಭಿಕವಾಗಿ ತಿಂಗಳಿಗೆ ಒಂದು ಭಾರಿ ಅಶ್ಲೀಲತೆ ವಿಷಯಗಳಲ್ಲಿ ಸುಸಂಗತವಾದ ರೀತಿಯಲ್ಲಿ

ಆಶೆತಣಿಸಿಕೊಳ್ಳುತ್ತಿದ್ದರೆ ಅದು ವಾರದ ಹವ್ಯಾಸವಾಗಿ ರೂಢಿಯಾಗಿ ಬಿಡುತ್ತದೆ. ಅದಿಲ್ಲದೇ ನೀವು ಏನನ್ನೂ ಮಾಡಲಾಗುವುದಿಲ್ಲವೆಂದು ಗುರ್ತಿಸಿಕೊಳ್ಳುವಿ. ಏನು ಸಂಭವಿಸಿತು? ನಿಮ್ಮ ಜೀವಿತಗಳಲ್ಲಿ ನಿಯಂತ್ರಿಸಲಾಗದ ಅನೈತಿಕ ನಡವಳಿಕೆಗಳಿಗೆ ಕಾರಣವಾದ ಅಶುದ್ಧ ಆತ್ಮದಿಂದ ನಿಮ್ಮ ಆತ್ಮವು ಸ್ವಾಧೀನಗೊಳಿಸಲ್ಪಟ್ಟಿತು. ಹೀಗಾಗಿ ಅದು ಈಗ ಸಾಂದರ್ಭಿಕ ಹವ್ಯಾಸವಾಗಿರುವುದಿಲ್ಲ. ಇದು ಬಂಧನ ಮತ್ತು ಹಿಡಿತವಾಗಿರುತ್ತದೆ. ಚಟವಾದ ಪಾಪದ ಕ್ಷೇತ್ರ, ನಿಯಂತ್ರಿಸಲಾಗದ ದುರಿಚ್ಛೆ (ದುರಾಶೆ), ನಿರ್ಬಂಧಪಡಿಸುವ ನಡವಳಿಕೆಗಳು ದೆವ್ವಗಳಿಂದ ಬಲಿಷ್ಟಗೊಂಡಿರುತ್ತವೆ. ಪಾಪಯುತ ಸ್ವಭಾವಗಳು ದೆವ್ವದ ಆತ್ಮನು ನೆಲಸಿರುವ ಮತ್ತು ಅದಕ್ಕೆ ಅನುಗುಣವಾಗಿರುವ ಸ್ಥಳವಾಗುತ್ತದೆ. ಮತ್ತು ಸೈತಾನನು ವಿಶ್ವಾಸಿಗಳ ಜೀವಿತಗಳನ್ನು ಹಿಡಿತದಲ್ಲಿಡುತ್ತಾನೆ ಮತ್ತು ಆ ವ್ಯಕ್ತಿಯನ್ನು ಬಂಧನದಲ್ಲಿರಿಸುತ್ತಾನೆ.

ಇದನ್ನು ಹೇಳುವ ಮೂಲಕ ನಾವು ನಮ್ಮನ್ನೇ ಮನ್ನಿಸಲು ಪ್ರಯತ್ನ ಮಾಡಬಾರದು ಮತ್ತು ಎಲ್ಲಾ ಬಗೆಯ ಪಾಪಯುತ ನಡವಳಿಕೆಗಳಿಗೆ ದೆವ್ವವೇ ಕಾರಣವೆಂದು ದೂರಬಾರದು ''ದೆವ್ವವು ನನ್ನನ್ನು ಈ ರೀತಿ ಮಾಡಿಸುತ್ತದೆ'' ಎಂಬುದಾಗಿ ಹೇಳಬೇಡಿರಿ, ನೀನು ವೈರಿಗೆ ಮನಸ್ಸು ತೆರೆದು ಅವಕಾಶಕೊಟ್ಟು ನಿನ್ನೊಳಗೆ ಪ್ರವೇಶಿಸುವಂತೆ ಮಾಡಿದ್ದೀ. ನೀನೇ ಇದಕ್ಕೆ ಹೊಣೆಗಾರನು ಆದುದರಿಂದ ಇದಕ್ಕಾಗಿ ದೆವ್ವವನ್ನು ದೋಷಿ ಎಂಬುದಾಗಿ ಹೇಳಬೇಡ. ನಾವು ಅನೈತಿಕ ಜೀವನ ಶೈಲಿಯ ತೀವ್ರತೆಯನ್ನು ಅರ್ಥಮಾಡಿಕೊಳ್ಳಬೇಕು. ಯಾವಾಗ ಒಬ್ಬ ವ್ಯಕ್ತಿಯು ಅನೈತಿಕ ನಡವಳಿಕೆಗಳಲ್ಲಿ ಮುಂದುವರೆಯುತ್ತಾನೋ, ಆಗ ಅವನು ವೈರಿಗೆ ಆಹ್ವಾನವನ್ನು ಕೊಟ್ಟು ವೈರಿಯು ತನ್ನ ಮನಸ್ಸಿನಲ್ಲಿ, ಒಲವುಗಳಲ್ಲಿ ಮತ್ತು ಶರೀರದಲ್ಲಿ ಆಕ್ರಮಿಸಿಕೊಳ್ಳಲು ಅವಕಾಶ ಕೊಡುತ್ತಾನೆ. ಆದುದರಿಂದ ನಮ್ಮ ಜೀವಿತಗಳಿಗೆ ವೈರಿಗೆ ಆಹ್ವಾನ ಕೊಡದೇ ನಮ್ಮನ್ನು ನಾವೇ ಕಾಪಾಡಿಕೊಳ್ಳಬೇಕು.

> ಹಿಡಿತಗಳು ನಮ್ಮ ಮನಸ್ಸುಗಳಲ್ಲಿ ನಾವು ಪಾಪಗಳಿಗೆ ಸೌಮ್ಯವಾಗಿರುವಂತೆ ಮಾಡುವ ಆಲೋಚನಾ ಮಾದರಿಯಾಗಿದೆ, ನಾವು ಸಂಧಾನ ಮಾಡಿಕೊಂಡಿರುತ್ತೇವೆ ಮತ್ತು ಸುಳ್ಳಿನಿಂದ ಸತ್ಯವನ್ನು ತಿರಸ್ಕರಿಸಿರುತ್ತೇವೆ, ಹೀಗೆ ಸೈತಾನನ ಪ್ರಭಾವಗಳಿಗೆ ಸ್ಥಳ ನೀಡಿರುತ್ತೇವೆ. ಮತ್ತು ನಮ್ಮ ಮನಸ್ಸುಗಳಲ್ಲಿ ಸೈತಾನನಿಗೆ ರಕ್ಷೆ ನೀಡಿರುತ್ತೇವೆ.

## ದುರಿಚ್ಛೆಯ ಬಲವನ್ನು ನಾವು ಹೇಗೆ ಮುರಿಯುವುದು?

### ಸತ್ಯವನ್ನು ಸ್ವೀಕರಿಸುವುದು

''ಹೌದು, ನಾನು ಸತ್ಯವನ್ನು ಅಂಗೀಕರಿಸುತ್ತೇನೆ.'' ಎಂಬುದಾಗಿ ಹೇಳಿರಿ,- ಸತ್ಯ ಅಂದರೇನು?

**''ಒಬ್ಬನು ಕಟ್ಟಿದ್ದುಸುಟ್ಟು ಹೋದರೆ ಅವನಿಗೆ ಸಂಬಳವು ನಷ್ಟವಾಗುವುದು, ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು. ನೀವು ದೇವರ ಆಲಯವಾಗಿದ್ದೀರೆಂದೂ ದೇವರ.. ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ''** (1 ಕೊರಿಂಥದವರಿಗೆ 3:15, 16.)

ಶರೀರವು ಪರಿಶುದ್ಧವಾಗಿರಬೇಕು. ಶರೀರಾದಾಶೆ, ಕಣ್ಣಿನಾಶೆಗಳಿಂದ ಸ್ವತಂತ್ರವಾಗಿರಬೇಕು. ನಮ್ಮ ದೇಹಗಳು ಮತ್ತು ಮನಸ್ಸುಗಳಲ್ಲಿ ಯಾವುದೇ ಬಗೆಯ ಅನೈತಿಕತೆ ಅಥವಾ ಅಶುದ್ಧತ್ವವಿರಬಾರದು. ನಮ್ಮ ಶರೀರಗಳು ಲೈಂಗಿಕ ಅನೈತಿಕತೆಗಾಗಿ ರಚಿಸಲ್ಪಟ್ಟಿಲ್ಲ.

**''ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ, ದೇವರು ಇದನ್ನೂ ಅವುಗಳನ್ನೂ ಕೂಡ ತೆಗೆದು ಹಾಕುವನು. ಆದರೂ ದೇಹವು ಹಾದರಕ್ಕೋಸ್ಕರ ಇರುವಂಥದಲ್ಲ ಕರ್ತನಿಗೋಸ್ಕರವಾಗಿದೆ ಕರ್ತನು ದೇಹಕ್ಕೋಸ್ಕರ ಇದ್ದಾನೆ. ದೇವರು ಕರ್ತನನ್ನು ಎಬ್ಬಿಸಿದ್ದಲ್ಲದೆ ನಮ್ಮನ್ನೂ ತನ್ನ ಪರಾಕ್ರಮದಿಂದ ಎಬ್ಬಿಸುವನು. ನಿಮ್ಮ ದೇಹಗಳು ಕ್ರಿಸ್ತನ ಅಂಗಗಳಾಗಿವೆ ಎಂಬುದು ನಿಮಗೆ ತಿಳಿಯದೋ? ಹೀಗಿರಲಾಗಿ ಕ್ರಿಸ್ತನ ಅಂಗಗಳಾಗಿರುವಂಥವುಗಳನ್ನು ತೆಗೆದುಬಿಟ್ಟು ಸೂಳೆಯ ಅಂಗಗಳಾಗಿಮಾಡಬಹುದೋ? ಎಂದಿಗೂ ಮಾಡಬಾರದು. ಸೂಳೆಯ ಸಂಸರ್ಗ ಮಾಡುವವನು ಅವಳೊಂದಿಗೆ ಒಂದೇ ದೇಹವಾಗಿದ್ದಾರೆಂಬುದು ನಿಮಗೆ ತಿಳಿಯದೋ? ಗಂಡ ಹೆಂಡರಿಬ್ಬರು ಒಂದೇ ದೇಹವಾಗಿದ್ದಾನೆಂಬುದು ನಿಮಗೆ ತಿಳಿಯದೋ? ಗಂಡ ಹೆಂಡರಿಬ್ಬರು ಒಂದೇ ಶರೀರವಾಗಿರುವರೆಂದು ದೇವರು ಹೇಳುತ್ತಾನಲ್ಲಾ. ಕರ್ತನ ಸಂಸರ್ಗದಲ್ಲಿರುವವನಾದರೂ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ. ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ. ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿವೆ. ಆದರೆ ಜಾರತ್ವ ಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ. ''** (1ಕೊರಿಂಥದವರಿಗೆ 6:13-20)

ನಾವು ಪರಿಶುದ್ಧರಾಗಿರಬೇಕೆಂಬದು ದೇವರ ಚಿತ್ತವಾಗಿದೆ.

**''ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬುದೇ ಆದದರಿಂದ ಹಾದರಕ್ಕೆ ದೂರವಾಗಿರಬೇಕು. ದೇವರನ್ನರಿಯದ ಅನ್ಯಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು''** (1ಥೆಸಲೋನಿಕದವರಿಗೆ 4:3-5)

## ನಾವು ಪಾಪಗಳ ಅರಿಕೆ ಮಾಡಬೇಕು ಪಶ್ಚಾತ್ತಾಪಪಡಬೇಕು ಮತ್ತು ಬಿಟ್ಟುಬಿಡಬೇಕು

ನಾವು ಸೈತಾನನ ಕಾರ್ಯಗಳಿಗೆ ಅವಕಾಶ ಮಾಡಿಕೊಟ್ಟ ವಿಷಯಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು ಸಭೆಗಳಲ್ಲಿ ಪಶ್ಚಾತ್ತಾಪಪಡುವುದು ಕಣ್ಣೀರು ಸುರಿಸುವುದು, ಅವುಗಳನ್ನು ದೂರ ತೊಡೆದು ಹಾಕುವುದು ಮತ್ತು ಹೊರಗೆ ನಡೆಯುವುದು ಸುಲಭ ಆದರೆ ಅಂತಹ ಸಂಗತಿಗಳು ತಿರುಗಿ ಜರುಗದಂತೆ ಆವುಗಳಿಂದ ಸ್ವತಂತ್ರವಾಗಿರುವುದು ಅವಶ್ಯಕ ಆದರೆ ಸ್ವತಂತ್ರವಾಗುವ ಬದಲು ಹಿಂತಿರುಗಿ ನೋಡಿ ಅವುಗಳಲ್ಲೇ ಮುಂದುವರೆದರೆ ಪಶ್ಚಾತ್ತಾಪವು ಉಪಯೋಗಕ್ಕೆ ಬರುವುದಿಲ್ಲ.

## ಶರೀರಕ್ಕೆ ಪೂರ್ವಸಿದ್ಧತೆ ಮಾಡದಿರು

**''ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ''** (ರೋಮಾಪುರದವರಿಗೆ 13:14)

ಒಂದು ಸಾರಿ ಪಶ್ಚಾತ್ತಾಪಪಟ್ಟಮೇಲೆ, ಎಲ್ಲಾ ದುಷ್ಟ ಮಾರ್ಗಗಳು ಮುಚ್ಚಲ್ಪಡಬೇಕು. ನಿಮ್ಮ ಜೀವಿತಗಳಲ್ಲಿ ಸೈತಾನನಿಗೆ ಯಾವುದೇ ರೀತಿಯಲ್ಲೂ ಅವಕಾಶಕೊಡಬೇಡಿರಿ. ಬೆಳಗ್ಗಿನ ವರ್ತಮಾನ ಪತ್ರಿಕೆಯು ನಿಮ್ಮಲ್ಲಿ ಅಶ್ಲೀಲತೆಯ ಪರಿಣಾಮ ಉಂಟುಮಾಡುತ್ತಿದ್ದರೆ. ಆ ವರ್ತಮಾನ ಪತ್ರಿಕೆಯ ಚಂದಾದಾರನಾಗಿರುವುದನ್ನು ನಿಲ್ಲಿಸಿಬಿಡಿರಿ. ''ಆದರೆ ನಾನು ಸುದ್ದಿ ಸಮಾಚಾರಗಳನ್ನು ಓದಬೇಕು ಪ್ರಪಂಚದಲ್ಲಿ ಏನು ನಡೆಯುತ್ತದೆಂದು ತಿಳಿಯಬೇಕು'' ಎಂಬುದಾಗಿ ನೀವು ಹೇಳಬಹುದು. ಪ್ರಪಂಚದ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಕಲುಷಿತರಾಗಿ ಸ್ವರ್ಗವನ್ನು ಪಡೆಯುವ ಬದಲು ನರಕದಲ್ಲಿರುವುದು ನಿಮಗೆ ಉತ್ತಮವಾದದ್ದೋ ಎಂಬುದನ್ನು ಆಲೋಚಿಸಿರಿ. ನಿಮ್ಮ ಕೇಬಲ್ ಟಿ.ವಿ. ನಿಮ್ಮನ್ನು ತಾಸುಗಳವರೆಗೆ ಹಾಸಿಗೆ ಮೇಲೆ ಮಲಗುವಂತೆ ಮಾಡುತ್ತದೋ, ಅದಕ್ಕೆ ನಿಮ್ಮ ಚಂದಾವನ್ನು ನಿಲ್ಲಿಸಿರಿ. ನೀವು ಸುದ್ದಿ ಅಥವಾ ವಾರ್ತೆಗಳನ್ನು ನೋಡಬೇಕು ಎಂಬುದಾಗಿ ಹೇಳಬಹುದು. ಆದರೆ ನೀವು ಎಲ್ಲವನ್ನು ನೋಡುವುದರಲ್ಲಿ ಕೊನೆಗೊಳ್ಳುವಿರಿ. ಕೇಬಲ್ ಟಿ.ವಿ. ಚಂದಾ ಇಲ್ಲದೆ ಸ್ವರ್ಗ ಹೊಂದಿಕೊಳ್ಳುವುದು ಬಹಳ ಉತ್ತಮ. ಯೇಸು ಹೇಳಿದ್ದು

''ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು, ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ''. (ಮತ್ತಾಯ 5:30). ಯೇಸುವು ವಾಸ್ತವ ದೇಹದ ವಸ್ತುಗಳ ಕುರಿತು ಮಾತನಾಡಲಿಲ್ಲ, ಆದರೆ ನಾವು ಪಾಪಮಾಡುವಂತೆ ಕಾರಣವಾದ ವಸ್ತುಗಳ ಕುರಿತು ತಿಳಿಸಿದ್ದಾನೆ. ಇಂತಹ ವಿಷಯಗಳಿಂದ ''ಕಡಿದು ಬಿಸಾಟು ಬಿಡು''ವುದು ಬಹಳ ಕ್ರೂರವಾಗಿರಬಹುದು. ಶರೀರಕ್ಕೆ ಯಾವುದೇ ಪೂರ್ವಸಿದ್ಧತೆ ಮಾಡದಿರಿ. ಒಂದು ಸಾರಿ ಪಶ್ಚಾತ್ತಾಪಪಟ್ಟ ಮೇಲೆ ವೈರಿಯು ತಿರುಗಿ ಬರಲು ಅವಕಾಶ ನೀಡದಿರಿ. ಅಥವಾ ಮೊದಲ ಸ್ಥಿತಿಗಿಂತ ಏಳು ಪಟ್ಟು ಕೆಡುಕು ಉಂಟಾಗುವ ಅವಸ್ಥೆಯಲ್ಲಿ ನೀವು ಕೊನೆಗೊಳ್ಳುತ್ತೀರಿ. (ಪಶ್ಚಾತ್ತಾಪದ ಬಗ್ಗೆ ನೀವು ಗಂಭೀರವಾಗಿಲ್ಲದಿದ್ದರೆ ಪಶ್ಚಾತ್ತಾಪ ಪಡಬೇಡಿರಿ)

**ಕೆಲವು ಪ್ರಾಯೋಗಿಕ ವಿಷಯಗಳನ್ನು ಮಾಡಿರಿ**

ನಮ್ಮ ಕೆಲವು ಕ್ಷೇತ್ರಗಳಿಂದ ಹೊರಬರಲು ದೇವಜನರ ಸಹಾಯ, ನೆರವು ಮತ್ತು ಬಲಗಳು ಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಒಂದು ಅವಶ್ಯಕತೆಯನ್ನು ಗುರ್ತಿಸುವುದು, ಮತ್ತು ಜಯಶಾಲಿಯಾಗಿ ಜೀವಿಸಲು ಉತ್ತಮ ಜನರೊಂದಿಗೆ ನಿಮ್ಮನ್ನು ಆವರಿಸಿಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ. ಪ್ರತಿಯೊಬ್ಬರಿಗೂ ಇದು ಬೇಕು. ನಮ್ಮ ಸಭೆಯಲ್ಲಿ ಸಣ್ಣ (ಸೆಲ್ ಗ್ರೂಪ್) ಗುಂಪುಗಳನ್ನು ಹೊಂದಿರುವುದಕ್ಕೆ ಇದೊಂದು ಕಾರಣವಾಗಿದೆ.

**ಇನ್ನು ಕೆಲವು ಹೆಚ್ಚಿನ ಪ್ರಾಯೋಗಿಕ ವಿಷಯಗಳನ್ನು ನೀವು ಮಾಡಬೇಕಾದುದೆಂದರೆ:**

*ಸ್ತ್ರೀಯರನ್ನು ನೋಡಿ ದುರಾಶೆ ಪಡುವುದನ್ನು ನಿರಾಕರಿಸಿರಿ.*

''**ನಿನ್ನ ಹೃದಯವು ಅವಳ ಚೆಡಗನ್ನು ಮೋಹಿಸದಿರಲಿ, ಅವಳು ತನ್ನ ಕಣ್ಣು ರೆಪ್ಪೆಗಳಿಂದ ನಿನ್ನನ್ನು ವಶಮಾಡಿಕೊಂಡಾಳು, ನೋಡಿಕೋ.**'' (ಜ್ಞಾನೋಕ್ತಿಗಳು 6:25).

*ನಿಮಗೆ ಇರುವುದರಲ್ಲೇ ತೃಪ್ತಿಯಾಗಿರಿ.*

**ದ್ರವ್ಯಾಶೆಯಿಲ್ಲದವರಾಗಿರಿ, ನಿಮಗಿರುವವುಗಳಲ್ಲಿ ತೃಪ್ತರಾಗಿರಿ, ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ.** (ಇಬ್ರಿಯರಿಗೆ 13:5)

''**ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ**'' (1 ತಿಮೊಥೆಯನಿಗೆ 6:6).

*ಅಸಂತುಷ್ಟಿ ಸಹಿತವಾದ ಭಕ್ತಿಯನ್ನು ಮತ್ತು ಪ್ರಾಪಂಚಿಕ ದುರಾಶೆಗಳನ್ನು ತೊರೆಯಿರಿ. ಶಾಂತಚಿತ್ತದ ಜೀವಿತ, ನೀತಿವಂತಿಕೆಯ ಮತ್ತು ಭಕ್ತಿಯ ಜೀವಿತಗಳನ್ನು ನಡೆಸಿರಿ.*

**ನಾವು ಭಕ್ತಿ ಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ''** (ತೀತನಿಗೆ 2:12)

*ಆತ್ಮಭರಿತರಾಗಿ ನಡೆದರೆ ಶರೀರದ ದುರಿಚ್ಛೆಗಳನ್ನು ನೆರವೇರಿಸುವುದಿಲ್ಲ.*

**''ನಾನು ಹೇಳುವುದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಯಾಕೆಂದರೆ ಶರೀರ ಭಾವವು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ. ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆ ಹಾಕಿದವರು''** (ಗಲಾತ್ಯದವರಿಗೆ 5:16, 17, 24)

*ನಿಮ್ಮ ಹೃದಯವನ್ನು ದೇವರ ವಾಕ್ಯದ ಕಡೆಗೆ ವಾಲಿಸಿರಿ ಮತ್ತು ನೀವು ಲೋಭದಿಂದ ಬಿಡುಗಡೆ ಹೊಂದುವಿರಿ.*

**''ನನ್ನ ಮನಸ್ಸನ್ನು ದ್ರವ್ಯಾಶೆಗಲ್ಲ ನಿನ್ನ ಕಟ್ಟಳೆಗಳಿಗೆ ತಿರುಗಿಸು''** (ಕೀರ್ತನೆ 119:36).

ಸಂಪೂರ್ಣವಾಗಿ ದೇವರಿಗೆ ಸಂತುಷ್ಟಿ ಸಹಿತವಾಗಿ, ಪರಿಶುದ್ಧವಾಗಿ ಮತ್ತು ಪವಿತ್ರವಾಗಿರುವ ಭಕ್ತಿಯ ಜೀವಿತವನ್ನು ಸೈತಾನನು ನೋಡಿ ಹೆದರುತ್ತಾನೆ. ಮುದ್ದಿನ ಪಾಪಗಳಿರುವವರು, ಅಭಿಷೇಕರಾಗಿದ್ದರೂ, ವರಗಳನ್ನು ಹೊಂದಿದ್ದರೂ, ಅದರಲ್ಲಿರುವವರೆಗೂ ಸೈತಾನನು ಅವರಿಗೆ ಹೆದರುವುದಿಲ್ಲ. ಬದಲಾಗಿ ಅವುಗಳಲ್ಲಿ ಸಂತೋಷಪಡುತ್ತಾನೆ ಯಾಕೆಂದರೆ ಕೌಶಲ್ಯಯುತವಾಗಿ ''ಅವರನ್ನು ಕೆಳಗೆ ಬೀಳಿಸಬಹುದು'' ಅವರ ಬೀಳುವಿಕೆಯ ವಿನಾಶವನ್ನು ಅತಿದೊಡ್ಡದಾಗಿ ಮಾಡಿ, ಇನ್ನು ಅನೇಕ ಕ್ರೈಸ್ತರನ್ನು ಸುತ್ತುವರೆಯುವಂತೆ ಅಥವಾ ಬೀಳುವಂತೆ ಮಾಡುವುದು ಸೈತಾನನ ಕಾರ್ಯವಾಗಿದೆ. ಹೇಗಿದ್ದರೂ, ಸೈತಾನನು ಭಕ್ತಿಯ ಜೀವಿತವು ಅಭೇದ್ಯ ಅಥವಾ ದಾಳಿಗೆ ಬಗ್ಗದ್ದು ಎಂಬುದಾಗಿ ತಿಳಿಯುತ್ತಾನೆ, ಈ ರಕ್ಷಣೆಯನ್ನು ಅವನು ಭೇದಿಸಿಕೊಂಡು ಹೋಗಲು ಸಾಧ್ಯವಿಲ್ಲ.

**ದುರಿಚ್ಛೆಯ ಬಲವನ್ನು ಮುರಿಯುವುದು**

- ಸತ್ಯವನ್ನು ಅಂಗೀಕರಿಸುವುದರಿಂದ
- ಅರಿಕೆ ಮಾಡಿ, ಪಶ್ಚಾತ್ತಾಪಪಟ್ಟು ಪಾಪವನ್ನು ಬಿಟ್ಟುಬಿಡುವುದರಿಂದ
- ಶರೀರಕ್ಕೆ ಪೂರ್ವಸಿದ್ಧತೆ ಮಾಡದಿರುವುದರಿಂದ
- ದೇವಜನರ ಸಹಾಯವನ್ನು, ಬಲವನ್ನು ನೆರವನ್ನು ಪಡೆದು ಹೊರಬರಲು ಸಹಾಯ ಪಡೆಯುವುದರಿಂದ
- ಸ್ತ್ರೀ/ಪುರುಷರ ಮೇಲಿನ ದುರಿಚ್ಛೆಯನ್ನು ತ್ಯಜಿಸುವುದರಿಂದ
- ಭಕ್ತಿಹೀನತೆಯನ್ನು ನಿರಾಕರಿಸುವುದು ಮತ್ತು ಪ್ರಾಪಂಚಿಕ ದುರಾಶೆಗಳ ತಿರಸ್ಕಾರ ಮತ್ತು ಶಾಂತಿಚಿತ್ತ, ನೀತಿವಂತಿಕೆಯ ಮತ್ತು ಭಕ್ತಿಯ ಜೀವಿತ ಮಾಡುವುದರಿಂದ
- ನಿಮ್ಮ ಹೃದಯವನ್ನು ದೇವರಕಡೆಗೆ ವಾಲಿಸುವುದರಿಂದ ಮತ್ತು ಲೋಭದಿಂದ ಬಿಡುಗಡೆ ಹೊಂದಿರುವುದರಿಂದ

## ಪ್ರಾರ್ಥನೆ, ಅರಿಕೆ, ಪಶ್ಚಾತ್ತಾಪ ಮತ್ತು ಪರಿತ್ಯಾಗ

*ಪರಲೋಕದ ತಂದೆಯೇ, ಯೇಸುಕ್ರಿಸ್ತನ ಹೆಸರಿನಲ್ಲಿ ನಿನ್ನ ಬಳಿ ಬರುತ್ತೇನೆ. ಯೇಸುಕ್ರಿಸ್ತನ ಪ್ರಭುತ್ವಕ್ಕೆ ನನ್ನನ್ನು ನಾನು ಸಂಪೂರ್ಣವಾಗಿ ಸಮರ್ಪಿಸಲಿಲ್ಲ. ನಾನು ಸ್ವ ಹೊಟ್ಟೆಕಿಚ್ಚು, ಅಹಂಕಾರ, ಗರ್ವ, ದುರಿಚ್ಛೆ, ಪಾಪದ ಬಗ್ಗೆ ಸೌಮ್ಯತೆ ಮುಂತಾದ ಕ್ಷೇತ್ರಗಳಲ್ಲಿ ನನ್ನನ್ನು ಕರ್ತನಿಗೆ ಒಪ್ಪಿಸಿಕೊಡಲಿಲ್ಲ ಎಂದು ನಾನು ಅರಿಕೆ ಮಾಡುತ್ತೇನೆ. ಈ ದಿನ ಯೇಸುವಿನ ಹೆಸರಿನಲ್ಲಿ, ನನ್ನನ್ನು ಕ್ಷಮಿಸು ಮತ್ತು ಯೇಸುವಿನ ಪವಿತ್ರ ರಕ್ತದಿಂದ ನನ್ನನ್ನು ಸಂಪೂರ್ಣವಾಗಿ ತೊಳೆದು ಬಿಡು ಎಂಬುದಾಗಿ ನಾನು ಕೇಳಿಕೊಳ್ಳುತ್ತೇನೆ.*

**ಹವ್ಯಾಸ ಮಾಡಿಕೊಂಡಿರುವ ಚಟಗಳಾದ ಕೆಲವು ನಿರ್ಧಿಷ್ಟ ರೂಢಿಗಳ, ಪಾಪಗಳ, ನಡವಳಿಕೆಗಳ ಮಾದರಿಗಳ, ಚಟಗಳ ಹೆಸರುಗಳನ್ನು ಕರ್ತನ ಮುಂದೆ ಅರಿಕೆ ಮಾಡಿ ಪಶ್ಚತ್ತಾಪ ಪಡಿರಿ.**

ಪವಿತ್ರಾತ್ಮನ ಬಲದಿಂದಲೂ ಮತ್ತು ಯೇಸುವಿನ ಹೆಸರಿನಿಂದಲೂ ನನ್ನ ಜೀವಿತದ ಮೇಲಿರುವ ದೆವ್ವಗಳ ಪ್ರತಿಯೊಂದು ಪ್ರಭಾವವನ್ನು ನಾನು ಬಂಧಿಸುತ್ತೇನೆ. ನಾನು ಅಶುದ್ಧ ಆತ್ಮಗಳು ಮತ್ತು ವ್ಯತಿರಿಕ್ತವಾದ ಆತ್ಮಗಳನ್ನು ತಿರಸ್ಕರಿಸುತ್ತೇನೆ. ಮತ್ತು ನನ್ನ ಜೀವಿತದಲ್ಲಿ ಕರ್ತನಾದ ದೇವರ ಸನ್ಮಾರ್ಗ ಬಿಟ್ಟು ಹೋಗುವುದಿಲ್ಲ. ನಾನು ಸಂಪೂರ್ಣ ದೈವಭಕ್ತಿಯನ್ನು ಯೇಸುಕ್ರಿಸ್ತನಿಗೆ ನೀಡುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ. ನನ್ನ ಜೀವಿತದ ದೇವರ ಸ್ಥಾನವನ್ನು ತೆಗೆದುಕೊಳ್ಳುವ ಎಲ್ಲಾ ವಿಷಯಗಳನ್ನು ನಿರಾಕರಿಸುತ್ತೇನೆ. ಎಲ್ಲಾ ಬಗೆಯ ವಿಗ್ರಹಾರಾಧನೆಗಳನ್ನು ಮುರಿದು ಹಾಕುತ್ತೇನೆ ಮತ್ತು ನಾನು ಅವುಗಳನ್ನು ಬಿಟ್ಟುಬಿಡುತ್ತೇನೆ. ಸತ್ಯ ಮತ್ತು ಜೀವಿಸುವ ದೇವರನ್ನು ಅಣಕಿಸುವ ಯಾವುದನ್ನೂ ಅಂಗೀಕರಿಸದೆ ತ್ಯಜಿಸುತ್ತೇನೆ - ಆದರೆ ಆತನನ್ನೆ ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಲು ಆರಿಸಿಕೊಳ್ಳುತ್ತೇನೆ.

ನಾನು ಬಂಧನಗಳ ಆತ್ಮಗಳನ್ನು ತಿರಸ್ಕರಿಸುತ್ತೇನೆ. ಯೇಸುವಿನ ಹೆಸರಿನಲ್ಲಿಯೂ, ಯೇಸುವಿನ ರಕ್ತದಲ್ಲಿಯೂ ಪವಿತ್ರಾತ್ಮನ ಬಲದಿಂದಲೂ ನನ್ನ ಜೀವಿತದಲ್ಲಿರುವ ಎಲ್ಲಾ ಬಗೆಯ ಪಾಪಯುತ ಬಂಧನಗಳನ್ನು ನಾನು ಮುರಿದು ಹಾಕುತ್ತೇನೆ. ನಾನು, ನಿಯಂತ್ರಿಸಲಾಗದ ಇಚ್ಛೆಗಳು ಮತ್ತು ಚಟಗಳನ್ನು, ಎಲ್ಲಾ ಬಗೆಯ ನಿರ್ಬಂಧಪಡಿಸುವ ಹವ್ಯಾಸಗಳನ್ನು ನಾಶಪಡಿಸುತ್ತೇನೆ. ಯೇಸುವಿನ ಹೆಸರಿನಲ್ಲಿ ನಾನು ಸ್ವತಂತ್ರನಾಗಿದ್ದೇನೆ, ಕ್ರಿಸ್ತನು ನನ್ನನ್ನು ಸ್ವತಂತ್ರದಲ್ಲಿರಿಸಿದ್ದಾನೆ !

ನಾನು, ಅವಿಧೇಯತೆಯ ಆತ್ಮ ಮತ್ತು ಅವಿಧೇಯತೆ ಮತ್ತು ಸತ್ಯಕ್ಕೆ ವಿರುದ್ಧವಾಗಿ ದಂಗೆ ಏಳುವುದನ್ನು ನಿರಾಕರಿಸುತ್ತೇನೆ. ನಾನು ಸತ್ಯವನ್ನು ಅಂಗೀಕರಿಸುತ್ತೇನೆ ಮತ್ತು ದೇವರ ವಾಕ್ಯದ ಸತ್ಯಕ್ಕೆ ನನ್ನನ್ನು ಒಪ್ಪಿಸಿಕೊಡುತ್ತೇನೆ. ನಾನು ಇಹಲೋಕದ ಆತ್ಮನನ್ನು ತಿರಸ್ಕರಿಸುತ್ತೇನೆ ಮತ್ತು ಪ್ರಪಂಚವನ್ನು ಅನುಸರಿಸುವದನ್ನು ನಿರಾಕರಿಸುತ್ತೇನೆ. ನಾನು ವಂಚಿಸುವ ಆತ್ಮಗಳ ಪ್ರಭಾವವನ್ನು ತೆಗೆದುಹಾಕುತ್ತೇನೆ. ಮತ್ತು ಇಹಲೋಕದ ಆಕರ್ಷಣೆಗಳಿಗೆ ಫಲಿಸದಂತೆ ಅವುಗಳನ್ನು ನಿರಾಕರಿಸುತ್ತೇನೆ.

ಪವಿತ್ರಾತ್ಮನ ಬಲದಿಂದಲೂ ಮತ್ತು ದೇವರ ವಾಕ್ಯದ ಬಲದಿಂದಲೂ ನನ್ನ ಜೀವಿತದಲ್ಲಿರುವ ಎಲ್ಲಾ ಬಗೆಯ ಹಿಡಿತಗಳನ್ನು ಮತ್ತು ಅದರ ಅಡಿಪಾಯಗಳನ್ನು ತೆಗೆದು ನಾಶಗೊಳಿಸುತ್ತೇನೆ. ಈ ಹಿಡಿತಗಳು ಅಸ್ತಿತ್ವದಲ್ಲಿದ್ದ ಎಲ್ಲಾ ಕ್ಷೇತ್ರಗಳಲ್ಲೂ ಆತನ ಸತ್ಯತೆ ಮತ್ತು ನೀತಿವಂತಿಕೆಯನ್ನು ಕರ್ತನಾದ ಯೇಸು ಸ್ಥಾಪಿಸಲೆಂದು ನಾನು

*ಆತನಿಗೆ ಅವಕಾಶ ನೀಡುತ್ತೇನೆ. ದೇವರ ವಾಕ್ಯ, ಆತನ ಪ್ರಸನ್ನತೆ, ಆತನ ಸತ್ಯವು ನನ್ನ ಜೀವಿತಗಳ ಹಿಡಿತವಾಗಿರಲಿ. ಪವಿತ್ರಾತ್ಮನೇ ನನ್ನನ್ನು ಸತ್ಯದೆಡೆಗೆ ಪವಿತ್ರತೆ ಮತ್ತು ಪರಿಶುದ್ಧತೆಗಳ ಕಡೆಗೆ ಮಾರ್ಗದರ್ಶನ ನೀಡಿ ನಡೆಸು ಯೇಸುವಿನ ಹೆಸರಿನಲ್ಲಿ - ಆಮೇನ್*

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಟ್ರಾಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್‌ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ➢ ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ➢ ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

‘‘**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**’’ (ಅಪೊಸ್ತಲರ ಕೃತ್ಯ 10:43)

‘‘**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**’’ (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ‘‘ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ’’ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*